ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜನವರಿ 10 ಶನಿವಾರ 2026

46

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 263 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಬೃಹತ್ ಮೈಸೂರು ಮಹಾನಗರ ಪಾಲಿಕೆ

ರಾಜ್ಯ ಸರ್ಕಾರದ ಅಧಿಸೂಚನೆ ಪ್ರಕಟ; ಆಕ್ಷೇಪಣೆ ಸಲ್ಲಿಕೆಗೆ 30 ದಿನ ಗಡುವು

● ಮೈಸೂರು ಪಾಲಿಕೆ ಜೊತೆಗೆ ನಾಲ್ಕು ಪಪಂ, 1 ನಗರಸಭೆ, ಹಲವು ಗ್ರಾಪಂ ಸೇರ್ಪಡೆ ● ಒಟ್ಟು 321.44 ಚದರ ಕಿಮೀ ಪ್ರದೇಶ ಒಳಗೊಂಡ ಬೃಹತ್ ನಗರ ಪಾಲಿಕೆ

ಮೈಸೂರು, ಜ.9– ಬಹುನಿರೀಕ್ಷಿತ 'ಬೃಹತ್ ಮೈಸೂರು ಮಹಾನಗರ ಪಾಲಿಕೆ' ರಚನೆ ಸಂಬಂಧ ರಾಜ್ಯ ಸರ್ಕಾರ ಶುಕ್ರವಾರ ಅಧಿಸೂಚನೆ ಪ್ರಕಟಿಸಿದೆ.

ಈ ಸಂಬಂಧ ಅಧಿಕೃತ ರಾಜ್ಯಪತ್ರ ಹೊರಡಿಸಿದ್ದು, ಮೈಸೂರು ಮಹಾನಗರ ಪಾಲಿಕೆಗೆ 'ಬೃಹತ್ ಮೈಸೂರು ಮಹಾನಗರ ಪಾಲಿಕೆ' ಎಂದು ಮರುನಾಮಕರಣ ಮಾಡುವುದರೊಂದಿಗೆ ಇದಕ್ಕೆ ಯಾವೆಲ್ಲಾ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯ ಎಷ್ಟು ಗ್ರಾಮಗಳನ್ನು ಸೇರ್ಪಡೆಗೊಳಿಸಲು ಉದ್ದೇಶಿಸಲಾಗಿದೆ ಹಾಗೂ ನಿರ್ದಿಷ್ಟಪಡಿಸಲಾಗಿರುವ ಪರಿಮಿತಿಯನ್ನು ಸರ್ವೆ ನಂಬರ್‌ಗಳ ಸಹಿತ ಎರಡು ಶೆಡ್ಯೂಲ್‌ಗಳಲ್ಲಿ ವಿವರಿಸಲಾಗಿದೆ.

ರಾಜ್ಯಪತ್ರ ಪ್ರಕಟಿಸಿದ ದಿನಾಂಕದಿಂದ ಜಾರಿಗೆ ಬರುವಂತೆ ಆಡಳಿತಾತ್ಮಕ ದೃಷ್ಟಿಯಿಂದ 'ದೊಡ್ಡ ನಗರ ಪ್ರದೇಶ' ಎಂದು ಉದ್ಘೋಷಿಸಿ, ಸದರಿ ಸಂಪೂರ್ಣ ದೊಡ್ಡ ನಗರ ಪ್ರದೇಶವನ್ನು 'ಬೃಹತ್ ಮೈಸೂರು ಮಹಾನಗರ ಪಾಲಿಕೆ' ಎಂದು ಪದನಾಮೀಕರಿಸಲು ಹಾಗೂ ಸದರಿ ದೊಡ್ಡ ನಗರ ಪ್ರದೇಶಕ್ಕೆ 'ಮಹಾನಗರ ಪಾಲಿಕೆ' ಸ್ಥಾಪಿಸಲು ಉದ್ದೇಶಿಸಲಾಗಿದೆ. ಈ ಅಧಿಸೂಚನೆಯನ್ನು ಸಾರ್ವಜನಿಕರ ಮಾಹಿತಿಗಾಗಿ ಪ್ರಕಟಿಸಲಾಗಿದ್ದು, ಯಾವುದೇ




ಆಕ್ಷೇಪಣೆ ಅಥವಾ ಸಲಹೆಗಳನ್ನು ಸಲ್ಲಿಸಲು ಇಚ್ಛಿಸುವವರು ಲಿಖಿತ ಕಾರಣ ಸಹಿತ ರೂಪದಲ್ಲಿ ಇಂದಿನಿಂದ 30 ದಿನಗಳೊಳಗೆ ಸಲ್ಲಿಸುವಂತೆ ಸೂಚಿಸಲಾಗಿದೆ. ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, 9ನೇ ಮಹಡಿ, ವಿ.ವಿ.ಗೋಪುರ, ಬೆಂಗಳೂರು– ಈ ವಿಳಾಸಕ್ಕೆ ಆಕ್ಷೇಪಣೆ ಅಥವಾ ಸಲಹೆ ಸಲ್ಲಿಸಿದರೆ, ತುರುವಾಯ ನಿಗದಿತ ಸಮಯದಲ್ಲಿ ಅಧಿಸೂಚನೆಯನ್ನು ಪರಿಶೀಲನೆಗೆ ತೆಗೆದುಕೊಳ್ಳಲಾಗುವುದು ಎಂದು ನಗರಾಭಿವೃದ್ಧಿ ಇಲಾಖೆ ಸರ್ಕಾರದ ಅಧೀನ ಕಾರ್ಯದರ್ಶಿ

ರಾಜ್ಯಪತ್ರದ ಅನ್ವಯ ಮೈಸೂರು ಮಹಾನಗರ ಪಾಲಿಕೆಯು ಇಂದಿನಿಂದ 'ಬೃಹತ್ ಮೈಸೂರು ಮಹಾನಗರ ಪಾಲಿಕೆ'ಯಾಗಿದ್ದು, 86.31 ಚದರ ಕಿ.ಮೀ.ನಷ್ಟಿರುವ ಪಾಲಿಕೆ ವ್ಯಾಪ್ತಿ 341.44 ಚದರ ಕಿ.ಮೀ.ಗೆ ಹಿಗ್ಗಿದೆ. ಸದ್ಯ ಸುಮಾರು 12 ಲಕ್ಷದಷ್ಟಿರುವ ಜನಸಂಖ್ಯೆಗೆ ಇನ್ನೂ ಮೂರು ಲಕ್ಷ ಸೇರ್ಪಡೆಯಾಗುವ ಸಾಧ್ಯತೆ ಇದೆ ಎನ್ನಲಾಗಿದೆ.

ಟಿ.ಮಂಜುನಾಥ್ ಅಧಿಸೂಚನೆಯಲ್ಲಿ ತಿಳಿಸಿದ್ದಾರೆ.

ಉದ್ದೇಶಿತ ಪ್ರದೇಶಗಳು: ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿ ಜೊತೆಗೆ ಹೂಟಗಳ್ಳಿ ನಗರಸಭೆ, ಶ್ರೀರಾಂಪುರ ರಮ್ಮನಹಳ್ಳಿ, ಕಡಕೊಳ ಮತ್ತು ಬೋಗಾದಿ ಪಟ್ಟಣ ಪಂಚಾಯಿತಿಗಳು, ಚಾಮುಂಡಿಬೆಟ್ಟ ಗ್ರಾಮ ಪಂಚಾಯಿತಿ (ಪೂರ್ಣ), ಆಲನಹಳ್ಳಿ ಗ್ರಾಮ ಪಂಚಾಯ್ತಿಯ ಆಲನಹಳ್ಳಿ ಮತ್ತು ಲಲಿತಾದ್ರಿಪುರ ಗ್ರಾಮ, ಸಿದ್ದಲಿಂಗಪುರ ಗ್ರಾಪಂನ ಸಿದ್ದಲಿಂಗಪುರ, ಬೆಲವತ್ತ, ಕೆಸರೆ, ಮೇಟಗಳ್ಳಿ ಗ್ರಾಮ, ಇಲವಾಲ ಗ್ರಾಪಂನ ಇಲವಾಲ, ಕರಕನಹಳ್ಳಿ,



ಮೈದನಹಳ್ಳಿ, ಮೇಗಳಾಪುರ ಗ್ರಾಮ, ಧನಗಳ್ಳಿ ಗ್ರಾಪಂನ ಧನಗಳ್ಳಿ, ಯಡಹಳ್ಳಿ, ಕೆಂಚಲಗೂಡು, ಹಾಲಾಳು, ಚೌಡಹಳ್ಳಿ (ಕೋಟೆಹುಂಡಿ) ಗ್ರಾಮ, ಮಲ್ಲಹಳ್ಳಿ(ಬೀಡಿಹುಂಡಿ) ಗ್ರಾಪಂನ ಮೆಲ್ಲಹಳ್ಳಿ–ಬೀರಿಹುಂಡಿ, ಗೋಹಳ್ಳಿ, ಕುಮಾರ ಬೀಡು, ಬಲ್ಲಹಳ್ಳಿ ಗ್ರಾಮ, ನಾಗನಹಳ್ಳಿ ಗ್ರಾಪಂನ ಶ್ಯಾದನಹಳ್ಳಿ, ನಾಗವಾಲ ಗ್ರಾಪಂನ ನಾಗವಾಲ, ಬೊಮ್ಮನಹಳ್ಳಿ, ಹುಯಿಲಾಳು ಗ್ರಾಮಗಳು ಸೇರಿದಂತೆ ಒಟ್ಟು 321.44 ಚದರ ಕಿ.ಮೀ. ಒಟ್ಟು ಪ್ರದೇಶವನ್ನು ಒಳಗೊಂಡ ಬೃಹತ್ ಮಹಾ ನಗರ ಪಾಲಿಕೆ ಸ್ಥಾಪನೆಗೆ ಉದ್ದೇಶಿಸಲಾಗಿದೆ.

ಮುಖ್ಯಮಂತ್ರಿ ಸಭೆ: ಕಳೆದ ನವೆಂಬರ್‌ನಲ್ಲಿ ಗ್ರೇಟರ್ ಮೈಸೂರು ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಈ ಭಾಗದ ಜನಪ್ರತಿನಿಧಿಗಳು ಹಾಗೂ ಜಿಲ್ಲಾಡಳಿತದ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಚರ್ಚಿಸಿದ್ದರು. ಗ್ರೇಟರ್ ಮೈಸೂರು ಆಗಬೇಕೆಂಬುದು ಎಲ್ಲರ ಆಶಯ. ಆದರೆ ಈಗಿನ ಮೈಸೂರಿನ ಘನತೆ, ಸಂಸ್ಕೃತಿ, ವಿಶಾಲತೆಗೆ ಧಕ್ಕೆ ಆಗಬಾರದು. ಯಾವುದೇ ಗೊಂದಲ ಉಂಟುಮಾಡದಂತೆ ಸ್ಪಷ್ಟ ವೈಜ್ಞಾನಿಕ ಬ್ಲೂಪ್ರಿಂಟ್ ಸಿದ್ಧಪಡಿಸಬೇಕು. ಮುಂದಿನ 15–20 ವರ್ಷಗಳ ಮುಂದಾಲೋಚನೆಯೊಂದಿಗೆ ವೈಜ್ಞಾನಿಕವಾಗಿ ಯೋಜನೆ ರೂಪಿಸಬೇಕೆಂದು ಅಧಿಕಾರಿಗಳಿಗೆ ಸೂಚಿಸಿದ್ದರು. ಕೆಲ ದಿನಗಳ ಹಿಂದೆ ಪಾಲಿಕೆಯಲ್ಲಿ ಸಭೆ ನಡೆಸಿದ್ದ ಚಾಮುಂಡೇಶ್ವರಿ ಶಾಸಕ ಜಿ.ಟಿ. ದೇವೇಗೌಡರು, ಗ್ರೇಟರ್ ಮೈಸೂರು ಸಂಬಂಧ ಯಾವಾಗಲಾದರೂ ಸರ್ಕಾರ ಅಧಿಸೂಚನೆ ಪ್ರಕಟಿಸಬಹುದು, ಈ ನಿಟ್ಟಿನಲ್ಲಿ ಅಧಿಕಾರಿಗಳು ಸಜ್ಜಾಗಿರಬೇಕು. ಗ್ರೇಟರ್ ಮೈಸೂರು ಅನುಷ್ಠಾನದಿಂದ ಮೂಲಸೌಕರ್ಯ ಹಾಗೂ ಸಮಗ್ರ ಅಭಿವೃದ್ಧಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಂದ ಸಾಕಷ್ಟು ಅನುದಾನ ದೊರಕುತ್ತದೆ ಎಂದು ತಿಳಿಸಿದ್ದರು.

ಈ ನಡುವೆ ಚಾಮುಂಡಿಬೆಟ್ಟ ಗ್ರಾಮ ಪಂಚಾಯ್ತಿಯನ್ನು ಗ್ರೇಟರ್ ಮೈಸೂರು ವ್ಯಾಪ್ತಿಯಿಂದ ಕೈಬಿಡುವಂತೆ ಅಲ್ಲಿನ ಸ್ಥಳೀಯ ನಿವಾಸಿಗಳು ಹಾಗೂ ಪರಿಸರವಾದಿಗಳು ಆಗ್ರಹಿಸಿದ್ದರು. ಈ ಸಂಬಂಧ ಮುಖ್ಯಮಂತ್ರಿಗಳಿಗೂ ಮನವಿ ಸಲ್ಲಿಸಲಾಗಿತ್ತು. ಇದೀಗ ಬೃಹತ್ ಮೈಸೂರು ಮಹಾನಗರ ಪಾಲಿಕೆ ರಚನೆ ಸಂಬಂಧ ಸರ್ಕಾರ ಅಧಿಸೂಚನೆ ಹೊರಡಿಸಿದೆ.

ಬೇಸಿಗೆಯಲ್ಲಿ ವಿದ್ಯುತ್ ವ್ಯತ್ಯಯವಾಗಬಾರದು

■ ಇಂಧನ ಇಲಾಖೆ ಅಧಿಕಾರಿಗಳಿಗೆ ಸಚಿವ ಜಾರ್ಜ್ ಸೂಚನೆ
■ ಕೃಷಿ ಪಂಪ್‌ಸೆಟ್‌ಗಳಿಗೆ ಹಗಲು ವೇಳೆ 7 ಗಂಟೆ ವಿದ್ಯುತ್ ಪೂರೈಕೆ

ಬೆಂಗಳೂರು, ಜ.9– ಮುಂಬರುವ ಬೇಸಿಗೆಯಲ್ಲಿ ಬೇಡಿಕೆಗೆ ಅನುಸಾರವಾಗಿ ಸಮರ್ಪಕ ವಿದ್ಯುತ್ ಸರಬರಾಜಿಗೆ ಅಗತ್ಯ ಸಿದ್ಧತೆಗಳನ್ನು ಮಾಡಿಕೊಂಡು ಯಾವುದೇ ಕಾರಣಕ್ಕೂ ಲೋಡ್ ಶೆಡ್ಡಿಂಗ್‌ಗೆ ಅವಕಾಶವಾಗದಂತೆ ನೋಡಿಕೊಳ್ಳಬೇಕು ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ಇಂಧನ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದ್ದಾರೆ.



ಬೇಸಿಗೆಯಲ್ಲಿ ಸಮರ್ಪಕ ವಿದ್ಯುತ್ ಪೂರೈಕೆಗೆ ಸಂಬಂಧಿಸಿದಂತೆ ಬೆಸ್ಕಾಂನ ಬೆಳಕು ಭವನದಲ್ಲಿ ಶುಕ್ರವಾರ ಇಲಾಖೆ ಹಿರಿಯ ಅಧಿಕಾರಿಗಳ ಜತೆ ಸಭೆ ನಡೆಸಿದ ಸಚಿವರು, ಇಲಾಖೆ ಕೈಗೊಂಡಿರುವ ಪೂರ್ವ ಸಿದ್ಧತೆಗಳ ಬಗ್ಗೆ ಮಾಹಿತಿ ಪಡೆದರಲ್ಲದೆ, ಬೇಡಿಕೆ ಮತ್ತು ಪೂರೈಕೆಯಲ್ಲಿ ಸಮನ್ವಯತೆ ಸಾಧಿಸಲು ಅಗತ್ಯವಿರುವ ವಿದ್ಯುತ್ ಉತ್ಪಾದನೆ ಮತ್ತು ಖರೀದಿಗೆ ಕ್ರಮ ಕೈಗೊಳ್ಳಬೇಕು ಎಂದು ತಿಳಿಸಿದರು.

ಬೇಸಿಗೆಯಲ್ಲಿ ಅದರಲ್ಲೂ ಮುಖ್ಯವಾಗಿ ಮಾರ್ಚ್‌ನಿಂದ ಮೇ ಅಂತ್ಯದವರೆಗೆ ಮೂರು ತಿಂಗಳಲ್ಲಿ ವಿದ್ಯುತ್ ಬೇಡಿಕೆ ಎಷ್ಟಾಗಬಹುದು ಎಂಬುದನ್ನು ಈಗಲೇ ಲೆಕ್ಕಾಚಾರ ಮಾಡಿ ಅದಕ್ಕೆ ತಕ್ಕಂತೆ ಪೂರೈಸಲು ವಿದ್ಯುತ್ ಬ್ಯಾಂಕಿಂಗ್ ವ್ಯವಸ್ಥೆ ಮಾಡಿಕೊಳ್ಳಬೇಕು. ಹಗಲು ವೇಳೆ ಸೌರ ವಿದ್ಯುತ್ ಹೇರಳವಾಗಿ ಲಭ್ಯವಿರುವುದರಿಂದ ಅದನ್ನು ಬಳಸಿಕೊಂಡು ರಾತ್ರಿ ವೇಳೆ ಜಲ ಮತ್ತು ಕಲ್ಲಿದ್ದಲು ಆಧಾರಿತ ವಿದ್ಯುತ್ ಉತ್ಪಾದನೆಯನ್ನು ಹೆಚ್ಚಿಸುವ ಮೂಲಕ ಪೂರೈಕೆಯಲ್ಲಿ ಸಮತೋಲನ ಕಾಯ್ದು ಕೊಳ್ಳಬೇಕು ಎಂದು ಹೇಳಿದರು. ಬೇಡಿಕೆಗೆ ತಕ್ಕಂತೆ ವಿದ್ಯುತ್

> **ಲಭ್ಯ ವಿದ್ಯುತ್ತನ್ನು ಸಮರ್ಪಕ ರೀತಿಯಲ್ಲಿ ಪ್ರಸರಣ ಮತ್ತು ಸರಬರಾಜು ಮಾಡಲು ಅಗತ್ಯ ಮೂಲ ಸೌಕರ್ಯಗಳನ್ನು ಈಗಲೇ ಸಿದ್ಧ ಮಾಡಿಕೊಳ್ಳಬೇಕು. ಓವರ್ ಲೋಡ್ ಸಮಸ್ಯೆ ಇರುವ ಪ್ರದೇಶಗಳನ್ನು ಗುರುತಿಸಿ ಅದಕ್ಕೆ ಪರಿಹಾರ ಕಂಡುಕೊಳ್ಳಬೇಕು. ಲಿಂಕ್ ವ್ಯವಸ್ಥೆ ಮೂಲಕ ಎಲ್ಲಾ ಭಾಗಗಳಲ್ಲಿ ಸಮರ್ಪಕ ವಿದ್ಯುತ್ ಲಭ್ಯವಾಗುವಂತೆ ನೋಡಿಕೊಳ್ಳಬೇಕು.**
> -ಗೌರವ ಗುಪ್ತ, ಅಪರ ಮುಖ್ಯ ಕಾರ್ಯದರ್ಶಿಗಳು, ಇಂಧನ ಇಲಾಖೆ

ಪೂರೈಸಲು ಈಗಿನಿಂದಲೇ ಸಿದ್ಧತೆ ಮಾಡಿಕೊಳ್ಳಬೇಕು. ವಿನಿಮಯ ಅಥವಾ ದೀರ್ಘಾವಧಿ ಖರೀದಿ ಆಧಾರದ ಮೇಲೆ ಅನ್ಯ ರಾಜ್ಯಗಳಿಂದ ವಿದ್ಯುತ್ ಪಡೆಯಲು ಹಾಗೂ ಸಕ್ಕರೆ ಜತೆಗೆ ವಿದ್ಯುತ್ ಉತ್ಪಾದನೆ ಮಾಡುವ ಕಾರ್ಖಾನೆಗಳೊಂದಿಗೆ ಈಗಲೇ ಒಪ್ಪಂದ ಮಾಡಿಕೊಳ್ಳಬೇಕು. ಇದರಿಂದ ಬೇಸಿಗೆಯಲ್ಲಿ ಹೆಚ್ಚುವರಿ ವಿದ್ಯುತ್ ಲಭ್ಯವಾದರೆ ಬೇರೆ ರಾಜ್ಯಗಳಿಗೆ ಮಾರಾಟ ಮಾಡಬಹುದು. ಆದರೆ, ಯಾವುದೇ ಕಾರಣಕ್ಕೂ ಕೊರತೆ ಉಂಟಾಗಬಾರದು ಎಂದರು.

ಕೃಷಿಗೆ ಹಗಲು 7 ಗಂಟೆ ವಿದ್ಯುತ್: ರಾಜ್ಯದ ಹಲವು ಭಾಗಗಳಲ್ಲಿ ಈಗಾಗಲೇ ಕುಸುಮ್– ಸಿ ಯೋಜನೆಯಡಿ ಫೀಡ್ ಸೋಲರೈಸೇಷನ್ ಮೂಲಕ ರೈತರ ಕೃಷಿ ಪಂಪ್‌ಸೆಟ್‌ಗಳಿಗೆ ಹಗಲು 7 ಗಂಟೆ ನಿರಂತರ ವಿದ್ಯುತ್ ಪೂರೈಸಲಾಗುತ್ತಿದೆ. ಪ್ರಸ್ತುತ ಸೌರ ವಿದ್ಯುತ್ ಉತ್ಪಾದನೆ ಹೆಚ್ಚಾಗಿರುವುದರಿಂದ ಇತರೆ ಭಾಗಗಳಲ್ಲೂ ಕೃಷಿ ಪಂಪ್‌ಸೆಟ್‌ಗಳಿಗೆ ಹಗಲು ನಿರಂತರ 7 ಗಂಟೆ ವಿದ್ಯುತ್ ಪೂರೈಕೆ ಮಾಡಬೇಕು ಎಂದು ಸಚಿವರು ನಿರ್ದೇಶನ ನೀಡಿದರು.

ಬಳ್ಳಾರಿ ಬ್ಯಾನರ್ ಗಲಾಟೆ: ಸಿಐಡಿ ತನಿಖೆ

ಬೆಂಗಳೂರು: ಬಳ್ಳಾರಿಯಲ್ಲಿ ಬ್ಯಾನರ್ ಕಟ್ಟುವ ವಿಚಾರಕ್ಕೆ ಸಂಬಂಧಿಸಿದ ಗಲಾಟೆ ಹಾಗೂ ಫೈರಿಂಗ್ ವೇಳೆ ಕಾಂಗ್ರೆಸ್ ಕಾರ್ಯಕರ್ತನೊಬ್ಬ ಸಾವನ್ನಪ್ಪಿದ್ದ ಪ್ರಕರಣದ ತನಿಖೆಯನ್ನು ರಾಜ್ಯ ಸರ್ಕಾರ ಸಿಐಡಿಗೆ ವಹಿಸಿದೆ. ಬ್ರೂಸ್ ಪೇಟೆ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಎಲ್ಲಾ ಪ್ರಕರಣವನ್ನು ಸಿಐಡಿಗೆ ವರ್ಗಾಯಿಸಲಾಗಿದೆ.

ರಾಜಕೀಯ ಸ್ವರೂಪ ಪಡೆದುಕೊಂಡು ತೀವ್ರ ವಿವಾದ ಸೃಷ್ಟಿಯಾದ ಬೆನ್ನಲ್ಲೇ ರಾಜ್ಯ ಸರ್ಕಾರ ಮಹತ್ವದ ನಿರ್ಣಯ ಕೈಗೊಂಡಿದೆ. ಪೊಲೀಸರ ಗನ್ ಹಾಗೂ ರಿವಾಲ್ವರ್‌ನಿಂದ ಫೈರಿಂಗ್ ಆಗಿಲ್ಲ, ಖಾಸಗಿ ಗನ್‌ನಿಂದ ಫೈರಿಂಗ್ ಆಗಿದೆ ಎಂದು ಎಡಿಜಿಪಿ ದೃಢಪಡಿಸಿದ್ದಾರೆ. ಕಾನೂನು ಚೌಕಟ್ಟಿನಲ್ಲಿ ಆರೋಪಿಗಳನ್ನು ಬಂಧಿಸುತ್ತೇವೆ ಎಂದು ಹೇಳಿದ್ದರು.

25 ಆರೋಪಿಗಳಿಗೆ ಜಾಮೀನು: ಬಳ್ಳಾರಿಯಲ್ಲಿ ನಡೆದ ಬ್ಯಾನರ್ ಗಲಭೆ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ತನಿಖೆಯನ್ನ ತೀವ್ರಗೊಳಿಸಿದ್ದಾರೆ. ಈ ಮಧ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕ್ರೈಮ್ ನಂಬರ್ 4ರಲ್ಲಿನ 25 ಆರೋಪಿಗಳಿಗೆ ಜಾಮೀನು ನೀಡಿ ಬೆಂಗಳೂರಿನ 42ನೇ ಎಸಿಜೆಎಂ ಕೋರ್ಟ್ ಆದೇಶ ಹೊರಡಿಸಿದೆ. ಪ್ರಕರಣದ ಪ್ರಮುಖ ಆರೋಪಿ ಖಾಸಗಿ ಗನ್ ಮ್ಯಾನ್ ಗುರುಚರಣ್ ಸಿಂಗ್ ತನ್ನ ಬಳಿಯಿದ್ದ ಗನ್‌ನಿಂದ 12 ಎಂಎಂ ಬುಲೆಟ್ ಫೈರ್ ಮಾಡಿದ್ದನು. ಬಳ್ಳಾರಿ ಬ್ಯಾನರ್ ಗಲಾಟೆ ಸಂಬಂಧ ಬ್ರೂಸ್‌ಪೇಟೆ ಠಾಣೆಯಲ್ಲಿ ಒಟ್ಟು 6 ಪ್ರಕರಣ ದಾಖಲಾಗಿವೆ. ಗನ್‌ಮ್ಯಾನ್‌ಗಳಾದ ಗುರುಚರಣ್ ಸಿಂಗ್, ಬಲ್ಜಿತ್ ಸಿಂಗ್ ಹಾಗೂ ಮಹೇಂದ್ರ ಸಿಂಗ್ ಸೇರಿದಂತೆ ಕಾಂಗ್ರೆಸ್‌ನ 10, ಬಿಜೆಪಿಯ 11 ಕಾರ್ಯಕರ್ತರು ಸೇರಿದಂತೆ ಒಟ್ಟು 26 ಜನರನ್ನು ಪೊಲೀಸರು ಬಂಧಿಸಿದ್ದರು. ಅಂದು ಗುಂಡೇಟು ಬಿದ್ದು ಕಾಂಗ್ರೆಸ್ ಕಾರ್ಯಕರ್ತ ರಾಜಶೇಖರ ಎಂಬಾತ ಮೃತಪಟ್ಟಿದ್ದನು.

ನಾಲ್ಕು ಮರಿಗಳೊಂದಿಗೆ ವಿಹರಿಸುತ್ತಿದ್ದ ತಾಯಿ ಹುಲಿ ಸೆರೆ

ಚಾಮರಾಜನಗರ, ಜ.9– ತಾಲೂಕಿನ ನಂಜೇದೇವನಪುರ ಗ್ರಾಮದಲ್ಲಿ ಕಳೆದೊಂದು ತಿಂಗಳ ಹಿಂದೆ ನಾಲ್ಕು ಮರಿಗಳೊಂದಿಗೆ ವಿಹರಿಸುತ್ತಾ ಗ್ರಾಮಸ್ಥರಲ್ಲಿ ಆತಂಕ ಸೃಷ್ಟಿಸಿದ್ದ ತಾಯಿ ಹುಲಿ ಸೆರೆ ಹಿಡಿಯುವಲ್ಲಿ ಅರಣ್ಯ ಇಲಾಖೆ ಕೊನೆಗೂ ಯಶಸ್ವಿಯಾಗಿದೆ.



ಚಿತ್ರದಲ್ಲಿ ಸೆರೆ ಸಿಕ್ಕ ತಾಯಿ ಹುಲಿ ಕಾಣಬಹುದು.

ಗ್ರಾಮದ ನಿವಾಸಿ ಬುಲೆಟ್ ಮಹದೇವಪ್ಪ ಅವರ ಜಮೀನಿನಲ್ಲಿ ಅರಣ್ಯ ಇಲಾಖೆ ಅಧಿಕಾರಿಗಳು ಇಟ್ಟಿದ್ದ ಬೋನಿನಲ್ಲಿ ಸುಮಾರು 8 ವರ್ಷದ ಹೆಣ್ಣು ಹುಲಿ ಸೆರೆ ಸಿಕ್ಕಿದ್ದು, ಗ್ರಾಮಸ್ಥರ ಆತಂಕ ಸ್ವಲ್ಪ ದೂರವಾಗಿದೆ. ಆದರೆ, ಇದರ ನಾಲ್ಕು ಮರಿಗಳನ್ನು ಶೀಘ್ರವೇ ಸೆರೆ ಹಿಡಿಯಬೇಕು ಎಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಶುಕ್ರವಾರ ಬೆಳಗ್ಗೆ ಅರಣ್ಯ ಇಲಾಖೆ ಇಟ್ಟಿದ್ದ ಬೋನಿನಲ್ಲಿ ತಾಯಿ ಹುಲಿ ಸೆರೆಯಾಗಿದ್ದು, ಬೋನಿನಲ್ಲಿ ಅಧಿಕಾರಿಗಳು ಕಟ್ಟಿ ಹಾಕಿದ್ದ ಕರುವನ್ನು ಅದು ಬಲಿ ಪಡೆದಿದೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಅರಣ್ಯ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಹುಲಿಗೆ ಅರವಳಿಕೆ ಚುಚ್ಚುಮದ್ದು ನೀಡಿ ನಂತರ ಮತ್ತೊಂದು ಬೋನಿಗೆ ಸ್ಥಳಾಂತರಿಸಿದರು.

■ 6ನೇ ಪುಟಕ್ಕೆ

ಸಿಸಿ ಕ್ಯಾಮರಾದಲ್ಲಿ ಮತ್ತೊಂದು ಹುಲಿ ಸೆರೆ

ಚಾಮರಾಜನಗರ ತಾಲೂಕಿನ ನಂಜೇದೇವನಪುರ ಗ್ರಾಮದ ಜಮೀನಿನಲ್ಲಿ ಅಳವಡಿಸಿರುವ ಸಿಸಿ ಕ್ಯಾಮರಾದಲ್ಲಿ ಮತ್ತೊಂದು ಹುಲಿ ಓಡಾಡುವ ದೃಶ್ಯ ಸೆರೆಯಾಗಿದ್ದು, ಜನರಲ್ಲಿ ಮತ್ತಷ್ಟು ಆತಂಕ ಹೆಚ್ಚಿಸಿದೆ. ಶುಕ್ರವಾರ ಬೆಳಗಿನ ಜಾವ 3.30ರಲ್ಲಿ ಹುಲಿಯೊಂದು ಓಡಾಡುತ್ತಿರುವ ದೃಶ್ಯ ಗ್ರಾಮದ ಕುಮಾರಸ್ವಾಮಿ ಎಂಬುವರ ಜಮೀನಿನಲ್ಲಿ ಅಳವಡಿಸಿರುವ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದೆ. ಈ ಮೊದಲು ತಾಯಿ ಹಾಗೂ 4 ಮರಿ ಸೇರಿ 5 ಹುಲಿಗಳ ಓಡಾಟ ಇದೇ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿತ್ತು. ಈ ಬಗ್ಗೆ ಡಿಸಿಎಫ್ ಶ್ರೀಪತಿ ಮಾತನಾಡಿ, ಬೆಳಗ್ಗೆ ಕೂಡ ಸಿಸಿಟಿವಿಯಲ್ಲಿ ಹುಲಿ ದೃಶ್ಯ ಸೆರೆಯಾಗಿದೆ. ಸಿಸಿಟಿವಿಯಲ್ಲಿ ವಿಡಿಯೋ ಕ್ಲಾರಿಟಿ ಇರಲಿಲ್ಲ. ಅದೇ ಹುಲಿಯಾ ಅಥವಾ ಬೇರೆ ಹುಲಿಯಾ ಅನ್ನೋದು ಗೊತ್ತಿಲ್ಲ. ಪರಿಶೀಲನೆಗೆ ಕಳಿಸಿಕೊಟ್ಟಿದ್ದೇವೆ. ಈ ಪ್ರದೇಶದಲ್ಲಿ ಯಾರೂ ಕೂಡ ಓಡಾಡಿಲ್ಲ, ಆದ್ದರಿಂದ ಹುಲಿ ಬೋನಿಗೆ ಬಿದ್ದಿದೆ. ಗ್ರಾಮಸ್ಥರು ಕೂಡ ನಮ್ಮ ಕೆಲಸಕ್ಕೆ ಸಹಕಾರ ನೀಡಿದ್ದಾರೆ ಎಂದರು.

ಸ್ಥಳೀಯ ಚುನಾವಣೆಗೆ ಪ್ರತ್ಯೇಕ ಸ್ಪರ್ಧೆ ತೀರ್ಮಾನಿಸಿಲ್ಲ

ನಮ್ಮ ಗುರಿ ವಿಧಾನಸಭೆ ಚುನಾವಣೆಯಲ್ಲಿ 150 ರಿಂದ 160 ಸ್ಥಾನ ಗೆಲ್ಲುವುದು

ಬೆಂಗಳೂರು, ಜ.9(ಕೆಎಂಶಿ)–ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಮಿತ್ರ ಪಕ್ಷಗಳ ಪ್ರತ್ಯೇಕ ಸ್ಪರ್ಧೆ ಬಗ್ಗೆ ಇನ್ನೂ ಯಾವುದೇ ಅಂತಿಮ ತೀರ್ಮಾನ ಆಗಿಲ್ಲ ಎಂದು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಇಂದಿಲ್ಲಿ ಸ್ಪಷ್ಟಪಡಿಸಿದ್ದಾರೆ.



ಬೆಂಗಳೂರು ಪ್ರೆಸ್ ಕ್ಲಬ್ ಆಯೋಜಿಸಿದ್ದ ಪತ್ರಿಕಾ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಜೆಡಿಎಸ್–ಬಿಜೆಪಿ ಮೈತ್ರಿಯಲ್ಲಿ ಯಾವುದೇ ಬಿಕ್ಕಟ್ಟಿಲ್ಲ. ನಮ್ಮ ಗುರಿ ಮುಂಬರುವ ವಿಧಾನಸಭಾ ಚುನಾವಣೆಯನ್ನು ಒಟ್ಟಾಗಿ ಎದುರಿಸಿ 150 ರಿಂದ 160 ಸ್ಥಾನಗಳನ್ನು ಗೆದ್ದು ಅಧಿಕಾರಕ್ಕೆ ಬರುವುದಾಗಿದೆ ಎಂದರು. ಹಳೆ ಮೈಸೂರು ಭಾಗದಲ್ಲಿ ಬಿಜೆಪಿ ಮತ್ತು ಜೆಡಿಎಸ್ ಒಗ್ಗಟ್ಟಿನಿಂದ ಲೋಕಸಭಾ ಚುನಾವಣೆಯಲ್ಲಿ ಶ್ರಮಿಸಿದ್ದರಿಂದ 14 ರಲ್ಲಿ 12 ಸ್ಥಾನ ಗೆದ್ದಿದ್ದೇವೆ.ನಮ್ಮ ಸಹಕಾರದಿಂದ ಈ ಭಾಗದಲ್ಲಿ ಎಂತಹ ಫಲಿತಾಂಶ ಬಂದಿದೆ ಎಂಬುದು ತಿಳಿದಿದೆ.

ಚಾಮುಂಡಿಬೆಟ್ಟದಲ್ಲಿ 'ಪ್ರಸಾದ' ಕಾಮಗಾರಿ ಆರಂಭ

● ಚಾಮುಂಡೇಶ್ವರಿ ದೇವಾಲಯದ ಬಲ ಭಾಗದಲ್ಲಿ ವಿವಿಧೋದ್ದೇಶಿತ ವೇದಿಕೆ ನಿರ್ಮಾಣಕ್ಕಾಗಿ ಜೆಸಿಬಿಯಿಂದ ಭೂಮಿಯನ್ನು ಅಗೆಯುತ್ತಿರುವುದು
● ವೇದಿಕೆಯೊಂದಿಗೆ ಸಾಲು ಮಂಟಪ; ಪ್ರವೇಶ ದ್ವಾರದ ಬಳಿ ಕ್ಲಾಕ್ ರೂಂ; ಮಹಿಷಾಸುರನ ಬಳಿ ಟಿಕೆಟ್ ಕೌಂಟರ್‌ಗೆ ಆಧುನಿಕತೆಯ ಸ್ಪರ್ಶ



ಮೈಸೂರಿನ ಚಾಮುಂಡಿಬೆಟ್ಟದಲ್ಲಿ ಪ್ರಸಾದ ಯೋಜನೆಯಡಿ ಅಭಿವೃದ್ಧಿ ಕಾಮಗಾರಿ ಆರಂಭವಾಗಿದೆ.

ಮೈಸೂರು, ಜ.9(ಬಿಎಲ್‌ಯು)– ಪರಿಸರವಾದಿಗಳು, ಆಸ್ತಿಕ ಮಹಾಶಯರು ಸೇರಿದಂತೆ ಭಕ್ತರ ತೀವ್ರ ವಿರೋಧದ ನಡುವೆಯೂ ಮೈಸೂರಿನ ಚಾಮುಂಡಿಬೆಟ್ಟದಲ್ಲಿ ಕೇಂದ್ರ ಸರ್ಕಾರದ ಪ್ರಸಾದ ಯೋಜನೆ (Pilgrimage Rejuvenation and Spiritual Augmentation Drive-PRASHAD)ಯ ಅಭಿವೃದ್ಧಿ ಕಾಮಗಾರಿಗಳು ವಿಧ್ಯುಕ್ತವಾಗಿ ಆರಂಭವಾಗಿವೆ.

ಚಾಮುಂಡೇಶ್ವರಿ ದೇವಸ್ಥಾನದ ಬಲಭಾಗದಲ್ಲಿ ನಿರ್ಮಿಸುತ್ತಿರುವ ಸಾಲು ಮಂಟಪದ ಕಟ್ಟಡಗಳಲ್ಲಿ ಒಂದಾದ ವಿವಿಧೋದ್ದೇಶ ವೇದಿಕೆ (ಮಲ್ಟಿ ಪರ್ಪಸ್ ಆ್ಯಕ್ಟಿವಿಟಿ ಸ್ಟೇಜ್) ನಿರ್ಮಾಣಕ್ಕೆ ಜೆಸಿಬಿಯಿಂದ ಅಗೆಯುವ ಕಾಮಗಾರಿ ನಡೆಯುತ್ತಿದೆ.

ಚಾಮುಂಡೇಶ್ವರಿ ದೇವಸ್ಥಾನದ ಬಲ ಭಾಗದಲ್ಲಿ ನಡೆಯುವ ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವದ ಉದ್ಘಾಟನಾ ಸಮಾರಂಭದ ಸ್ಥಳದಲ್ಲಿ ಈ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ. ಪ್ರತಿ ವರ್ಷ ದಸರಾ ಉದ್ಘಾಟನೆ ಸಂದರ್ಭದಲ್ಲಿ ತಾತ್ಕಾಲಿಕ ವೇದಿಕೆ ನಿರ್ಮಿಸಿ, ತರುವಾಯ ಅದನ್ನು ತೆರವುಗೊಳಿಸಲಾಗುತ್ತಿತ್ತು. ಆದರೆ, ಈಗ ಶಾಶ್ವತ ವಿವಿಧೋದ್ದೇಶಿತ ವೇದಿಕೆಯನ್ನು ನಿರ್ಮಿಸುವ ಕಾಮಗಾರಿ ಸಾಗಿದೆ.

ಪ್ರಸಾದ ಯೋಜನೆಯಲ್ಲಿ ಚಾಮುಂಡಿಬೆಟ್ಟದಲ್ಲಿ ಈ ಅಭಿವೃದ್ಧಿ ಕಾಮಗಾರಿ ಕೈಗೊಂಡಿರುವ ಗುತ್ತಿಗೆದಾರ ಎಸ್‌ಕೆಎಸ್ ಇನ್ಫ್ರಾ ಪ್ರಾಜೆಕ್ಟ್ ಪ್ರೈವೇಟ್ ಲಿಮಿಟೆಡ್‌ನ ಮಾಲೀಕ ಸುಜಯ್ ಕುಮಾರ್ ಶೆಟ್ಟಿ, ಇಂದು ಕಾಮಗಾರಿ ಕುರಿತಂತೆ ನೀಲ ನಕ್ಷೆ ಸಹಿತ ಚರ್ಚೆ ನಡೆಸಿದರು.

ತಿರುಪತಿ ಮಾದರಿ: ತಿರುಪತಿ ಮಾದರಿಯಲ್ಲಿ ಸಾಲು ಮಂಟಪವನ್ನು ನಿರ್ಮಾಣ ಮಾಡಲಾಗುತ್ತಿದ್ದು, ಪಾರಂಪರಿಕ ಶೈಲಿಯ ಮಂಟಪಕ್ಕೆ ಆಧುನಿಕತೆಯ ಸ್ಪರ್ಶ ನೀಡಲಾಗುತ್ತಿದೆ. ಮಂಟಪದ ಸುತ್ತ ವಿವಿಧ ವಿನ್ಯಾಸದಿಂದ ಕೆತ್ತನೆ

■ 6ನೇ ಪುಟಕ್ಕೆ

ಚಾಮುಂಡಿಬೆಟ್ಟದ ಅಭಿವೃದ್ಧಿಗೆ ಪ್ರಮೋದಾದೇವಿ ತೀವ್ರ ಆಕ್ಷೇಪ

ಚಾಮುಂಡಿಬೆಟ್ಟದ ದೇವಸ್ಥಾನ ಮಾಲೀಕತ್ವದ ಹಕ್ಕು ಪ್ರತಿಪಾದಿಸಿರುವ ಮೈಸೂರು ರಾಜವಂಶಸ್ಥೆ ಪ್ರಮೋದಾ ದೇವಿ ಒಡೆಯರ್ ಅವರು ಪ್ರಸಾದ ಯೋಜನೆಯಡಿ ಇಲ್ಲಿ ಕೈಗೊಂಡಿರುವ ಅಭಿವೃದ್ಧಿ ಕಾಮಗಾರಿ ಬಗ್ಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ.



ಈ ಸಂಬಂಧ ಶ್ರೀ **ಪ್ರಮೋದಾ ದೇವಿ** ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರಕ್ಕೆ ಲಿಖಿತ ಆಕ್ಷೇಪಣಾ ಪತ್ರವನ್ನೂ ಸಲ್ಲಿಸಿದ್ದಾರೆ. ಈ ಕುರಿತಂತೆ 'ಮೈಸೂರು ಮಿತ್ರ' ನಿಗೆ ಮಾಹಿತಿ ನೀಡಿದ ಪ್ರಮೋದಾದೇವಿ ಒಡೆಯರ್, ಚಾಮುಂಡೇಶ್ವರಿ ದೇವಸ್ಥಾನದ ಮಾಲೀಕತ್ವದ ಹಕ್ಕು ಪ್ರತಿಪಾದನೆ ಪ್ರಕರಣ ಹೈಕೋರ್ಟ್‌ನಲ್ಲಿ ವಿಚಾರಣಾ ಹಂತದಲ್ಲಿದೆ. ಈ ಸಂದರ್ಭದಲ್ಲಿ ಇಲ್ಲಿ ಕಾಮಗಾರಿ ನಡೆಸುವುದು ಸರಿಯಲ್ಲ ಎಂದು ಹೇಳಿದರು.

ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದಲ್ಲಿ ನನಗೆ ಖಾಯಂ ಸದಸ್ಯತ್ವವಿದೆ. ಇಲ್ಲಿ ಕಾಮಗಾರಿ ನಡೆಸಲು ಪ್ರಾಧಿಕಾರದ ಸಭೆಯ ಒಪ್ಪಿಗೆ ಪಡೆಯಬೇಕು. ಆದರೆ ಸಮ್ಮತಿ ಪಡೆಯಲಾಗಿದೆಯೇ ಅಥವಾ ಇಲ್ಲವೇ ಎಂಬ ಮಾಹಿತಿಯೂ ನನಗೆ ಇಲ್ಲ. ಖಾಯಂ ಸದಸ್ಯತ್ವ ಇರುವ ನನಗೆ ಈ ಕುರಿತಂತೆ ಮಾಹಿತಿ ನೀಡಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ಈ ಸಂಬಂಧವಾಗಿ ಕಾನೂನಾತ್ಮಕ ಹೋರಾಟದ ಬಗ್ಗೆ ಈಗಲೇ ಪ್ರತಿಕ್ರಿಯೆ ನೀಡುವುದಿಲ್ಲ ಎಂದು ಸ್ಪಷ್ಟಪಡಿಸಿದರು. ಪ್ರಮೋದಾ ದೇವಿ ಒಡೆಯರ್ ಅವರು ಸಲ್ಲಿಸಿರುವ ಆಕ್ಷೇಪಣಾ ಪತ್ರದ ಬಗ್ಗೆ ನನಗೆ ಇನ್ನೂ ಯಾವ ಮಾಹಿತಿಯೂ ಇಲ್ಲ ಎಂದು ಪ್ರಾಧಿಕಾರದ ಕಾರ್ಯದರ್ಶಿ ರೂಪಾ 'ಮೈಸೂರು ಮಿತ್ರ'ಗೆ ತಿಳಿಸಿದರು.

ಮೈಸೂರಲ್ಲಿ ಮೂರು ದಿನಗಳ ದೇಸಿ ಎಣ್ಣೆ ಮೇಳ ಆರಂಭ

ಮೈಸೂರು, ಜ.9(ಜಿಎ)–ಹಣ ಸಂಪಾದಿಸುವ ಭರದಲ್ಲಿ ಆರೋಗ್ಯವನ್ನು ಕಳೆದುಕೊಳ್ಳುತ್ತಿದ್ದೇವೆ. ಸಾಂಪ್ರದಾಯಿಕ ಆಹಾರಗಳನ್ನು ಬಳಸುವ ಮೂಲಕ ಆರೋಗ್ಯವನ್ನು ವೃದ್ಧಿಸಿಕೊಳ್ಳಬೇಕಾಗಿದೆ. ಗಾಣದ ಎಣ್ಣೆ ಬಳಕೆ ಈ ನಿಟ್ಟಿನಲ್ಲಿ ಮೊದಲ ಹೆಜ್ಜೆಯಾಗಬೇಕು ಎಂದು ಮೈಸೂರು– ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ತಿಳಿಸಿದ್ದಾರೆ.

ಸಹಜ ಸಮೃದ್ಧ ಮತ್ತು ದೇಸಿರಿ ನ್ಯಾಚುರಲ್ಸ್ ಆಶ್ರಯದಲ್ಲಿ, ಮೈಸೂರಿನ ನಂಜರಾಜ ಬಹದ್ದೂರ್ ಛತ್ರದಲ್ಲಿ ಆರಂಭವಾದ ಮೂರು ದಿನಗಳ 'ದೇಸಿ ಎಣ್ಣೆ ಮೇಳ'ದಲ್ಲಿ ಎತ್ತಿನ ಗಾಣಕ್ಕೆ ಅವರು ಚಾಲನೆ ನೀಡಿ ಮಾತನಾಡಿದರು.

ಸಾಂಪ್ರದಾಯಿಕವಾಗಿ ಉತ್ಪಾದನೆಯಾಗುತ್ತಿದ್ದ ದೇಸಿ ಗಾಣದ ಎಣ್ಣೆಗಳು ನಮ್ಮ ಹಿರಿಯರ ಆರೋಗ್ಯವನ್ನು ಕಾಪಾಡಿದ್ದವು. ಗ್ರಾಹಕರಿಗೆ ಇದರ ಮಹತ್ವ ತಿಳಿಸಲು ಗಾಣದ ಎಣ್ಣೆಯಲ್ಲಿರುವ ಪೋಷಕಾಂಶಗಳ ಬಗ್ಗೆ ಅಧ್ಯಯನ ಮಾಡಿ, ಅದರ ಪ್ರಯೋಜನಗಳನ್ನು ಗ್ರಾಹಕರಿಗೆ ತಿಳಿಸುವಂತೆ ಅವರು ಕೇಂದ್ರೀಯ ಆಹಾರ ತಂತ್ರಜ್ಞಾನ ಸಂಶೋಧನಾಲಯವನ್ನು ಕೋರಿದರು.

ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಶ್ರೀ ಮಂಟೇಸ್ವಾಮಿ ಮಠ ಮತ್ತು ಶ್ರೀ ಕಪ್ಪಡಿ ಕ್ಷೇತ್ರದ ಮಠಾಧಿಪತಿಗಳಾದ ಎಂ.ಎಲ್. ವರ್ಚಸ್ವಿ ಶ್ರೀಕಂಠ ಸಿದ್ಧಲಿಂಗ ರಾಜೇ ಅರಸ್ ಮಾತನಾಡಿ, ಗಾಣದ ಎಣ್ಣೆಗಳು ಸ್ಥಳೀಯ ಆಹಾರ ಸಂಸ್ಕೃತಿಗೆ ಪೂರಕವಾಗಿವೆ. ಇವುಗಳ ಬಳಕೆಯಿಂದ ರೈತರ ಜೀವನ ಮಟ್ಟ ಸುಧಾರಿಸುತ್ತದೆ, ಸ್ಥಳೀಯರಿಗೆ ಉದ್ಯೋಗ ಲಭಿಸುತ್ತದೆ. ದೇಸಿರಿ ನ್ಯಾಚುರಲ್ಸ್ ಗಾಣದ ಗುಣಮಟ್ಟದ ಎಣ್ಣೆಗಳನ್ನು ಉತ್ಪಾದಿಸಿ, ಗ್ರಾಹರಿಗೆ ಕೊಡುವ ಕೆಲಸ ಮಾಡುತ್ತಿರುವುದು ಶ್ಲಾಘನೀಯ ಎಂದರು.

ಶನಿವಾರ (ಜ.10) ಬೆಳಗ್ಗೆ 11ಕ್ಕೆ ಎಣ್ಣೆ ಬೆಳೆಗಳ ಕೃಷಿ ಮತ್ತು ಮೌಲ್ಯವರ್ಧನೆಯ ಬಗ್ಗೆ ತರಬೇತಿ ನಡೆಯಲಿದೆ. ಜ.11ರಂದು ಬೆಳಗ್ಗೆ 10.30ಕ್ಕೆ ಸಾಂಪ್ರದಾಯಿಕ ಎಣ್ಣೆಗಳ ಬಗ್ಗೆ ಅರಿವು ಮೂಡಿಸಲು 5ರಿಂದ 12 ವರ್ಷದ ಮಕ್ಕಳಿಗೆ ಚಿತ್ರಕಲಾ ಸ್ಪರ್ಧೆ ಏರ್ಪಡಿಸಲಾಗಿದೆ. ಎಣ್ಣೆ ಬೀಜಗಳು ಮತ್ತು ಕೃಷಿ, ಎತ್ತುಗಳಿಂದ ಚಾಲಿತವಾಗುವ ಗಾಣ, ರೈತರು ಮತ್ತು ಎಣ್ಣೆ ಹೊರತೆಗೆಯುವ ಪ್ರಕ್ರಿಯೆಯನ್ನು ಚಿತ್ರದ ಮೂಲಕ ತೋರಿಸಬೇಕು. ಆರೋಗ್ಯಕರ ಎಣ್ಣೆ, ಹಳ್ಳಿಯ ಆರ್ಥಿಕತೆ, ಮತ್ತು ಪರಿಸರ ಸ್ನೇಹಿ ಎಂಬ ಸಂದೇಶಗಳನ್ನು ಚಿತ್ರ ಒಳಗೊಂಡಿರಬೇಕು.

ಭಾನುವಾರ ಮಧ್ಯಾಹ್ನ 12ಕ್ಕೆ ಸಾಂಪ್ರದಾಯಿಕ ಎಣ್ಣೆಗಳ ಅಡುಗೆ ಸ್ಪರ್ಧೆ ಏರ್ಪಡಿಸಲಾಗಿದೆ. ಸಾಂಪ್ರದಾಯಿಕ ಎಣ್ಣೆಗಳಿಂದ ತಯಾರಿಸಿದ ಅಡುಗೆಗಳನ್ನು ತರಬೇಕು. ಅಪರೂಪದ ಎಣ್ಣೆ ಬಳಸಿದ ಅಡುಗೆಗಳಿಗೆ ಆದ್ಯತೆ ನೀಡಲಾಗುವುದು. ವಿಜೇತರಿಗೆ ನಗದು ಬಹುಮಾನ ನೀಡಲಾಗುವುದು.

ಮೇಳದಲ್ಲಿ ವೈವಿಧ್ಯಮಯ ದೇಸಿ ಆಹಾರ ಸವಿಯಲು ಅವಕಾಶವಿದೆ. ಸಾವಯವ ಉತ್ಪನ್ನಗಳು, ಸಿರಿಧಾನ್ಯ, ನಾಟಿ ಬೀಜ ಮತ್ತು ಹಣ್ಣಿನ ಗಿಡಗಳನ್ನು ಖರೀದಿಸಬಹುದು. ದೇಸಿ ಬೀಜ, ಹಣ್ಣಿನ ಗಿಡ, ಸಾವಯವ ಬೆಲ್ಲ, ಅಕ್ಕಿ, ಸಿರಿಧಾನ್ಯ ಮತ್ತು ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡಲಾಗುತ್ತಿದೆ. ಸಂಕ್ರಾಂತಿಗಾಗಿ ಸಾವಯವ ಎಳ್ಳು ಬೆಲ್ಲ, ಅವರೆ, ಶೇಂಗಾ, ಗೆಣಸು ಖರೀದಿಸಬಹುದು.

ಕಾರ್ಯಕ್ರಮದಲ್ಲಿ ಸಿಎಫ್‌ಟಿಆರ್‌ಐ ನಿರ್ದೇಶಕ ಗಿರಿಧರ್ ಪರ್ವತಮ್, ಅಮೆರಿಕದ ವಿಜ್ಞಾನಿ ಡಾ.ಮಮತಾ ಶೇಖರ್, ಮೈಸೂರು ಕಲ್ಯಾಣ ಮಂಟಪಗಳ ಸಂಘದ ಅಧ್ಯಕ್ಷ ಎಸ್.ಮೂರ್ತಿ, ಸಹಜ ಸಮೃದ್ಧ ಸಂಸ್ಥೆಯ ನಿರ್ದೇಶಕ ಜಿ.ಕೃಷ್ಣ ಪ್ರಸಾದ್, ದೇಸಿರಿ ನ್ಯಾಚುರಲ್ಸ್ ಸಂಸ್ಥೆಯ ಸಹ ಸಂಸ್ಥಾಪಕರಾದ ಎಂ.ಮಹೇಶ, ಎನ್.ಯೋಗೀಶ್, ಸಹಜ ಸೀಡ್ಸ್‌ನ ಮಂಜು ಉಪಸ್ಥಿತರಿದ್ದರು.

ಸಾಂಪ್ರದಾಯಿಕ ಆಹಾರ ಸೇವಿಸಿ, ಆರೋಗ್ಯ ಕಾಪಾಡಿಕೊಳ್ಳಿ



ಸಹಜ ಸಮೃದ್ಧ ಮತ್ತು ದೇಸಿರಿ ನ್ಯಾಚುರಲ್ಸ್ ಆಶ್ರಯದಲ್ಲಿ ಮೈಸೂರಿನ ನಂಜರಾಜ ಬಹದ್ದೂರ್ ಛತ್ರದಲ್ಲಿ ಆರಂಭವಾದ ಮೂರು ದಿನಗಳ 'ದೇಸಿ ಎಣ್ಣೆ ಮೇಳ'ದಲ್ಲಿ ಎತ್ತಿನ ಗಾಣಕ್ಕೆ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಚಾಲನೆ ನೀಡಿದರು.

ಮೇಳದಲ್ಲಿ 50ಕ್ಕೂ ಹೆಚ್ಚು ಸಾಂಪ್ರದಾಯಿಕ ಎಣ್ಣೆಗಳನ್ನು ಪರಿಚಯಿಸಲಾಗಿದೆ. ಎತ್ತಿನ ಗಾಣದಿಂದ ಅಡುಗೆ ಎಣ್ಣೆ ಹಾಗೂ ಹರಳೆಣ್ಣೆ ತೆಗೆಯುವ ಪ್ರಾತ್ಯಕ್ಷಿಕೆಯನ್ನೂ ಖುದ್ದಾಗಿ ವೀಕ್ಷಿಸಬಹುದು. ಸಿಎಫ್‌ಟಿಆರ್‌ಐ ವಿಜ್ಞಾನಿಗಳು ಕಲಬೆರಕೆ ಎಣ್ಣೆ ಪತ್ತೆ ಹಚ್ಚುವ ವಿಧಾನ ಪ್ರದರ್ಶಿಸುತ್ತಾರೆ. ಆಯುರ್ವೇದ ವೈದ್ಯರಿಂದ ಉಚಿತ ಸಲಹೆ ಮತ್ತು ಎಣ್ಣೆ ಬಳಕೆಯ ಮಾರ್ಗದರ್ಶನ ನೀಡಲಾಗುತ್ತಿದೆ. ಆಹಾರ ತಜ್ಞರು ದೇಹ ಪ್ರಕೃತಿಗಳಿಗೆ ಯೋಗ್ಯವಾದ ಎಣ್ಣೆಗಳ ಬಳಕೆಯ ಕುರಿತು ತಿಳಿಸಿಕೊಡಲಿದ್ದಾರೆ.

ಭಕ್ತಿ ಗೀತೆ ಗಾಯನ



ಮೈಸೂರಿನ ಚಾಮುಂಡಿಬೆಟ್ಟದಲ್ಲಿ ಡಾ. ಶಮಿತಾ ಮಲ್ನಾಡ್, ಸಹ ಗಾಯಕರಾದ ಡಾ. ಪದ್ಮಶ್ರೀ, ವಿನೋದ್‌ಗೌಡ, ಡಿ. ಸಂತೋಷ್ ಅವರು ಭಕ್ತಿಗೀತೆ ಗಾಯನ ಪ್ರಸ್ತುತಪಡಿಸಿದರು. ಅಜಯ್(ಕೀಬೋರ್ಡ್), ನೀತು ನೀನಾದ್(ಕೊಳಲು), ಜಯಚಂದ್ರಾಚಾರ್ (ತಬಲ), ಮಧುಸೂದನ್(ಡೋಲಾಕ್), ವಿಜಿ(ರಿದಂ) ಪ್ಯಾಡ್ ಪಕ್ಕವಾದ್ಯದಲ್ಲಿ ಸಾತ್ ನೀಡಿದರು.

ಪಾಲಿಕೆ ನೌಕರರ ಸಹಕಾರ ಸಂಘದ ಕ್ಯಾಲೆಂಡರ್ ಬಿಡುಗಡೆ



ಮೈಸೂರು, ಜ.9–ಮೈಸೂರು ಮಹಾನಗರಪಾಲಿಕೆ ನೌಕರರ ಸಹಕಾರ ಸಂಘದಿಂದ ಪ್ರವಾಸೋದ್ಯಮ ದಿನ ಪ್ರೇಕ್ಷಣೀಯ ಸ್ಥಳಗಳೇ ಭಾರತದ ಪ್ರಬುದ್ಧತೆ ಕಲ್ಪನೆಯೊಂದಿಗೆ ಪ್ರಕಟಿಸಿರುವ ವಿಶೇಷವಾದ ದಿನದರ್ಶಿಕೆಯನ್ನು ಗುರುವಾರ ಬಿಡುಗಡೆ ಮಾಡಲಾಯಿತು.

ಈ ದಿನದರ್ಶಿಕೆಯು ವಿಶ್ವೇವ ಭೂಮಿ ದಿನ, ವಿಶ್ವ ಅರಣ್ಯ ದಿನ, ವಿಶ್ವ ಪರಂಪರೆ ದಿನ, ವಿಶ್ವ ಪರ್ವತ ದಿನ, ವಿಶ್ವ ಪರಿಸರ ದಿನ, ವಿಶ್ವ ಹುಲಿ ದಿನ, ವಿಶ್ವ ಆನೆಗಳ ದಿನ, ಪೌರ ಕಾರ್ಮಿಕರ ದಿನ, ಮೈಸೂರು ದಸರಾ ಮೊದಲಾದ ಚಿತ್ರಗಳನ್ನು ಒಳಗೊಂಡಿದೆ. ಸಂಘದ ಅಧ್ಯಕ್ಷ ಎಸ್. ಯಶೋಧರ, ಉಪಾಧ್ಯಕ್ಷೆ ಕೆ.ಸುಮಂಗಳ, ಖಜಾಂಚಿ ನಸ್ರುಲ್ಲಾ, ನಿರ್ದೇಶಕರಾದ ಬಿ.ಪ್ರಸಾದ್, ಎಸ್.ಮೈತ್ರಿ ಎನ್.ಮಂಜುನಾಥ, ಹೆಚ್.ಎಂ. ಶಿವಪ್ರಸಾದ್, ವಿ.ರಾಜೇಶ್ವರಿ ಬಾಯಿ, ಎಂ.ಬಸವಣ್ಣ, ಡಿ.ಸುರೇಂದ್ರ ಕುಮಾರ್, ಕೆ.ವಿಶ್ವನಾಥ್, ಬಿ.ರಾಜು, ಕಾರ್ಯದರ್ಶಿ ಎನ್.ಶಿವಕುಮಾರ್ ಕಚೇರಿ ಸಿಬ್ಬಂದಿ ಇನ್ನಿತರರು ಉಪಸ್ಥಿತರಿದ್ದರು.



ಚಾಮುಂಡಿಬೆಟ್ಟದ ಕಚೇರಿಯಲ್ಲಿ ಶ್ರೀ ಮಹಾಬಲಾದ್ರಿ ವಿವಿಧೋದ್ದೇಶ ಸಹಕಾರ ಸಂಘದ 2026ನೇ ಸಾಲಿನ ಕ್ಯಾಲೆಂಡರ್ ಬಿಡುಗಡೆ ಮಾಡಲಾಯಿತು. ಈ ವೇಳೆ ಅಧ್ಯಕ್ಷ ಆನಂದ್‌ಕುಮಾರ್, ಉಪಾಧ್ಯಕ್ಷೆ ಪುಷ್ಪಲತಾ, ಮಾಜಿ ಅಧ್ಯಕ್ಷ ಮಹದೇವಸ್ವಾಮಿ, ನಿರ್ದೇಶಕರಾದ ಸಣ್ಣ ಮಾದನಾಯಕ, ದೇವಣ್ಣ, ಶಿವಸ್ವಾಮಿ, ರಂಗಸ್ವಾಮಿ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಲಕ್ಷ್ಮೀ ಇನ್ನಿತರರಿದ್ದರು.



ಮೈಸೂರಿನ ಕರ್ನಾಟಕ ವೀರ ಕೇಸರಿ ಪಡೆಯ ನೂತನ ಕ್ಯಾಲೆಂಡರ್ ಅನ್ನು ಮೈಸೂರಿನ 101 ಗಣಪತಿ ದೇವಸ್ಥಾನದಲ್ಲಿ ಬಿಡುಗಡೆ ಮಾಡಲಾಯಿತು. ವೀರ ಕೇಸರಿ ಪಡೆ ಅಧ್ಯಕ್ಷ ಮಧುವನ ಚಂದ್ರು, ಕನ್ನಡ ಹೋರಾಟಗಾರ ಶಿವಶಂಕರ್, ತೇಜೇಶ್ ಲೋಕೇಶ್‌ಗೌಡ, ಬಾಲಕೃಷ್ಣ, ಬಸವರಾಜು, ಹನುಮಂತಯ್ಯ, ಕೃಷ್ಣಪ್ಪ, ಶಿವರಾಂ, ರಘು, ಮಹೇಶ್, ಬಾಬು ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ ಕ್ಯಾಲೆಂಡರ್ ಬಿಡುಗಡೆ



ಮೈಸೂರು,ಜ.9– ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ 2026ನೇ ಸಾಲಿನ ಕ್ಯಾಲೆಂಡರನ್ನು ಶುಕ್ರವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಕಾವೇರಿ ನಿವಾಸದಲ್ಲಿ ಬಿಡುಗಡೆ ಮಾಡಿದರು.

ಕಾರ್ಯಕ್ರಮದಲ್ಲಿ ಕರ್ನಾಟಕ ಭೋವಿ ನಿಗಮದ ಅಧ್ಯಕ್ಷ ಎಂ. ರಾಮಪ್ಪ ಮತ್ತು ಶ್ರೀ ಹಿಮ್ಮಡಿ ಸಿದ್ಧರಾಮೇಶ್ವರ ಮಹಾಸ್ವಾಮಿ ಹಾಗೂ ವಿರಾಜಪೇಟೆ ಶಾಸಕ ಎ.ಎಸ್. ಪೊನ್ನಣ್ಣ ಸೇರಿದಂತೆ ಇಲಾಖೆ ಅಧಿಕಾರಿಗಳು, ಸಿಬ್ಬಂದಿವರ್ಗ ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

10.1.2026 ಶನಿವಾರ, ಮಳೆ ನಕ್ಷತ್ರ: ಮೂಲ, 29.12.2025ರಿಂದ 10.01.2026 ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಪುಷ್ಯ ಮಾಸ, ಕೃಷ್ಣ ಪಕ್ಷ, ತಿಥಿ: ಸಪ್ತಮಿ, ನಕ್ಷತ್ರ: ಹಸ್ತ, ರಾಹುಕಾಲ: ಬೆಳಗ್ಗೆ 9 ರಿಂದ 10.30 ರವರೆಗೆ

- **ಪಾಳ್ಯಂ ಶ್ರೀ ಶಾಸ್ತಾ ಪೀಠಂ, ಅಭಯದಾಯಕ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನಂ :** ಬೆಳಗ್ಗೆಯಿಂದ ಧನುರ್ಮಾಸದ ವಿಶೇಷ ಪೂಜಾ, ಲಕ್ಷಾರ್ಚನಾ, ವಾರ್ಷಿಕ ಕುಂಭಾಭಿಷೇಕ ಪೂಜಾ ಮಹೋತ್ಸವ, ಮಹತೋಭಾರ ಶ್ರೀ ಧರ್ಮಶಾಸ್ತಾ ಸ್ವಾಮಿಯವರಿಗೆ, ಮಹಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾನಿವೇದನೆ, ಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸ್ಥಳ: ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನ, ರಾಘವೇಂದ್ರನಗರ.
- **ಅಂತರರಾಷ್ಟ್ರೀಯ ಲಯನ್ಸ್ ಸಂಸ್ಥೆ :** ಪ್ರಾಂತೀಯ ಸಮ್ಮೇಳನ, ಗೌರವ ಅತಿಥಿಗಳು : ಆಶಾಕಿರಣ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಡಾ. ಎಸ್.ಎನ್. ಮೋತಿ, ಮುಖ್ಯ ಭಾಷಣಕಾರರು : ಕರಾಮುವಿವಿ ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಸಹ ಪ್ರಾಧ್ಯಾಪಕ ಡಾ. ಜ್ಯೋತಿಶಂಕರ್, ಅಧ್ಯಕ್ಷತೆ : ಪ್ರಾಂತೀಯ ಅಧ್ಯಕ್ಷ ಲಯನ್ ಎಸ್. ವಾಸುಕಿ, ಸ್ಥಳ: ಬಿಎಐ ಆಡಿಟೋರಿಯಂ, ವಿಶ್ವೇಶ್ವರನಗರ, ಬೆಳಗ್ಗೆ 8.30 ರಿಂದ.
- **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ವಿವೇಕಾನಂದರ 164ನೇ ಜಯಂತಿ, ಬೆಳಗ್ಗೆ 5.15 ರಿಂದ ವೇದಮಂತ್ರ ಪಠನ, ಮಂಗಳಾರತಿ ಮತ್ತು ಭಜನೆ, ವಿಶೇಷ ಪೂಜೆ, ಶಿವಸಹಸ್ರನಾಮ ಪಾರಾಯಣ, ಭಜನೆ, ಗ್ರಂಥವಾಚನ, ಆರತಿ, ಹೋಮ, ಪ್ರಸಾದ ವಿತರಣೆ, ಸಂಜೆ 4.30 ರಿಂದ ಶ್ರೀ ಶಾರದಾ ಸಂವಿತ್ ಭಜನಾ ಮಂಡಳಿಯಿಂದ ಭಜನೆ, ಸಂಜೆ 6 ರಿಂದ ಕನ್ನಡದಲ್ಲಿ ಪ್ರವಚನ–'ಸ್ವಾಮಿ ವಿವೇಕಾನಂದ', ಸಂಜೆ 7 ರಿಂದ ಆರತಿ ಮತ್ತು ವಿಶೇಷ ಭಜನೆ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ.
- **ರೋಟರಿ ಪಂಚಶೀಲ ಮೈಸೂರು :** ಆರ್‌ವೈಎಲ್‌ಎ ರೋಟರಿ ಯುವ ನಾಯಕತ್ವ ಅಕಾಡೆಮಿ ಕುರಿತು ಕಾರ್ಯಾಗಾರ, ಉದ್ಘಾಟನೆ : ಡಿಸ್ಟ್ರಿಕ್ಟ್ ಗೌರ್ನರ್ ಪಿ.ಕೆ. ರಾಮಕೃಷ್ಣ, ಗೌರವ ಅತಿಥಿಗಳು : ರೋಟರಿ ಯಶಸ್ವಿ ಸೋಮಶೇಖರ್, ಪ್ರಾಸ್ತಾವಿಕ ನುಡಿ : ರೋಟರಿ ಲೀಡರ್‌ಶಿಪ್ ಇನ್‌ಸ್ಟಿಟ್ಯೂಟ್ ನಿರ್ದೇಶಕ ಕೆ.ವಿ. ಮೋಹನ್ ಕುಮಾರ್, ಸ್ಥಳ: ವಿಜ್ಞಾನ ಭವನ ಸಭಾಂಗಣ, ಬೆಳಗ್ಗೆ 10 ರಿಂದ.
- **ಪ್ರೊಪತ್ ಅಕಾಡೆಮಿ :** ಪ್ರೊಪತ್ ಫೆಸ್ಟ್–2026, ಅಬಾಕಸ್ ಮತ್ತು ವೇದಿಕ್ ಮ್ಯಾಥ್ಸ್ ಸ್ಪರ್ಧೆ, ಮುಖ್ಯ ಅತಿಥಿಗಳು : ಅಕಾಡೆಮಿ ನಿರ್ದೇಶಕ ಆಶಾ ದಿನೇಶ್, ವೀರೇಶ್ ತಿಮ್ಮಾಪುರ, ಮುರಳೀಧರ್ ಆರ್. ಬೋರ್ಕರ್, ಮಮತಾ ಶಿವು, ಜಯಂತಿ ಮೋಹನ್, ವಿಐಎಲ್‌ಡಿ ಫೌಂಡೇಷನ್ ಮ್ಯಾನೇಜಿಂಗ್ ಟ್ರಸ್ಟಿ ಡಾ. ಸೀತಾರಾಮ, ಸ್ಥಳ: ಸಂಭ್ರಮ ಕನ್ವೆನ್ಷನ್ ಹಾಲ್, ವಿಜಯನಗರ 2ನೇ ಹಂತ, ಬೆಳಗ್ಗೆ 10 ರಿಂದ.
- **ದಿವ್ಯ ಜ್ಯೋತಿ ಚಾರಿಟೆಬಲ್ ಟ್ರಸ್ಟ್ :** ಗಣಿತ ಕುಣಿತ ಸಂಭ್ರಮ, ವಿಷಯ : ಗಣಿತವನ್ನು ನಲಿಯುತ್ತ ಕಲಿಯುವ ಕಲೆ, ಪ್ರಸ್ತುತಿ : ಗಣಿತ–ವಿಜ್ಞಾನ ಸಂವಹನಕಾರ ಬಿ.ಎಸ್. ಕೃಷ್ಣಮೂರ್ತಿ, ಸ್ಥಳ: ದಿವ್ಯ ಜ್ಯೋತಿ ಚಾರಿಟೆಬಲ್ ಟ್ರಸ್ಟ್ ಸಭಾಂಗಣ, ಬೆಳಗ್ಗೆ 10.30ಕ್ಕೆ.
- **ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ :** ದಿವಂಗತ ಲಕ್ಷ್ಮೀನಾರಾಯಣ ನಾಗವಾರ ಅವರ ಸ್ಮರಣಾರ್ಥ ಗುರಿ ಮುಟ್ಟದ ದಲಿತ ರಾಜಕಾರಣ ಮತ್ತು ಮುಂದಿನ ನಡೆ ಕುರಿತು ವಿಚಾರ ಸಂಕಿರಣ, ಉದ್ಘಾಟನೆ : ಶ್ರೀ ಜ್ಞಾನಪ್ರಕಾಶ್ ಸ್ವಾಮೀಜಿ, ಅಧ್ಯಕ್ಷತೆ : ದೇವಗಳ್ಳಿ ಸೋಮಶೇಖರ್, ಮುಖ್ಯ ಅತಿಥಿಗಳು : ಡಾ. ಜಾನಕಮ್ಮ ಲಕ್ಷ್ಮೀನಾರಾಯಣ ನಾಗವಾರ, ಜೀವನಹಳ್ಳಿ ವೆಂಕಟೇಶ್, ರಾಜಶೇಖರ ಕೋಟೆ, ಭುಗತಗಳ್ಳಿ ಕೆ. ಮಣಿಯಯ್ಯ, ಚಿಂತಕ ಸಿ. ಹರಕುಮಾರ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಎಸ್.ಡಿ. ಸಣ್ಣಸ್ವಾಮಿ ಸರಗೂರು, ಸ್ಥಳ: ರೋಟರಿ ಸಂಸ್ಥೆ ಸಭಾಂಗಣ, ಜೆಎಲ್‌ಬಿ ರಸ್ತೆ, ಬೆಳಗ್ಗೆ 10.30ಕ್ಕೆ.
- **ಜೆಎಸ್‌ಎಸ್ ಮಹಿಳಾ ಕಾಲೇಜು :** ಹಿರಿಯ ವಿದ್ಯಾರ್ಥಿನಿಯರ ಸಭೆ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ : ಪಿಇಎಸ್ ಟ್ರಸ್ಟ್, ಶಿವಮೊಗ್ಗ ಸಿಇಓ ಶ್ರೀಮತಿ ಉಮಾದೇವಿ ಎಸ್.ವೈ., ಅಧ್ಯಕ್ಷತೆ : ಜೆಎಸ್‌ಎಸ್ ಕಾಲೇಜು ಶಿಕ್ಷಣ ವಿಭಾಗದ ನಿರ್ದೇಶಕ ಪ್ರೊ. ಮೊರಬದ ಮಲ್ಲಿಕಾರ್ಜುನ, ಮುಖ್ಯ ಅತಿಥಿಗಳು : ಡಾ. ಎಚ್.ಎಂ. ಕಲಾಶ್ರೀ, ಶ್ರೀಮತಿ ಎಂ.ಎನ್. ಸುಮನ, ಶ್ರೀಮತಿ ಜೆ.ಪಿ. ಸುಷ್ಮ, ಶ್ರೀಮತಿ ಸಿಂಧೂರ ಗಂಗಾಧರ, ಪ್ರಿನ್ಸಿಪಾಲ್ ಡಾ. ರೇಚಣ್ಣ, ಸ್ಥಳ: ನವಜ್ಯೋತಿ ಸಭಾಂಗಣ, ಕಾಲೇಜು ಆವರಣ, ಬೆಳಗ್ಗೆ 10.30ಕ್ಕೆ.
- **ಮೈಸೂರು ಕನ್ನಡ ವೇದಿಕೆ :** ವಿವಿಧ ಕ್ಷೇತ್ರದ ಸಾಧಕರಿಗೆ ರಾಷ್ಟ್ರಕವಿ ಕುವೆಂಪು ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ : ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ, ಪ್ರಧಾನ ಭಾಷಣಕಾರರು : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಪ್ರಶಸ್ತಿ ಪ್ರದಾನ: ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಮುಖ್ಯ ಅತಿಥಿಗಳು : ಸಮಾಜ ಸೇವಕ ಡಾ. ರಘುರಾಂ ವಾಜಪೇಯಿ, ಅರುಣ್, ಡಾ. ಲೋಕೇಶ್, ಮನೋಹರ್, ನಾಲಾಬೀದಿ ರವಿ, ಅಧ್ಯಕ್ಷತೆ : ಮೈಸೂರು ಕನ್ನಡ ವೇದಿಕೆ ಅಧ್ಯಕ್ಷ ಎಸ್. ಬಾಲಕೃಷ್ಣ, ಸ್ಥಳ: ಸ್ವಾತಂತ್ರ್ಯ ಉದ್ಯಾನವನ, ಬೆಳಗ್ಗೆ 10.30ಕ್ಕೆ.
- **ರಾಷ್ಟ್ರೀಯ ಕೈಮಗ್ಗ ಅಭಿವೃದ್ಧಿ ನಿಗಮ :** ಸಿಲ್ಕ್ ಫ್ಯಾಬ್, ಕೈಮಗ್ಗ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಜೆಎಸ್‌ಎಸ್ ಅರ್ಬನ್ ಹಾತ್, ಹೆಬ್ಬಾಳು ರಿಂಗ್ ರಸ್ತೆ, ಬೆಳಗ್ಗೆ 11 ರಿಂದ.
- **ಬೆಂಗಳೂರು ನಗರ ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್, ಮೈಸೂರು ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ :** ಡಾ. ಪಿ.ಎಚ್. ರಾಘವೇಂದ್ರಶೆಟ್ಟಿ 80 ಒಂದು ಸಂಭ್ರಮ ಹಾಗೂ ಸಂಕ್ರಾಂತಿ ಚುಟುಕು ಕವಿಗೋಷ್ಠಿ, ಉದ್ಘಾಟನೆ : ಚುಟುಕು ಯುಗಾಚಾರ್ಯ ಡಾ. ಎಂ.ಜಿ.ಆರ್. ಅರಸ್, ಅಧ್ಯಕ್ಷತೆ : ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಚುಟುಕು ಸಿರಿ ರತ್ನ ಹಾಲಪ್ಪಗೌಡ, ಉಪಸ್ಥಿತರು : ಡಾ. ಪಿ.ಎಚ್. ರಾಘವೇಂದ್ರ ಶೆಟ್ಟಿ, ಶ್ರೀಮತಿ ಲಕ್ಷ್ಮೀ ದಿನೇಶ್, ಡಾ. ಬಾನಂ ಲೋಕೇಶ್, ಮಲ್ಲರಾಜ್ ಅರಸ್, ರಾ. ವಿಜಯ ಸಮರ್ಥ, ಸ್ಥಳ: ಹಳ್ಳೂರು ಹನುಮಂತಪ್ಪ ವರಮಹಾಲಕ್ಷ್ಮಮ್ಮ ಸ್ಮಾರಕ ವೇದಿಕೆ, ಸಿದ್ಧಾರ್ಥ ಬಡಾವಣೆ, ಬೆಳಗ್ಗೆ 11ಕ್ಕೆ.
- **ಕಸ್ತೂರಿ ಸಿರಿಗನ್ನಡ ವೇದಿಕೆ :** ದೇಗುಲದಲ್ಲಿ ಸಂಕ್ರಾಂತಿ ಕವಿಗೋಷ್ಠಿ–2026, ಉದ್ಘಾಟನೆ : ಎಂ. ಗುರುಪ್ರಸಾದ್, ಅಧ್ಯಕ್ಷತೆ : ಆರ್. ಮುನಿರಾಜು, ಮುಖ್ಯ ಅತಿಥಿಗಳು : ಸಾಹಿತಿ ಸಿದ್ದಸ್ವಾಮಿ, ಎನ್. ಸತೀಶ್‌ರಾಜು, ಎಸ್. ಶೇಖರ್‌ರಾಜು, ಶ್ರೀಮತಿ ಯಶೋಧ ರಾಮಕೃಷ್ಣ, ಸ್ಥಳ: ಶ್ರೀ ಕೊಲ್ಲಾಪುರದಮ್ಮನವರ ದೇವಾಲಯ, ಹಳೇ ಅಗ್ರಹಾರ, ಬೆಳಗ್ಗೆ 11ಕ್ಕೆ.
- **ಡಾ. ರಾಜಕುಮಾರ್ ಫಿಲಂ ಇನ್‌ಸ್ಟಿಟ್ಯೂಟ್, ಮೈಸೂರು ವಿವಿ ಸಂಶೋಧಕರ ಸಂಘ, ಅಸ್ತಿತ್ವ ಸಾಂಸ್ಕೃತಿಕ ವೇದಿಕೆ :** ನಾಡೋಜ ಬರಗೂರು ರಾಮಚಂದ್ರಪ್ಪನವರ ಸೌಹಾರ್ದ ಭಾರತ ಸಮಾನತೆಯ ಸ್ನೇಹಿತ ಕೃತಿ ಲೋಕಾರ್ಪಣೆ ಸಮಾರಂಭ, ಕೃತಿ ಲೋಕಾರ್ಪಣೆ : ಅಕ್ಕಮಹಾದೇವಿ ಸಂಶೋಧನಾ ಮತ್ತು ವಿಸ್ತರಣಾ ಪೀಠದ ನಿರ್ದೇಶಕರಾದ ಪ್ರೊ. ಕವಿತಾ ರೈ, ಮುಖ್ಯ ಅತಿಥಿಗಳು : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಉಪಸ್ಥಿತರು : ಇನ್‌ಸ್ಟಿಟ್ಯೂಟ್ ವ್ಯವಸ್ಥಾಪಕ ನಿರ್ದೇಶಕ ನಟ್ರಾಜ್ ಶಿವು, ಸ್ಥಳ: ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಆವರಣ, ಮಧ್ಯಾಹ್ನ 12ಕ್ಕೆ.
- **ಪೇರೆಂಟ್ಸ್ ಅಸೋಸಿಯೇಷನ್ ಆಫ್ ಡೆಫ್ ಚಿಲ್ಡ್ರನ್ :** ವಾರ್ಷಿಕೋತ್ಸವ, ಮುಖ್ಯ ಅತಿಥಿಗಳು : ವಿಧಾನ ಪರಿಷತ್ ಸದಸ್ಯ ಡಾ. ಡಿ. ತಿಮ್ಮಯ್ಯ, ವಿಶೇಷ ಆಹ್ವಾನಿತರು : ಐಸಿಎಟಿಟಿ ನಿರ್ದೇಶಕರಾದ ಡಾ. ಶಾಲಿನಿ ನಲ್ವಾಡ್, ವೈಭವ್ ಸ್ಪೀಚ್ ಅಂಡ್ ಹಿಯರಿಂಗ್ ಸೆಂಟರ್ ನಿರ್ದೇಶಕರಾದ ಶ್ರೀಮತಿ ಜಿ.ಜಿ. ಆಶಾ, ಪಿಎಡಿಸಿ ಅಧ್ಯಕ್ಷ ಬಿ. ಲೋಹಿಯಾ, ಸ್ಥಳ: ವಿಂಗ್ ಕಮಾಂಡರ್ ಕೆ.ಕೆ. ಶ್ರೀನಿವಾಸನ್ ಸಭಾಂಗಣ, ಪಿಎಡಿಸಿ ಆವರಣ, ಬೋಗಾದಿ, ಮಧ್ಯಾಹ್ನ 3ಕ್ಕೆ.
- **ರಂಗಾಂತರಂಗ ಮೈಸೂರು :** ಜನಪರ ಸಾಹಿತಿ ಹೊರೆಯಾಲ ದೊರೆಸ್ವಾಮಿ ಅವರ ಹೊಸ ಕೃತಿ 'ಗೊನೆ' ಸಾಹಿತ್ಯ ಸಾಂಸ್ಕೃತಿಕ ಲೇಖನಗಳ ಸಂಗ್ರಹ ಕುರಿತು ಲೇಖಕ ನಾ. ದಿವಾಕರ ಅವರಿಂದ ಕೃತಿ ಪರಿಚಯ, ಅಧ್ಯಕ್ಷತೆ : ಸಾಹಿತಿ ಪ್ರೊ. ಕಾಳೇಗೌಡ ನಾಗವಾರ, ಸ್ಥಳ: ರಂಗಾಂತರಂಗ, ಕುವೆಂಪುನಗರ, ಸಂಜೆ 4ಕ್ಕೆ.
- **ಡಿಜಿಟಿಎಂ ಇಂಗ್ಲೀಷ್ ಮಾಧ್ಯಮ ಸ್ಕೂಲ್ :** ಡಿಜಿಟಿಎಂ ನೃತ್ಯ ಸಂಭ್ರಮೋತ್ಸವ, ಅಧ್ಯಕ್ಷತೆ : ಡಿಜಿಟಿಎಂ ಶಿಕ್ಷಣ ಸಂಸ್ಥೆ ಅಧ್ಯಕ್ಷ ಎನ್. ನರೇಂದ್ರ ಬಾಬು, ಮುಖ್ಯ ಅತಿಥಿಗಳು : ಖ್ಯಾತ ವಾಗ್ಮಿ ಪ್ರೊ. ಕೃಷ್ಣೇಗೌಡ, ಉದ್ಘಾಟನೆ : ಎಸ್‌ಜಿಡಿಎಂ ಕಾರ್ಯದರ್ಶಿ ಡಿ.ಟಿ. ಸುಬ್ರಮಣ್ಯ, ಎಸ್‌ಜಿಡಿಎಂ ಟ್ರಸ್ಟ್ ಉಪಾಧ್ಯಕ್ಷ ಡಿ.ಎಂ. ಸತ್ಯನಾರಾಯಣಸ್ವಾಮಿ, ಉಪಸ್ಥಿತರು : ಡಿಜಿಟಿಎಂ ಕಾರ್ಯದರ್ಶಿ ಎಂ.ವಿ. ತ್ಯಾಗರಾಜ್, ಡಿಜಿಟಿಎಂ ಪ್ರಿನ್ಸಿಪಾಲ್ ಹೆಚ್.ಆರ್. ಪಾಂಡುರಂಗ, ಸ್ಥಳ: ಶ್ರೀ ಶಾರದಾ ರಂಗ ಮಂಟಪ, ಡಿಜಿಟಿಎಂ ಸ್ಕೂಲ್ ಆವರಣ, ಸಂಜೆ 4.30ಕ್ಕೆ.
- **ನೃತ್ಯ ವರ್ಣ ಕಲಾಸೌರಭ :** ಶ್ರೀಮತಿ ಕಲ್ಪಿತ ಪ್ರಶಾಂತಿ ಅವರಿಂದ ಕಲಾದರ್ಪಣಂ–4, ಸಂಗೀತ ವೃಕ್ಷಾವಳಿ ಮತ್ತು ನರ್ತನ ಸಂಧ್ಯಾ, ಮುಖ್ಯ ಅತಿಥಿಗಳು : ವಿಮೋವೆ ಫೌಂಡೇಷನ್ ಸಿಇಓ ವಿನಯ್ ಶಿಂಧೆ, ಅತಿಥಿಗಳು : ನಗರ ಪೊಲೀಸ್ ಆಯುಕ್ತರಾದ ಶ್ರೀಮತಿ ಸೀಮಾ ಲಾಟ್ಕರ್, ಅಧ್ಯಕ್ಷತೆ : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಉಪಸ್ಥಿತರು : ಕಲಾಸೌರಭ ಸಂಸ್ಥಾಪಕ ನಿರ್ದೇಶಕಿ ಶ್ರೀಮತಿ ಕಲ್ಪಿತ ಪ್ರಶಾಂತ್, ಸ್ಥಳ: ಕರ್ನಾಟಕ ಕಲಾಮಂದಿರ, ವಿನೋಬಾ ರಸ್ತೆ, ಸಂಜೆ 4.30ಕ್ಕೆ.
- **ಸುರುಚಿ ರಂಗಮನೆ :** ಕಥೆ ಕೇಳೋಣ ಬನ್ನಿ ಕಾರ್ಯಕ್ರಮ – 914, ಕಥೆ ಹೇಳುವವರು: ಡಾ. ಕನಕ ಮಾಲಿನಿ ಎಂ ಎ, ನಿವೃತ್ತ ಇಂಗ್ಲಿಷ್ ಪ್ರಾಧ್ಯಾಪಕರು, ಕಾಲೇಜು ಶಿಕ್ಷಣ ಇಲಾಖೆ, ಮೈಸೂರು, ಸ್ಥಳ: ಸುರುಚಿ ರಂಗಮನೆ, 476, ಚಿತ್ರಭಾನು ರಸ್ತೆ, ಕುವೆಂಪುನಗರ, ಸಂಜೆ 4.30 ರಿಂದ 5.30 ರವರೆಗೆ
- **ಕಲಾ ಸೌರಭ :** ಸಂಸ್ಕೃತಿ ಸೌರಭ, ಖ್ಯಾತ ಮನೋವೈದ್ಯೆ, ನೃತ್ಯ ಕಲಾವಿದೆ ಡಾ. ಕೆ.ಎಸ್. ಪವಿತ್ರ ಅವರಿಂದ ಚಿಂತನ–ಮಂಥನ, ಸ್ಥಳ: 298, ಕಲಾಸೌರಭ, ರಾಮಕೃಷ್ಣನಗರ, ಸಂಜೆ 5ಕ್ಕೆ.
- **ಯುವ ನಾಟ್ಯ ಶಾಲೆ, ಹೂಟಗಳ್ಳಿ :** ದ್ವೈವಾರ್ಷಿಕೋತ್ಸವ, ಮುಖ್ಯ ಅತಿಥಿಗಳು : ಹಿರಿಯ ಭರತನಾಟ್ಯ ಕಲಾವಿದೆ ವಿದುಷಿ ಪ್ರಸನ್ನ ಲಕ್ಷ್ಮೀ ಕಲಾಧರ್, ಯುವ ನಾಟ್ಯ ಶಾಲೆಯ ವಿದ್ಯಾರ್ಥಿನಿಯರಿಂದ ದಶಾವತಾರ ನೃತ್ಯ, ಡಾ. ವಿದುಷಿ ಆನ್ ಕ್ಯಾಥರೀನ್ ಆರ್ಚರ್–ನೃತ್ಯ ಸಂಯೋಜನೆ ಮತ್ತು ನಟುವಾಂಗ, ವಿದ್ವಾನ್ ಸಿ. ಸಾಗರ್ ಚಕ್ರವರ್ತಿ–ಗಾಯನ, ವಿದ್ವಾನ್ ಎಂ.ಜೆ. ಕಿರಣ್ ಕುಮಾರ್–ಮೃದಂಗ, ವಿದ್ವಾನ್ ಎಂ.ಆರ್. ಶ್ರೀಕಾಂತ್–ಪಿಟೀಲು, ವಿದ್ವಾನ್ ಸಿ.ಆರ್. ರಾಘವೇಂದ್ರ ಪ್ರಸಾದ್–ರಿದಮ್ ಪ್ಯಾಡ್, ಸ್ಥಳ: ಕಿರು ರಂಗಮಂದಿರ, ಕಲಾಮಂದಿರ ಆವರಣ, ಸಂಜೆ 5.30ಕ್ಕೆ.
- **ಸಾಧನ ಮಂದಿರ, ಮೈಸೂರು :** ವಿಶೇಷ ತರಬೇತಿ ಶಿಬಿರ ಹಾಗೂ ಸರಸ್ವತಿ ಪೂಜೆ, ಸಾನ್ನಿಧ್ಯ: ಪೂಜ್ಯ ಸ್ವಾಮಿ ಹಂಸಾನಂದ, ಸಂಜೆ 4 ರಿಂದ ಶ್ರೀ ವೆಂಕಟೇಶ್ವರ ದೇವಸ್ಥಾನ, ಸಿದ್ಧಾರ್ಥನಗರ; ಸಂಜೆ 5.15 ರಿಂದ ಬಲಮುರಿ ವಿನಾಯಕ ದೇವಸ್ಥಾನ, ಸಿದ್ಧಾರ್ಥ ಬಡಾವಣೆ, ಸಂಜೆ 6.30 ರಿಂದ ಗೀತಾ ಶಿಶು ಶಿಕ್ಷಣ ಸಂಘ, ಸಿದ್ಧಾರ್ಥ ಬಡಾವಣೆ.
- **ವ್ಯವಸ್ಥಾಪಕರು :** ಶ್ರೀಚಾಮುಂಡೇಶ್ವರಿ ಅಮ್ಮನವರ ಕೊಠಾರೋತ್ಸವ ವೈಭವ, ಕುಮಾರಿ ವಾಣಿ ಮತ್ತು ತಂಡದಿಂದ ಕರ್ನಾಟಕ ಶಾಸ್ತ್ರೀಯ ವೇಣುವಾದನ, ಸ್ಥಳ: ಚಾಮುಂಡಿಬೆಟ್ಟದ ದೇವಸ್ಥಾನದ ಒಳಗೆ, ಸಂಜೆ 6 ರಿಂದ.
- **ಕರ್ನಾಟಕ ಅಮೆಚೂರ್ ಖೋ ಖೋ ಅಸೋಸಿಯೇಷನ್ :** ಅಸೋಸಿಯೇಷನ್ ಮಾಜಿ ಅಧ್ಯಕ್ಷ ಎನ್. ಪ್ರಕಾಶ್ ಸ್ಮರಣಾರ್ಥ ಪುರುಷರಿಗಾಗಿ ರಾಜ್ಯ ಮಟ್ಟದ ಸೀನಿಯರ್ ಖೋ ಖೋ ಚಾಂಪಿಯನ್‌ಶಿಪ್, ಉದ್ಘಾಟನೆ : ಶಾಸಕ ಟಿ.ಎಸ್. ಶ್ರೀವತ್ಸ, ಅಧ್ಯಕ್ಷತೆ : ಬಿಎಐ ಅಧ್ಯಕ್ಷ ನಾಗರಾಜ್ ವಿ. ಬೈರಿ, ಮುಖ್ಯ ಅತಿಥಿಗಳು : ಸಿ.ಎಸ್. ಮಂಜುನಾಥ್, ಎಚ್.ಆರ್. ಭಗವಾನ್, ಬಿ. ಸುಬ್ರಮಣ್ಯ, ನಾಗರಾಜ್, ಎನ್. ಅಶೋಕ್, ಸಂದೇಶ್ ಪ್ರಕಾಶ್, ಸ್ಥಳ: ವಿವೇಕಾನಂದ ಕ್ರೀಡಾಂಗಣ, ಕುವೆಂಪುನಗರ, ಸಂಜೆ 6ಕ್ಕೆ.
- **ವ್ಯವಸ್ಥಾಪಕರು :** ಡಾಕ್ಟರ್ಸ್ ಡೈರೆಕ್ಟರಿ ಬಿಡುಗಡೆ, ಮುಖ್ಯ ಅತಿಥಿಗಳು : ಶಾಸಕ ಟಿ.ಎಸ್. ಶ್ರೀವತ್ಸ, ಡಾ. ಕೆ.ಎಸ್. ಸೌಭಾಗ್ಯಲಕ್ಷ್ಮಿ, ಡಾ. ಬಿ.ಎನ್. ಶಶಿಧರ, ಪತ್ರಕರ್ತ ಕೆ. ನರಸಿಂಹಮೂರ್ತಿ, ಸ್ಥಳ : ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್, ಜೆಎಲ್‌ಬಿ ರಸ್ತೆ, ಸಂಜೆ 6.15ಕ್ಕೆ.
- **ಶ್ರೀ ಮಹಾಜನ ಸಭಾ ಟ್ರಸ್ಟ್:** ತಿರುಪ್ಪಾವೈ ಪಾರಾಯಣ, ಆಧ್ಯಾತ್ಮಿಕ ಪ್ರವಚನಕಾರರಾದ ಡಾ.ಎನ್.ಕೆ. ರಾಮಶೇಷನ್ ಅವರಿಂದ ಶ್ರೀ ಗೋದಾವರಿ ವಿರಚಿತ ತಿರುಪ್ಪಾವೈ ಪ್ರವಚನ, ಸ್ಥಳ: ಶ್ರೀ ಮಹಾಜನ ಸಭಾ ಟ್ರಸ್ಟ್, ಶ್ರೀರಾಮಮಂದಿರ, ಕಾಂತರಾಜ ರಸ್ತೆ, ಕೃಷ್ಣಮೂರ್ತಿಪುರಂ. ಸಂಜೆ 6.30ಕ್ಕೆ.
- **ಹೆರಿಟೇಜ್ ಹೌಸ್ :** ಡಾ. ಹನಿ ಉನ್ನಿಕೃಷ್ಣನ್ ಅವರಿಂದ ಲಾಸ್ಯ ಮಾಧುರ್ಯಂ : ಮೋಹಿನಿಯಾಟ್ಟಂ ನೃತ್ಯ ಪ್ರದರ್ಶನ, ಸ್ಥಳ: ಹೆರಿಟೇಜ್ ಹೌಸ್, ಸಂಜೆ 7ಕ್ಕೆ.

ಸುತ್ತೂರಿನಲ್ಲಿಂದು, ನಂಜನಗೂಡು ತಾಲೂಕು

- **ಜಗದ್ಗುರು ಶ್ರೀ ವೀರಸಿಂಹಾಸನ ಮಹಾ ಸಂಸ್ಥಾನ ಮಠ:** ಧನುರ್ಮಾಸದ ವಿಶೇಷ ಪೂಜೆ, ಸ್ಥಳ: ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃ ಗದ್ದುಗೆ, ಶ್ರೀ ಮಹೇಶ್ವರ ಸನ್ನಿಧಿ, ಶ್ರೀ ವೀರಭದ್ರೇಶ್ವರ, ಶ್ರೀ ಸೋಮೇಶ್ವರ, ಶ್ರೀ ನಾರಾಯಣಸ್ವಾಮಿ ದೇವಸ್ಥಾನ, ಸುತ್ತೂರು ಶ್ರೀಕ್ಷೇತ್ರ, ಬೆಳಗ್ಗೆಯಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಪತ್ರಿಕಾ ಧ್ವನಿ– ಮೈಸೂರು ಸೀಮೆಯ ಪತ್ರಕರ್ತರ ಪರಿಚಯಾತ್ಮಕ ಕಾರ್ಯಕ್ರಮ, ಪ್ರಸ್ತುತಿ : ಹಿರಿಯ ಪತ್ರಕರ್ತರಾದ ಡಾ. ಕೂಡ್ಲಿ ಗುರುರಾಜ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ನಿತಿನ್ ರಾಜಾರಾಂ ಶಾಸ್ತ್ರೀ, ವ್ಯಾಖ್ಯಾನ–ಡಾ. ಜಿ.ಆರ್.ತಿಪ್ಪೇಸ್ವಾಮಿ, 6.50 ರೈತರಿಗೆ ಸಲಹೆ, 7.15 ಭಾವಗೀತೆ, 8.30 ಯುವವಾಣಿ –ಪರೀಕ್ಷೆಗೆ ಸಿದ್ಧರಾಗೋಣ ಬನ್ನಿ– ದ್ವಿತೀಯ ಪಿ.ಯು.ಸಿ. ಪರೀಕ್ಷಾ ಸಿದ್ಧತಾ ಬಾನುಲಿ ಸರಣಿ ಕಾರ್ಯಕ್ರಮ, ಪ್ರಸ್ತುತಿ–ದಿಗ್ವಿಜಯ್ .ಬಿ., 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಸೀತಾಲಕ್ಷ್ಮೀ ವೆಂಕಟೇಶನ್ ಮತ್ತು ಸಹಕಲಾವಿದರಿಂದ – ಹಾಡುಗಾರಿಕೆ, 10.30 ಹಿಂದಿ ಚಿತ್ರಗೀತೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ, ನಮ್ಮೂರ್ ಹೆಸರು, ಪ್ರಸ್ತುತಿ : ಡಾ. ಮೈಸೂರು ಉಮೇಶ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಹಿಂದಿ ಚಿತ್ರಗೀತೆಗಳು, 3.00 ಜನಪದ ಸಂಗೀತ, 3.30 ಮಕ್ಕಳ ಮಂಟಪ, 4.00 ನಾಟಕ –ಧ್ರುವ ಸ್ವಾಮಿನಿ, 4.30 ನೆನಪಿನಂಗಳ (ಧ್ವನಿ ಮುದ್ರಣ ಭಂಡಾರದಿಂದ), 6.50 ಕೃಷಿರಂಗ :ಕಿಸಾನ್ ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ, ನೈಸರ್ಗಿಕ ಕೃಷಿಯ ಪ್ರಾಮುಖ್ಯತೆ ಕುರಿತು ಸಂವಾದ ಭಾಗವಹಿಸುತ್ತಾರೆ–ಶ್ರೀರಂಗಪಟ್ಟಣ ತಾಲೂಕು, ಅರಕೆರೆ ಗ್ರಾಮದ ಕೃಷಿಕ ದಂಪತಿ ಕೆ.ನಾರಾಯಣಗೌಡ ಮತ್ತು ವನಿತಾ ನಾರಾಯಣಗೌಡ, 8.00 ಸವಿನೆನಪು, 9.00 ಯುವವಾಣಿ, 10.00 ಆಕಾಶವಾಣಿ ಸಂಗೀತ್ ಸಮ್ಮೇಳನ್– 2025– ಪಂಡಿತ್ ಧರ್ಮನಾಥ್ ಮಿಶ್ರ, ತುಮರಿ, ದಾದ್ರ

2028ರ ವಿಧಾನಸಭಾ ಚುನಾವಣೆ

ಚಾಮರಾಜ ಬಿಜೆಪಿ ಟಿಕೆಟ್ ನನಗೂ ಬೇಕು!

● ಈಗ ಪಕ್ಷದ ಮುಖಂಡ, ಚಿತ್ರನಟ ಜಯಪ್ರಕಾಶ್ ಎಂಟ್ರಿ ● 1994 ರಿಂದ 2023ರವರೆಗೆ ಶಂಕರಲಿಂಗೇಗೌಡರಿಂದ ಹಿಡಿದು ಹಲವರಿಗೆ ಟಿಕೆಟ್ ತ್ಯಾಗ ಮಾಡಿದ್ದೇನೆ!



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬಿಜೆಪಿ ಮುಖಂಡ ಜಯಪ್ರಕಾಶ್ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಮೈಸೂರು,ಜ.9(ಎಂಟಿವೈ)– ಬಿಜೆಪಿಗೆ ನಿಷ್ಠಾವಂತನಾಗಿ ಪಕ್ಷ ಸಂಘಟನೆ ಮಾಡುತ್ತಾ ಬಂದಿರುವ ನಾನು, ಈ ಹಿಂದೆ ಹಲವರಿಗಾಗಿ ಚಾಮರಾಜ ವಿಧಾನಸಭಾ ಕ್ಷೇತ್ರದ ಟಿಕೆಟ್ ತ್ಯಾಗ ಮಾಡಿದ್ದು, ಮುಂಬರುವ ವಿಧಾನ ಸಭಾ ಚುನಾವಣೆಯಲ್ಲಿ ನನಗೇ ಟಿಕೆಟ್ ನೀಡಬೇಕು ಎಂದು ಬಿಜೆಪಿ ಮುಖಂಡ ಜಯಪ್ರಕಾಶ್(ಜೆಪಿ) ಪಕ್ಷದ ಮುಖಂಡರು ಒತ್ತಾಯಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನ ದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಚಾಮರಾಜ ಕ್ಷೇತ್ರದಲ್ಲಿ ನಾನು ಪ್ರಬಲ ಆಕಾಂಕ್ಷಿಯಾಗಿದ್ದು, ಹಲವು ವರ್ಷ ಗಳಿಂದ ಪಕ್ಷ ಸಂಘಟನೆಯಲ್ಲಿ ತೊಡಗಿಸಿ ಕೊಂಡಿದ್ದೇನೆ. ನನಗೇ ಪಕ್ಷದ ಟಿಕೆಟ್ ನೀಡು ವಂತೆ ವರಿಷ್ಠರಲ್ಲಿ ಮನವಿ ಮಾಡಿದರು.

1994 ರಿಂದ 2023ರವರೆಗೆ ದಿ.ಶಂಕರ ಲಿಂಗೇಗೌಡರು ಸೇರಿದಂತೆ ಹಲವರಿಗೆ ಬಿಜೆಪಿ ಟಿಕೆಟ್ ಬಿಟ್ಟುಕೊಟ್ಟಿದ್ದೇನೆ. ಇದನ್ನು ಪಕ್ಷದ ಮುಖಂಡರು ಮನಗಾಣಬೇಕು. ಸುದೀರ್ಘ ಕಾಲದಿಂದ ಪಕ್ಷಕ್ಕೆ ನಿಷ್ಠೆ ಯಿಂದ ಸೇವೆ ಸಲ್ಲಿಸುತ್ತಾ ಬಂದಿರುವ ನನಗೆ ಮುಂದಿನ ಚುನಾವಣೆಯಲ್ಲಿ ನ್ಯಾಯ ದೊರಕಿಸಿಕೊಡಬೇಕು ಎಂದು ಕೋರಿದರು.

ನಾನು ಸೆನೆಟ್ ಸದಸ್ಯನಾಗಿ, ಚಲನ ಚಿತ್ರ ನಟನಾಗಿ ಅಪಾರ ಬೆಂಬಲಿಗರನ್ನು, ಅಭಿಮಾನಿಗಳನ್ನು ಹೊಂದಿದ್ದೇನೆ. ಜನತಾ ಪರಿವಾರದಲ್ಲಿ ಪ್ರಮುಖ ನಾಯಕರಾಗಿ ವಿವಿಧ ಜವಾಬ್ದಾರಿಯನ್ನು ನಿಭಾಯಿಸಿದ್ದೇನೆ. ಹಿರಿಯ ನಾಯಕ ರಾಗಿದ್ದ ಅನಂತಕುಮಾರ್, ಡಾ. ಜೀವ ರಾಜ್ ಆಳ್ವ ಅವರೊಂದಿಗೆ ಬೃಹತ್ ಸಮಾವೇಶದಲ್ಲಿ ದೊಡ್ಡ ಮಟ್ಟದ ಬೆಂಬಲಿಗರೊಂದಿಗೆ ಪಕ್ಷಕ್ಕೆ ಸೇರಿದ್ದು ಎಲ್ಲರಿಗೂ ಗೊತ್ತಿದೆ. ಹೀಗಾಗಿ ಪಕ್ಷ ಸಂಘಟನೆಯಲ್ಲಿ ತೊಡಗಿಸಿಕೊಂಡಿರುವ ತಮಗೆ ಈ ಬಾರಿ ಟಿಕೆಟ್ ದೊರೆಯುವ ವಿಶ್ವಾಸವಿದೆ ಎಂದು ಹೇಳಿದರು.

ಮಾಜಿ ಸಂಸದ ಪ್ರತಾಪ್ ಸಿಂಹ ಚಾಮರಾಜ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸುವುದಾಗಿ ಹೇಳಿಕೆ ನೀಡಿರುವುದಕ್ಕೆ ಸಾವಿರಾರು ಬೆಂಬಲಿಗರು ಸ್ಪಷ್ಟನೆ ನೀಡುವಂತೆ ನನ್ನ ಕೋರಿದ್ದರು. ಅಲ್ಲದೆ, ಕಾರ್ಯಕರ್ತರು, ಹಿತೈಷಿಗಳು ಮುಂಬರುವ ಚುನಾವಣೆಯಲ್ಲಿ ಬಿಜೆಪಿ ಯಿಂದ ಚಾಮರಾಜದಲ್ಲೇ ಸ್ಪರ್ಧಿಸುವಂತೆ ನನಗೆ ಸಲಹೆ ನೀಡಿದ್ದಾರೆ. ಈ ಹಿನ್ನೆಲೆಯಲ್ಲಿ ಪಕ್ಷದ ವರಿಷ್ಠರು ಪ್ರತಾಪ ಸಿಂಹ ನೀಡಿರುವ ಹೇಳಿಕೆಯಿಂದ ಉಂಟಾಗಿರುವ ಗೊಂದಲ ನಿವಾರಿಸಬೇಕು. ಟಿಕೆಟ್ ಆಕಾಂಕ್ಷಿಗಳು ಪಕ್ಷದಲ್ಲಿ ಒಡಕು ಉಂಟು ಮಾಡಬಾರದು ಎಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಜೆಪಿ ಬೆಂಬಲಿಗರಾದ ಶಿವಕುಮಾರ್, ಶಾಂತ, ತೇಜಸ್ ಲೋಕೇಶ್‌ಗೌಡ, ಶಾಂತಮ್ಮ ಹಾಗೂ ಮಂಜುಳ ಇದ್ದರು.

ಸರ್ಕಾರಿ ನೌಕರರು ಕ್ರೀಡಾಭ್ಯಾಸದ ಮೂಲಕ ಫಿಟ್‌ನೆಸ್ ಕಾಯ್ದುಕೊಳ್ಳಿ

● ಎಂಎಲ್‌ಸಿ ಶಿವಕುಮಾರ್ ಕಿವಿಮಾತು ● ಕ್ರೀಡಾಕೂಟದಲ್ಲಿ ವಿಜೇತರಿಗೆ ಬಹುಮಾನ ವಿತರಣೆ

ಮೈಸೂರು, ಜ.9(ವಿವಿಹೆಚ್)– ಸರ್ಕಾರಿ ನೌಕರರು ಉತ್ತಮ ಆರೋಗ್ಯದ ದೃಷ್ಟಿಯಿಂದ ನಿರಂತರವಾಗಿ ಕ್ರೀಡಾಭ್ಯಾಸ ಮಾಡುವ ಮೂಲಕ ಫಿಟ್‌ನೆಸ್ ಕಾಪಾಡಿ ಕೊಳ್ಳಿ ಎಂದು ವಿಧಾನ ಪರಿಷತ್ ಸದಸ್ಯ ಕೆ.ಶಿವಕುಮಾರ್ ತಿಳಿಸಿದರು.

ಮೈಸೂರು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕ್ರೀಡಾ ಇಲಾಖೆ ಹಾಗೂ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ ಶಾಖೆ ವತಿಯಿಂದ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಜಿಲ್ಲಾ ಮಟ್ಟದ ಸರ್ಕಾರಿ ನೌಕರರ ಕ್ರೀಡಾಕೂಟದ ಸಮಾರೋಪ ಸಮಾರಂಭದಲ್ಲಿ ವಿಜೇತರಿಗೆ ಪ್ರಶಸ್ತಿ ಪ್ರದಾನ ಮಾಡಿ ಅವರು ಮಾತನಾಡಿದರು.

ಕ್ರೀಡೆಯಲ್ಲಿ ತೊಡಗಿಸಿಕೊಳ್ಳುವ ಖುಷಿ, ಎಷ್ಟೇ ಹಣವಿದ್ದರೂ ದೊರಕುವುದಿಲ್ಲ. ನಿವೃತ್ತಿಯ ನಂತರವೂ ಕ್ರೀಡಾಪಟುಗಳಾಗಿ ಸಕ್ರಿಯವಾಗಿರಬೇಕು. ಆಯಾ ವಯಸ್ಸಿಗೆ ಅನುಗುಣವಾಗಿ ಕ್ರೀಡೆಗಳು ನಡೆಯುತ್ತಲೇ ಇರುತ್ತವೆ. ಮೈಸೂರಿನಲ್ಲಿ ನಡೆಯುವ ಮ್ಯಾರಥಾನ್ ಬೇರೆಲ್ಲೂ ನಡೆಯುವುದಿಲ್ಲ. ನಡಿಯುತ್ತಿರೋ, ಓಡುತ್ತೀರೋ ಆದರೆ ಮ್ಯಾರಥಾನ್‌ಗಳಲ್ಲಿ ಪ್ರತಿಯೊಬ್ಬರೂ ಕೂಡ ಭಾಗವಹಿಸಬೇಕು ಎಂದು ಕಿವಿಮಾತು ಹೇಳಿರು.



ಜಿಲ್ಲಾ ಮಟ್ಟದ ಸರ್ಕಾರಿ ನೌಕರರ ಕ್ರೀಡಾಕೂಟದ ಸಮಾರೋಪ ಸಮಾರಂಭದಲ್ಲಿ ಎಂಎಲ್‌ಸಿ ಕೆ.ಶಿವಕುಮಾರ್ ಪ್ರಶಸ್ತಿ ಪ್ರದಾನ ಮಾಡಿದರು.

ಸರ್ಕಾರಿ ನೌಕರರ ಜಿಲ್ಲಾ ಸಂಘದ ಕಚೇರಿಯಲ್ಲಿ ಗ್ರಂಥಾಲಯವನ್ನು ತೆರೆಯಬೇಕು. ಒಳ್ಳೆಯ ಪುಸ್ತಕ ಹಾಗೂ ದಿನಪತ್ರಿಕೆಗಳನ್ನು ಇಡಬೇಕು. ನೌಕರರು ಕಚೇರಿಯಿಂದ ಕೆಲಸ ಮುಗಿಸಿ ತೆರಳುವಾಗ ಇಲ್ಲಿಗೆ ಭೇಟಿ ನೀಡಿ ಓದಲು ಸಹಕಾರಿ ಯಾಗಲಿದೆ. ಈ ನಿಟ್ಟಿನಲ್ಲಿ ಮೈಸೂರು ಜಿಲ್ಲೆ ರಾಜ್ಯಕ್ಕೆ ಮಾದರಿಯಾಗಬೇಕು ಎಂದು ಸಲಹೆ ನೀಡಿದರು.

ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ಮಾತನಾಡಿ, ಕ್ರೀಡಾಕೂಟದಲ್ಲಿ ಭಾಗವಹಿಸುವ ಉದ್ದೇಶದಿಂದ ಮಾತ್ರ ಕ್ರೀಡೆಯಲ್ಲಿ ತೊಡಗಿಸಿಕೊಳ್ಳಬೇಡಿ, ನಿಮ್ಮ ಆರೋಗ್ಯದ ಉದ್ದೇಶದಿಂದ ಸಕ್ರಿಯವಾಗಿ ಆಟೋಟಗಳಲ್ಲಿ ಪಾಲ್ಗೊಳ್ಳಿ. ಇದು ಒತ್ತಡ ನಿವಾರಣೆಯೊಂದಿಗೆ ದೈಹಿಕವಾಗಿ ಸಾಮರ್ಥ್ಯ ವೃದ್ಧಿಗೆ ಸಹಕಾರಿಯಾಗುತ್ತದೆ ಎಂದರು.

ಸರ್ಕಾರಿ ನೌಕರರಿಂದ ಕ್ರೀಡಾಕೂಟ ಮಾತ್ರವಲ್ಲದೇ ಆರೋಗ್ಯ ಶಿಬಿರಗಳು, ಇತರೆ ಸಮಾಜಮುಖಿ ಕಾರ್ಯಕ್ರಮಗಳನ್ನು ಆಯೋಜಿಸಿ, ಇದಕ್ಕೆ ಜಿಲ್ಲಾಡಳಿತ ಸದಾ ಬೆಂಬಲ ನೀಡುತ್ತದೆ ಎಂದರು.

3180 ಮಂದಿ ಸ್ಪರ್ಧೆ: ಜಿಲ್ಲಾ ಮಟ್ಟದ ಸರ್ಕಾರಿ ನೌಕರರ ಕ್ರೀಡಾಕೂಟದ ಸ್ಪರ್ಧೆಗಳಲ್ಲಿ ಪಾರಮ್ಯ ಮೆರೆದ ಮಿಥುನ್ ಗೌಡ, ಪಂಪಾಪತಿ, ಉದಯ್‌ಗೌಡ, ಮೇಘನಾ, ಎಸ್.ಎಂ.ಉಮಾ ಪದಕಗಳ ಗೊಂಚಲು ಪಡೆದು ಸಾಧನೆ ಮಾಡಿದರು.

3180 ಜನ ಸರ್ಕಾರಿ ನೌಕರರು ಕ್ರೀಡಾಕೂಟದಲ್ಲಿ ಭಾಗವಹಿಸಿ, 1186 ಮಂದಿ ಪ್ರಶಸ್ತಿಗಳನ್ನು ಜಯಿಸಿದ್ದಾರೆ. ಇದರಲ್ಲಿ ಮಹಿಳೆಯರು ಮತ್ತು ಪುರುಷರು ಸೇರಿ 486 ಮಂದಿ ಗೋಲ್ಡ್‌ಮೆಡಲ್ ಗೆದ್ದಿದ್ದಾರೆ.

ಸಂಘದ ಜಿಲ್ಲಾಧ್ಯಕ್ಷ ಡಾ. ಸಿ.ಬಿ.ಅರುಣ ಕುಮಾರ್, ಕಾರ್ಯದರ್ಶಿಗಳಾದ ಎಂ.ಕೆ. ಗಣೇಶ್, ಜಯಪ್ಪ, ಸಂಘಟನಾ ಕಾರ್ಯದರ್ಶಿ ಮಹದೇವ, ಜಂಟಿ ಕಾರ್ಯದರ್ಶಿ ಮಾಲೇಗೌಡ, ವಿಭಾಗೀಯ ಉಪಾಧ್ಯಕ್ಷ ಮಾಲಂಗಿ ಸುರೇಶ್, ಎಸ್.ರೇವಣ್ಣ, ರಘು ಉಪಸ್ಥಿತರಿದ್ದರು.

ಸಿಗ್ಮಾ ಆಸ್ಪತ್ರೆಯಲ್ಲಿ ಮಹಿಳೆಯರ ಆರೋಗ್ಯ ಶಿಬಿರ



ಮೈಸೂರಿನ ಸಿಗ್ಮಾ ಆಸ್ಪತ್ರೆಯಲ್ಲಿ ಮಹಿಳೆಯರಿಗಾಗಿ ಆಯೋಜಿಸಿರುವ ವಿಶೇಷ ಆರೋಗ್ಯ ತಪಾಸಣಾ ಶಿಬಿರಕ್ಕೆ ಚಾಲನೆ ನೀಡಿದ ವೇಳೆ ಉಪಸ್ಥಿತರಿದ್ದ ವೈದ್ಯರು ಹಾಗೂ ಸಿಬ್ಬಂದಿ.

ಮೈಸೂರು, ಜ.9– ಮೈಸೂರಿನ ಸಿಗ್ಮಾ ಆಸ್ಪತ್ರೆಯಲ್ಲಿ ಮಹಿಳೆಯರಿಗಾಗಿ ಆಯೋಜಿಸಿರುವ ಮೂರು ದಿನಗಳ ಆರೋಗ್ಯ ಶಿಬಿರಕ್ಕೆ ಶುಕ್ರವಾರ ಚಾಲನೆ ದೊರಕಿತು.

ಮೊದಲ ದಿನವೇ ನೂರಕ್ಕೂ ಹೆಚ್ಚು ಮಹಿಳೆಯರು ಗರ್ಭಕೋಶ, ಗರ್ಭಕಂಠ, ಸ್ತನದಲ್ಲಿ ಗಂಟು, ಮುಟ್ಟಿನ ತೊಂದರೆ ಇನ್ನಿತರ ಸಮಸ್ಯೆಗಳಿಗೆ ಸಂಬಂಧಿಸಿದಂತೆ ತಪಾಸಣೆಗೆ ಒಳಪಟ್ಟು, ಸೂಕ್ತ ವೈದ್ಯಕೀಯ ಸಲಹೆ ಪಡೆದರು. ಈ ವೇಳೆ ಅಗತ್ಯವಿದ್ದವರಿಗೆ ಉಚಿತವಾಗಿ ಸ್ಕ್ಯಾನಿಂಗ್ ಮಾಡಲಾಯಿತು.

ಈ ವೇಳೆ ಹಿರಿಯ ಪ್ರಸೂತಿ ತಜ್ಞೆ ಡಾ. ಲೀಲಾವತಿ ಮಾತನಾಡಿ, ಹೆಚ್ಚು ಜವಾಬ್ದಾರಿ ನಿರ್ವಹಿಸುವ ಮಹಿಳೆಯರ ಆರೋಗ್ಯದಲ್ಲಿ ಏರುಪೇರಾಗುವುದು ಸಹಜ. ಆದರೆ ನಿರ್ಲಕ್ಷಿಸಿದರೆ ಸಮಸ್ಯೆ ಹೆಚ್ಚಾಗುವ ಸಾಧ್ಯತೆ ಇರುತ್ತದೆ. ಮಹಿಳೆಯರ ಆರೋಗ್ಯ ಕಾಳಜಿಯಿಂದ ಆಯೋಜಿಸಿರುವ ಈ ಶಿಬಿರದ ಪ್ರಯೋಜನ ಪಡೆದುಕೊಳ್ಳುವಂತೆ ಸಲಹೆ ನೀಡಿದರು.

ಸ್ತ್ರೀ ರೋಗ ಮತ್ತು ಪ್ರಸೂತಿ ಲ್ಯಾಪ್ರೊಸ್ಕೋಪಿಕ್ ತಜ್ಞೆ ಡಾ.ತೇಜಸ್ವಿನಿ ಮಾತನಾಡಿ, ಶಿಬಿರದಲ್ಲಿ ಸ್ಕ್ಯಾನಿಂಗ್ ಕೂಡ ಉಚಿತವಾಗಿ ಮಾಡಲಾಗುತ್ತಿದೆ. ಈ ಮೂಲಕ ಸಮಸ್ಯೆಯನ್ನು ಪತ್ತೆ ಹಚ್ಚಿ, ಸೂಕ್ತ ಚಿಕಿತ್ಸೆ ನೀಡಲಾಗುವುದು ಎಂದರು.

ಆಸ್ಪತ್ರೆ ನಿರ್ದೇಶಕಿಯೂ ಆದ ಹಿರಿಯ ಮಕ್ಕಳ ತಜ್ಞೆ ಡಾ.ರಾಜೇಶ್ವರಿ ಮಾದಪ್ಪ ಮಾತನಾಡಿ, ಮಹಿಳೆಯರ ಆರೋಗ್ಯ ದೃಷ್ಟಿಯಿಂದ ಈ ಶಿಬಿರ ಮಾಡುತ್ತಿರುವುದು ಒಂದು ವಿಶೇಷವಾಗಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಸದುಪಯೋಗಪಡಿಸಿಕೊಳ್ಳಬೇಕು ಎಂದು ತಿಳಿಸಿದರು.

ವ್ಯವಸ್ಥಾಪಕ ನಿರ್ದೇಶಕ ಎಸ್.ಜ್ಞಾನ ಶಂಕರ್ ಮಾತನಾಡಿ, ಇತ್ತೀಚೆಗೆ ಮಹಿಳೆಯರಿಗೆ ಸ್ತನ ಹಾಗೂ ಗರ್ಭಕೋಶದಲ್ಲಿ ಗೆಡ್ಡೆಗಳು ಇನ್ನಿತರ ಸಮಸ್ಯೆಗಳು ಹೆಚ್ಚಾಗುತ್ತಿದೆ. ಇಂತಹ ಸಮಸ್ಯೆಗಳಿಗೆ ಸೂಕ್ತ ಚಿಕಿತ್ಸೆ ನೀಡಲು ನಮ್ಮ ಆಸ್ಪತ್ರೆಯಲ್ಲಿ 35 ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಅನುಭವಿ ತಜ್ಞರು ಲಭ್ಯವಿದ್ದಾರೆ. 40ವರ್ಷ ದಾಟಿದ ಮಹಿಳೆಯರು ರೋಗಗಳಿಂದ ಬಳಲುವುದಕ್ಕಿಂತ ವರ್ಷಕ್ಕೊಮ್ಮೆ ತಪಾಸಣೆ ಮಾಡಿಸಿಕೊಂಡು ಆರೋಗ್ಯ ರಕ್ಷಣೆ ಮಾಡಿಕೊಳ್ಳುವುದು ಒಳ್ಳೆಯದು ಎಂದು ಕಿವಿಮಾತು ಹೇಳಿದರು.

ಶಸ್ತ್ರ ತಜ್ಞರಾದ ಡಾ.ಶರತ್ ಚಂದ್ರ ಮಾತನಾಡಿ, ಸ್ತ್ರೀಯರಿಗೆ ಗರ್ಭಕೋಶ ಮತ್ತು ಅಂಡಾಶಯದಲ್ಲಿ ಸಮಸ್ಯೆಗಳು, ಪಿತ್ತಕೋಶದಲ್ಲಿ ಕಲ್ಲು ಕಾಣಿಸುವುದು, ಉದರ ಸಮಸ್ಯೆಗಳು ಹಾಗೂ ಇನ್ನಿತರ ತೊಂದರೆಗಳು ಕಾಣಿಸಿಕೊಳ್ಳುತ್ತವೆ. ಅದಕ್ಕೆ ಸೂಕ್ತ ವೈದ್ಯಕೀಯ ಸಲಹೆ ಮತ್ತು ಚಿಕಿತ್ಸೆ ತೆಗೆದುಕೊಳ್ಳುವುದು ಅಗತ್ಯ ಎಂದು ತಿಳಿಸಿದರು.

ಈ ವೇಳೆ ಆಸ್ಪತ್ರೆಯ ಸ್ಥಾಪಕ ಸದಸ್ಯರೂ ಆದ ಹಿರಿಯ ಕಿಡ್ನಿ ಕಸಿತಜ್ಞ ಡಾ.ಕೆ.ಎಂ. ಮಾದಪ್ಪ, ಗ್ಯಾಸ್ಟ್ರೋ ತಜ್ಞ ಡಾ.ದಿಲೀಪ್, ಫಿಜಿಷಿಯನ್ ಡಾ.ರಾಕೇಶ್ ರಾಜೇ ಅರಸ್, ರೆಡಿಯೊಲೊಜಿಸ್ಟ್ ಡಾ.ನಯನ, ಆಸ್ಪತ್ರೆ ಸಿಬ್ಬಂದಿ, ವೈದ್ಯರು ಹಾಗೂ ಶಿಬಿರಾರ್ಥಿಗಳು ಉಪಸ್ಥಿತರಿದ್ದರು.

ಕ್ಯಾಲೆಂಡರ್ ಬಿಡುಗಡೆ



ಮೈಸೂರು ನಗರ ಪಾಲಿಕೆ ಮಾಜಿ ಸದಸ್ಯ ಮಹದೇಶ್ ಅವರು ಪ್ರತಾಪ್ ಸಿಂಹ ಸ್ನೇಹ ಬಳಗದ 2026ನೇ ವರ್ಷದ ಕ್ಯಾಲೆಂಡರ್ ಅನ್ನು ಬಿಡುಗಡೆ ಮಾಡಿದರು. ಈ ವೇಳೆ ಮಾಜಿ ಸಂಸದ ಪ್ರತಾಪ್ ಸಿಂಹ, ಮಂಜು, ಶ್ರೀಮತಿ ಭಾಗ್ಯ ಮಾದೇಶ್, ಮದನ್, ನಂದನ್, ರವಿ, ಸತೀಶ್ ಪಾಲಹಳ್ಳಿ, ಬಾಲಣ್ಣ, ಸುರೇಶ್, ಹರೀಶ್, ಆರ್‌ಎಕ್ಸ್ ಪ್ರಕಾಶ್, ಅಶೋಕ್, ಶ್ರೀನಿವಾಸ್, ಮಹೇಶ್ ಮತ್ತಿತರ ಮುಖಂಡರಿದ್ದರು.

ರಾಜ್ಯಪಾಲರ ಬಳಿಯೇ ಉಳಿದ ದ್ವೇಷ ಭಾಷಣ ಮಸೂದೆ

ಉಳಿದ 19 ವಿಧೇಯಕಗಳಿಗೆ ರಾಜ್ಯಪಾಲರ ಅಂಕಿತ

ಬೆಂಗಳೂರು, ಜ.9– ರಾಜ್ಯ ಸರ್ಕಾರ ವಿಧಾನಸಭೆ ಮತ್ತು ವಿಧಾನ ಪರಿಷತ್ತಿನಲ್ಲಿ ಅಂಗೀಕರಿಸಿ ಅನುಮೋದನೆಗಾಗಿ ಕಳುಹಿಸಿದ್ದ ಒಟ್ಟು 22 ಮಸೂದೆಗಳ ಪೈಕಿ 19ಕ್ಕೆ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರು ಅಂಕಿತ ಹಾಕಿದ್ದಾರೆ. ಆದರೆ ದ್ವೇಷ ಭಾಷಣ ಮಸೂದೆ ಇನ್ನೂ ರಾಜ್ಯಪಾಲರ ಪರಿಶೀಲನೆಯಲ್ಲಿದೆ.

ಎರಡು ಮಸೂದೆಗಳಾದ ಕರ್ನಾಟಕ ಪರಿಶಿಷ್ಟ ಜಾತಿ(SC ಒಳ ಮೀಸಲಾತಿ) ಮಸೂದೆ ಮತ್ತು ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ವಿಧೇಯಕಗಳನ್ನು ಹೆಚ್ಚಿನ ಸ್ಪಷ್ಟೀಕರಣ ಕೋರಿ ರಾಜ್ಯಪಾಲರು ಸರ್ಕಾರಕ್ಕೆ ಹಿಂತಿರುಗಿಸಿದ್ದಾರೆ ಎಂದು ರಾಜ್ಯಪಾಲರ ವಿಶೇಷ ಕಾರ್ಯದರ್ಶಿ ಆರ್ ಪ್ರಭು ಶಂಕರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕರ್ನಾಟಕ ದ್ವೇಷ ಭಾಷಣ ಮತ್ತು ದ್ವೇಷ ಅಪರಾಧ(ತಡೆಗಟ್ಟುವಿಕೆ)



ಥಾವರ್‌ಚಂದ್ ಗೆಹ್ಲೋಟ್

ಮಸೂದೆಗೆ ತೀವ್ರ ವಿರೋಧ ವ್ಯಕ್ತಪಡಿಸಿದ್ದ ಪ್ರತಿಪಕ್ಷ ಬಿಜೆಪಿ, ದ್ವೇಷ ಭಾಷಣ ಮಸೂದೆಗೆ ಸಹಿ ಹಾಕದಂತೆ ರಾಜ್ಯಪಾಲರಿಗೆ ಮನವಿ ಮಾಡಿತ್ತು.

ದ್ವೇಷ ಭಾಷಣ ಮಸೂದೆ ಬಗ್ಗೆ ಕಾನೂನು ತಜ್ಞರ ಜೊತೆ ಚರ್ಚಿಸಲು ರಾಜ್ಯಪಾಲರು ಚಿಂತನೆ ಮಾಡಿದ್ದಾರೆ ಎನ್ನಲಾಗಿದೆ. ರಾಷ್ಟ್ರಪತಿಗಳಿಗೂ ದ್ವೇಷ ಭಾಷಣ ಮಸೂದೆ ಕಳಿಸುವ ಸಾಧ್ಯತೆ ಇದೆ ಎನ್ನಲಾಗಿದೆ. ಈ ಮಸೂದೆಯು 1 ಲಕ್ಷ ರೂಪಾಯಿಗಳವರೆಗೆ ದಂಡ ಮತ್ತು ಏಳು ವರ್ಷಗಳವರೆಗೆ ಜೈಲು ಶಿಕ್ಷೆಯನ್ನು ವಿಧಿಸಲು ಅವಕಾಶ ನೀಡುತ್ತದೆ.

ಆಸ್ಕರ್ ಅಂಗಳಕ್ಕೆ ಕಾಂತಾರ ಚಾಪ್ಟರ್ 1


ನವದೆಹಲಿ, ಜ.9– ರಿಷಬ್ ಶೆಟ್ಟಿ ನಿರ್ದೇಶಿಸಿ, ನಟಿಸಿರುವ ಕಾಂತಾರ ಚಾಪ್ಟರ್ 1 ಆಸ್ಕರ್ ಅಂಗಳಕ್ಕೆ ಕಾಲಿಟ್ಟಿದೆ.

ಮಹಾವತಾರ್ ನರಸಿಂಹ ಹಾಗೂ ಕಾಂತಾರ ಅಧ್ಯಾಯ 1 ಚಿತ್ರಗಳು ಅಧಿಕೃತವಾಗಿ ಆಸ್ಕರ್ ಜನರಲ್ ಎಂಟ್ರಿ ಲಿಸ್ಟ್‌ನಲ್ಲಿ ಸ್ಥಾನ ಪಡೆದುಕೊಂಡಿವೆ. ಇದು ಭಾರತೀಯ ಚಿತ್ರರಂಗಕ್ಕೆ ಹೆಮ್ಮೆ ಹಾಗೂ ಐತಿಹಾಸಿಕ ಕ್ಷಣವಾಗಿದೆ.

ಆಸ್ಕರ್ ಪ್ರಶಸ್ತಿ ರೇಸ್‌ನಲ್ಲಿರುವ ಚಿತ್ರಗಳ ಅಂತಿಮ ಪಟ್ಟಿ ಜ.22 ರಂದು ಪ್ರಕಟವಾಗಲಿದೆ. ಮಾ.15 ರಂದು ಚಿತ್ರಗಳಿಗೆ ಆಸ್ಕರ್ ಪ್ರಶಸ್ತಿ ನೀಡಲಾಗುತ್ತದೆ.

ಕಳೆದ ವರ್ಷ ಕಾಂತಾರ–1 ಹಾಗೂ ಮಹಾವತಾರ್ ನರಸಿಂಹ ಚಿತ್ರಗಳು ತೆರೆಕಂಡು ಜನಮನ ಗೆದ್ದಿದ್ದವು. ಕೋಟಿ ಕೋಟಿ ಕಲೆಕ್ಷನ್ ಮಾಡಿ ದಾಖಲೆ ಬರೆದಿದ್ದವು. ಚಿತ್ರಗಳನ್ನು ಆಸ್ಕರ್ ವೇದಿಕೆಗೆ ಕೊಂಡೊಯ್ಯುವ ಪ್ರಯತ್ನ ಮಾಡುವುದಾಗಿ ಹೊಂಬಾಳೆ ಸಂಸ್ಥೆ ಹೇಳಿತ್ತು. ಆನಿಮೇಟೆಡ್ ವಿಭಾಗದಲ್ಲಿ ಮಹಾವತಾರ್ ನರಸಿಂಹ ಜನರಲ್ ಲಿಸ್ಟ್‌ನಲ್ಲಿ ಸ್ಥಾನ ಪಡೆದಿವೆ. ಈ ವರ್ಷದ ಆಸ್ಕರ್ ಜನರಲ್ ಎಂಟ್ರಿ ಲಿಸ್ಟ್‌ನಲ್ಲಿ ಕಾಣಿಸಿಕೊಂಡ 5 ಭಾರತೀಯ ಚಿತ್ರಗಳಲ್ಲಿ 2 ಹೊಂಬಾಳೆ ಫಿಲ್ಮ್ಸ್ ಬ್ಯಾನರ್ ಸಿನಿಮಾ ಅನ್ನೋದು ಮತ್ತೊಂದು ವಿಶೇಷ.

ಫೀಚರ್ ಸಿನಿಮಾಗಳ ವಿಭಾಗದಲ್ಲಿ ಪ್ರಶಸ್ತಿಗಳನ್ನು ಪಡೆಯಲು ಫಿಲ್ಮ್ ಮೇಕರ್ಸ್



ಪ್ರಯತ್ನಿಸುತ್ತಲೇ ಇದ್ದಾರೆ. ಭಾರತದಲ್ಲಿ ನಿರ್ಮಾಣವಾದ ಯಾವುದೇ ಚಿತ್ರಕ್ಕೆ ಆಸ್ಕರ್ ಸಿಕ್ಕಿಲ್ಲ. ಭಾರತೀಯ ಚಿತ್ರರಂಗದ ಈ ಎರಡೂ ಸಿನಿಮಾಗಳು ಈಗ ಹಾಲಿವುಡ್ ಸಿನಿಮಾಗಳ ಜೊತೆ ಆಸ್ಕರ್ ಪ್ರಶಸ್ತಿಗಾಗಿ ಪೈಪೋಟಿ ನಡೆಸುತ್ತಿವೆ.

ಡಾ. ವಸಂತ್ ಕುಮಾರ್ ತಿಮಕಾಪುರ ರಚಿತ ಎರಡು ಕೃತಿಗಳ ಬಿಡುಗಡೆ

ಕೃಷಿಯಲ್ಲಿ ಹೊಸ-ಹೊಸ ಆವಿಷ್ಕಾರಗಳಾಗಬೇಕು; ಕೃಷಿ ಸಚಿವ ಎನ್.ಚೆಲುವರಾಯಸ್ವಾಮಿ ಅಭಿಮತ

ಮೈಸೂರು, ಜ.9(ವಿವಿಹೆಚ್)– ರಾಜ್ಯದಲ್ಲಿ 80 ರಿಂದ 82ಲಕ್ಷ ಹೆಕ್ಟೇರ್‌ನಲ್ಲಿ ಕೃಷಿ ಮಾಡುತ್ತಿದ್ದೇವೆ. ಇದನ್ನು 90 ಲಕ್ಷಕ್ಕೆ ಹೆಚ್ಚಿಸಲು ಸಾಧ್ಯವಿಲ್ಲ. ಕೈಗಾರಿಕೆ, ವಸತಿ, ವಾಣಿಜ್ಯ ಉದ್ದೇಶಕ್ಕೆ ಭೂಮಿಯನ್ನ ಕಳೆದುಕೊಳ್ಳುತ್ತಾ ಬರುತ್ತಿದ್ದು, ಇರುವ ಕೃಷಿ ಭೂಮಿಯೂ ಕಡಿಮೆಯಾಗುತ್ತಾ ಬರುತ್ತಿದೆ. ಹಾಗಾಗಿ ಇರುವ ಜಾಗದಲ್ಲಿ ಹೆಚ್ಚು ಬೆಳೆ ಬೆಳೆದು ಅಧಿಕ ಲಾಭ ಗಳಿಸಲು ಮಿಶ್ರ ಬೇಸಾಯ ಮಾಡಬೇಕು ಎಂದು ಕೃಷಿ ಸಚಿವ ಎನ್.ಚೆಲುವ ರಾಯಸ್ವಾಮಿ ಅಭಿಪ್ರಾಯಪಟ್ಟರು.



ಡಾ.ವಸಂತ್ ಕುಮಾರ್ ತಿಮಕಾಪುರ ವಿರಚಿತ 'ವಸಂತ ವಿಹಾರ', 'ಪ್ಲಾಂಟ್ ಡಾಕ್ಟರ್' ಕೃತಿಗಳ ಬಿಡುಗಡೆಗೊಳಿಸಲಾಯಿತು.

ಡಾ.ವಸಂತ ತಿಮಕಾಪುರ ಅಭಿನಂದನಾ ಸಮಿತಿ, ವಿಸ್ಮಯ ಬುಕ್ ಹೌಸ್ ಸಹಯೋಗದೊಂದಿಗೆ ಮೈಸೂರಿನ ಮಾನಸ ಗಂಗೋತ್ರಿ ಆವರಣದ ವಿಜ್ಞಾನ ಭವನದಲ್ಲಿ ಶುಕ್ರವಾರ ಆಯೋಜಿಸಲಾಗಿದ್ದ ಡಾ.ವಸಂತ್ ಕುಮಾರ್ ತಿಮಕಾಪುರ ವಿರಚಿತ 'ವಸಂತ ವಿಹಾರ', 'ಪ್ಲಾಂಟ್ ಡಾಕ್ಟರ್' ಕೃತಿಗಳ ಲೋಕಾರ್ಪಣೆ ಮತ್ತು ವಸಂತೋತ್ಸವ ಅಭಿನಂದನಾ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಪ್ರಪಂಚದ ಚಿಕ್ಕ-ಚಿಕ್ಕ ದೇಶಗಳೂ ಎದುರಿಸದ ಹಲವಾರು ಸಮಸ್ಯೆಗಳನ್ನು ನಮ್ಮ ಸ್ವಯಂ ಅಪರಾಧ ಕಾರಣ ನಾವು ಎದುರಿಸುತ್ತಿದ್ದೇವೆ. ಚರ್ಚೆ ಮಾಡಿದರು ಯಾವುದೇ ಪ್ರಯೋಜನ ಆಗದಿರುವ ಮಟ್ಟಕ್ಕೆ ಬೆಳೆದು ನಿಂತಿದೆ. ರಾಮಾಯಣ, ಕುರುಕ್ಷೇತ್ರ ಕಾಲದಿಂದಲೂ ಕೃಷಿ ಬಗೆಗಿನ ಸುದೀರ್ಘ ಇತಿಹಾಸವಿರುವ ದೇಶ ನಮ್ಮದು. ನಮ್ಮಲ್ಲಿರುವ ಹಲವಾರು ತಪ್ಪುಗಳಿಂದ ನಾವು ಬೇರೆ ದೇಶಗಳಿಗೆ ಪೈಪೋಟಿ ನೀಡಲು ಆಗುತ್ತಿಲ್ಲ ಎಂದು ಬೇಸರಿಸಿದರು.

ಕೃಷಿ ಪ್ರಧಾನ ರಾಷ್ಟ್ರ ನಮ್ಮದಾಗಿದ್ದು, ಶೇ.70ಕ್ಕೂ ಅಧಿಕ ಜನರು ಕೃಷಿ ಅವಲಂಬಿತರಾಗಿದ್ದಾರೆ. ಆರ್ಥಿಕತೆಯಲ್ಲಿ ಸದೃಢತೆ ಕಾಣಬೇಕಾದರೆ ನಾವು ಕೃಷಿಯಲ್ಲಿ ಪರಿಣಾಮಕಾರಿಯಾಗಿ ಬೆಳವಣಿಗೆ ಕಾಣಬೇಕಿದೆ. ಇತರೆ ಶೇ.10 ರಿಂದ 15 ರಷ್ಟು ಜನಸಂಖ್ಯೆ ಮೇಲೆ ಅವಲಂಬಿತರಾಗಿ ದೇಶದ ಆರ್ಥಿಕತೆಯನ್ನು ಸದೃಢಪಡಿಸಲು ಸಾಧ್ಯವಿಲ್ಲ. 10 ಜನ ಮಾಡುವ ಕೆಲಸದಲ್ಲಿ ನಾವು ಲಾಭವನ್ನು ಕಾಣದೆ ಇರುವಾಗ ಕೇವಲ ಇಬ್ಬರು ಮಾಡುವ ಕೆಲಸದಲ್ಲಿ ಲಾಭ ಕಾಣಲು ಹೇಗೆ ಸಾಧ್ಯ. ಇದನ್ನು ನಾವೆಲ್ಲಾ ಅರ್ಥೈಸಿಕೊಂಡು ಜೊತೆಯಾಗಿ ಹೋದಲ್ಲಿ ಅಭಿವೃದ್ಧಿ ಸಾಧ್ಯ ಎಂದು ವಿವರಿಸಿದರು.

ನಮ್ಮ ತಂದೆಯವರು ಕೃಷಿ ಕಾಯಕದಲ್ಲಿ ತೊಡಗಿದ್ದವರು. ಕೃಷಿ ಸಚಿವನಾದ ಮೇಲೆ ಅದರ ಆಳ–ಅಗಲ ತಿಳಿಯಲಾರಂಭಿಸಿತು. ಕೃಷಿಯಲ್ಲಿನ ನ್ಯೂನತೆಗಳನ್ನು ಕಂಡುಹಿಡಿದು, ಪರಿಹಾರಗಳನ್ನು ತಿಳಿಯಪಡಿಸುವವರು ದೇಶಾದ್ಯಂತ ಲಕ್ಷಾಂತರ ಮಂದಿಯಿದ್ದಾರೆ. ಅವಕಾಶಕ್ಕಾಗಿ ಕಾಯದೇ ಜನರ ಸೇವೆಗಾಗಿ ದುಡಿಯುವ ಡಾ.ವಸಂತ ಕುಮಾರ್ ಅವರಂತಹ ವ್ಯಕ್ತಿತ್ವದ ಜನರನ್ನು ಗುರುತಿಸಿ, ಅವರಿಂದ ಅಗತ್ಯ ಸಲಹೆಗಳನ್ನು ಪಡೆದು ಜನೋಪಯೋಗಿ ಕೆಲಸಗಳಲ್ಲಿ ತೊಡಗಿಸಿಕೊಳ್ಳಬೇಕಿದೆ.

ಕೃಷಿ ಬಗ್ಗೆ ಹೆಚ್ಚಿನ ಆಸಕ್ತಿ ಹೊಂದಿ, ಕೃಷಿಯಲ್ಲಿ ಹೊಸ–ಹೊಸ ಆವಿಷ್ಕಾರ ಗಳನ್ನು ಪರಿಚಯಿಸಿ ಉತ್ತಮ ಬೆಳೆ ಬೆಳೆಯಲು ಅವರು ಸಹಕಾರಿಯಾಗಿ ದ್ದಾರೆ. ಜೊತೆಗೆ ಕೃಷಿಯಲ್ಲಿ ವಾರ್ಷಿಕ ವಾಗಿ ಕೋಟಿ ರೂ. ಸಂಪಾದಿಸುವಂತೆಯೂ ರೈತರನ್ನು ಪ್ರೇರೇಪಿಸಿರುವುದು ಶ್ಲಾಘನೀಯ ಎಂದರು.

ಕೃಷಿ ವಿಷಯ ಸಂಬಂಧ ಅಧ್ಯಯನ ನಡೆಸಿ ಹಳೇ ಮೈಸೂರು ಭಾಗಕ್ಕೆ ಕೃಷಿಯಲ್ಲಿ ಉಪಯೋಗವಾಗುವ ಮಾರ್ಗದರ್ಶನಗಳನ್ನು ವಸಂತ್ ಕುಮಾರ್ ನೀಡಿದ್ದಾರೆ. ಮುಂದಿನ ದಿನಗಳಲ್ಲಿ ಅವರೊಂದಿಗೆ ಚರ್ಚಿಸಿ, ರೈತರಿಗೆ ಅನುಕೂಲವಾಗುವ ಅಂಶಗಳನ್ನು ಜನರಿಗೆ ತಲುಪಿಸುವ ಕೆಲಸ ಮಾಡಲಾಗುವುದು ಎಂದರು.

ಮೈಸೂರು–ಕೊಡಗು ಲೋಕಸಭಾ ಸದಸ್ಯ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮಾತನಾಡಿ, ರಾಮನಿಗೆ ಸೇವೆ ಮಾಡಿದ ಹನುಮನ ಘನತೆ ನೆನೆಯಲು ಇಡೀ ದೇಶಾದ್ಯಂತ ಆಂಜನೇಯನ ಮಂದಿರಗಳನ್ನು ಕಾಣುತ್ತೇವೆ ಹಾಗೆಯೇ ಪ್ರಸ್ತುತ ರೈತರಿಗಾಗಿ ನಿಷ್ಕಲ್ಮಶವಾದ ಸೇವೆ ಮಾಡುವ ವ್ಯಕ್ತಿತ್ವಗಳನ್ನು ಗೌರವಿಸುವುದು ನಮ್ಮ ಕರ್ತವ್ಯವಾಗಿದೆ ಎಂದರು.

ಗ್ರಾಮೀಣ ಭಾಗಗಳಿಂದ ಆರ್ಥಿಕವಾಗಿ ಸದೃಢಪಡಿಸುವ ಉದ್ದೇಶದಿಂದ ವಿಕ್ಸಿತ್ ಭಾರತ್ ಜಾರಿಗೆ ತರಲಾಗಿದೆ. ಈ ಹಿಂದಿನ ಬಜೆಟ್, ಮುಂದೆ ಬರುವ ಬಜೆಟ್ ಎಲ್ಲದರಲ್ಲಿಯೂ ಪ್ರಮುಖ ನಾಲ್ಕು ಅಂಶಗಳನ್ನು ಒಳಗೊಂಡಿದ್ದು, ಮೊದಲನೇ ಅಂಶವೇ ಕೃಷಿಯಾಗಿದೆ. ಕೃಷಿಯಲ್ಲಿ ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಂಡು ಅಭಿವೃದ್ಧಿಗೆ ಶ್ರಮ ತೊಡುವಂತೆ ಪ್ರಧಾನಿ ನರೇಂದ್ರ ಮೋದಿ ಅವರು ಸೂಚನೆ ನೀಡಿದ್ದಾರೆ ಎಂದರು.

ಗ್ರಾಮೀಣ ಭಾಗದ ವಾತಾವರಣವನ್ನು ಉಳಿಸಿ, ಕೃಷಿಯಲ್ಲಿ ನವೀನ ತಂತ್ರಜ್ಞಾನ ಬಳಸಿ, ರೈತರಿಗೆ ನೆರವಾಗುವ ಕೆಲಸವನ್ನು ವಸಂತ ಕುಮಾರ್ ಅವರು ಮಾಡಿದ್ದಾರೆ. ಇದು ಹೀಗೆ ಮುಂದುವರಿಯಲಿ ಎಂದು ಆಶಿಸಿದರು.

ಎಷ್ಟೇ ಶ್ರಮ ವಹಿಸಿದರೂ ಇಂದಿನ ದಿನಗಳಲ್ಲಿ ಕೆಲಸ ಸಿಗುವುದು ಕಷ್ಟವಾಗಿದೆ. ಸರ್ಕಾರಿ ಕೆಲಸವೂ ಸಿಗುವುದು ಸಾಧ್ಯವಿಲ್ಲ. ಪ್ರತಿಯೊಬ್ಬರು ಸ್ವ–ಉದ್ಯಮ ಮಾಡುವ ಮೂಲಕ ನಿರೋದ್ಯೋಗ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕು. ಸ್ವ–ಉದ್ಯೋಗವಾಗಿ ಕೃಷಿಯನ್ನೇ ಆಯ್ದುಕೊಂಡು ಸರ್ಕಾರದಿಂದ ಸಿಗುವ ಸವಲತ್ತುಗಳ ಸದ್ಬಳಕೆ ಮಾಡಿಕೊಂಡು ದುಡಿದಿದ್ದೇ ಆದಲ್ಲಿ, ಪ್ರತಿ ಕುಟುಂಬ, ದೇಶ ಆರ್ಥಿಕವಾಗಿ ಸದೃಢವಾಗಲಿದೆ.
-ಎನ್.ಚೆಲುವರಾಯಸ್ವಾಮಿ

ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ಅಧ್ಯಕ್ಷ ಪ್ರೊ. ಎ.ಹೆಚ್.ರಾಜಾಸಾಬ್ ಮಾತನಾಡಿದರು. ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಕೆಂಗೇರಿ ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಡಾ.ನಿಶ್ಚಲಾನಂದ ಮಹಾಸ್ವಾಮೀಜಿ, ಇಕ್ರಿಸ್ಯಾಟ್ ನಿವೃತ್ತ ಉಪ ಮಹಾನಿರ್ದೇಶಕ ಡಾ.ಸಿ.ಎಲ್.ಲಕ್ಷ್ಮೀಪತಿ ಗೌಡ, ಲೇಖಕ ಪ್ರೊ.ಸಿ.ನಾಗಣ್ಣ, ಮೈಸೂರು ವಿವಿ ಕುಲಸಚಿವ (ಪರೀಕ್ಷಾಂಗ) ಪ್ರೊ.ಎನ್.ನಾಗರಾಜ, ಜೈವಿಕ ತಂತ್ರಜ್ಞಾನ ಅಧ್ಯಯನ ವಿಭಾಗದ ಪ್ರಾಧ್ಯಾಪಕ ಪ್ರೊ. ಎಸ್.ಉಮೇಶ, ಲೇಖಕ ಆರ್.ರಘು ಕೌಟಿಲ್ಯ, ಕೃತಿ ಲೇಖಕರೂ ಆದ ಕೃಷಿ ವಿಜ್ಞಾನಿ ವಸಂತ ಕುಮಾರ್ ತಿಮಕಾಪುರ, ವಿಸ್ಮಯ ಬುಕ್‌ಹೌಸ್‌ನ ಪ್ರಕಾಶ್ ಚಿಕ್ಕಪಾಳ್ಯ ಇತರರು ಉಪಸ್ಥಿತರಿದ್ದರು.

ನಕ್ಕರೆ ಅದೇ ಸ್ವರ್ಗ

ಅಪ್ಪ : ಏನೋ ರಾತ್ರಿ ಕಾರು ತಗೊಂಡು ಎಲ್ಲಿಗೆ ಹೋಗಿದ್ಯೊ?
ಮಗ : ಅಪ್ಪ, ನನ್ನ ಜೊತೆಯ ಹುಡುಗರನ್ನು ಕರೆದುಕೊಂಡು ಒಂದು ರೌಂಡ್ ಹಾಕಿಕೊಂಡು ಬಂದೆ.
ಅಪ್ಪ : ಹೌದಾ! ಆ ನಿನ್ನ ಹುಡುಗರು ಕಾರಿನಲ್ಲಿ ಹೇರ್‌ಪಿನ್, ಲಿಪ್‌ಸ್ಟಿಕ್ ಬಿಟ್ಟು ಹೋಗಿದ್ದಾರೆ ನೋಡು !

ಮೈಸೂರು ಮಿತ್ರ

ಶನಿವಾರ, ಜನವರಿ 10, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........

ಜೀವನದಲ್ಲಿ ಯಾವ ದಿನದ ಬಗ್ಗೆಯೂ ಪಶ್ಚಾತ್ತಾಪ ಪಡಬೇಡಿ. ಒಳ್ಳೆಯ ದಿನಗಳು ಸಂತೋಷ ಕೊಡುತ್ತವೆ. ಕೆಟ್ಟ ದಿನಗಳು ಅನುಭವದ ಜತೆ ಪಾಠ ಕಲಿಸುತ್ತವೆ. – ಅನಾಮಿಕ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಬಾಯಲೆಲ್ಲಾ ವೇದಾಂತ, ಮಾಡುವುದೆಲ್ಲಾ ರಾದ್ಧಾಂತ.

ನಿಮ್ಮ ಪತ್ರಗಳು

ಕನ್ನಡ ಚಿತ್ರರಂಗ ಮತ್ತೆ ಚಿಗುರಿ ನಿಲ್ಲಲಿ

ಮಾನ್ಯರೆ,

2025ರಲ್ಲಿ 'ಕಾಂತಾರ' ಸಿನಿಮಾ ಬಿಟ್ಟರೆ ಬೇರೆ ಸಿನಿಮಾಗಳು ಅಂತಹ ಹೆಸರು ಮಾಡಲಿಲ್ಲ. 'ಮಾರ್ಕ್' ಸಿನಿಮಾ ಸ್ವಲ್ಪ ಹೆಸರು ಮಾಡಿದ್ದು, 'ಸು ಫ್ರಂ ಸೋ' ಸ್ವಲ್ಪ ಮಟ್ಟಿಗೆ ಮೆಚ್ಚುಗೆ ಗಳಿಸಿದ್ದು ಬಿಟ್ಟರೆ 2025ರಲ್ಲಿ ತೆರೆಕಂಡ ಉಳಿದ ಸಿನಿಮಾಗಳು ಹೆಚ್ಚಿನ ಯಶಸ್ಸು ಕಾಣಲಿಲ್ಲ ಅಂತಾನೇ ಹೇಳಬಹುದು. ಒಳ್ಳೆಯ ಹಾಗೂ ವಿಭಿನ್ನ ಕಥೆಗಳ ಆಯ್ಕೆಯ ಕೊರತೆ, ದೊಡ್ಡ ಹೀರೋಗಳು ವರ್ಷಕ್ಕೊಂದು ಅಥವಾ ಎರಡು ವರ್ಷಕ್ಕೊಮ್ಮೆ ಒಂದು ಸಿನಿಮಾ ಮಾಡುವುದು, ಒಂದು ಸಿನಿಮಾ ಹಿಟ್ ಆದರೆ ಅದರ ಭಾಗ ಎರಡು–ಮೂರು ಮಾಡುತ್ತಾ ಹೋಗುವುದು, ಚಿತ್ರಮಂದಿರಕ್ಕೆ ಕರೆತರುವ ಆಕರ್ಷಿಸುವ ಹಾಡುಗಳ ಕೊರತೆ, ಹೀಗೆ ಚಿತ್ರರಂಗ ಸೊರಗುವುದಕ್ಕೆ ಅನೇಕ ಕಾರಣಗಳನ್ನು ಪಟ್ಟಿ ಮಾಡಬಹುದು.

ಹಿಂದೆ ಕನ್ನಡ ಚಿತ್ರರಂಗದಲ್ಲಿ ಈಗಿನಷ್ಟು ತಂತ್ರಜ್ಞಾನ ಮುಂದುವರೆಯದಿದ್ದರೂ ಇದ್ದ ತಂತ್ರಜ್ಞಾನ, ತಂತ್ರಜ್ಞರು, ಕಲಾವಿದರನ್ನು ಬಳಸಿಕೊಂಡು ವೈವಿಧ್ಯಮಯ ಚಿತ್ರಗಳನ್ನು ಕೊಡುತ್ತಿದ್ದರು. ಹಾಗೆಯೇ ವಿಭಿನ್ನವಾಗಿದ್ದ ಎಲ್ಲಾ ಚಿತ್ರಗಳನ್ನು ನೋಡಿ ಪ್ರೇಕ್ಷಕರೂ ಕೂಡ ಹರಸಿ ಗೆಲ್ಲಿಸುತ್ತಿದ್ದರು. ಉದಾಹರಣೆಗೆ ಒಳ್ಳೆಯ ಕಾಮಿಡಿ ಕಥಾ ವಸ್ತುವುಳ್ಳ 'ಗುರುಶಿಷ್ಯರು' ಒಳ್ಳೆಯ ಸಂದೇಶ ಸಾರುವ 'ಬಂಗಾರದ ಮನುಷ್ಯ' 'ಜೀವನ ಚೈತ್ರ', ವಿಭಿನ್ನ ಪ್ರೇಮಕಥೆ ಇದ್ದ 'ಬಂಧನ', ಯುವಜನರ ಮನಗೆದ್ದ ಹೊಸತನದ ಹಾಡುಗಳಿಂದ ಮೆಚ್ಚುಗೆಯಾದ 'ಪ್ರೇಮಲೋಕ', ಸಂಗೀತದಿಂದಲೇ ಮನಗೆದ್ದ 'ಮಲಯ ಮಾರುತ', ಅತ್ಯುತ್ತಮ ನಟನೆ, ನಿರ್ದೇಶನದಿಂದ ಮನಗೆದ್ದ 'ನಾಗರಹಾವು', ಹೊಸತನದ ಪ್ರಯೋಗದಿಂದ ಗಮನಸೆಳೆದ 'ಶ್', 'ಓಂ', ಒಳ್ಳೆಯ ಕಥಾವಸ್ತು ಮತ್ತು ಹಾಡುಗಳಿಂದ ಗೆದ್ದ 'ಅಮೃತ ವರ್ಷಿಣಿ' 'ನಮ್ಮೂರ ಮಂದಾರ ಹೂವೇ' 'ಗೀತ'...

ಹೀಗೆ ಪಟ್ಟಿ ಮಾಡುತ್ತಾ ಹೋದರೆ ನೂರಾರು ವಿಭಿನ್ನವಾದ ಒಳ್ಳೆಯ ಚಿತ್ರಗಳು ಹಿಂದೆ ತೆರೆಕಂಡು ಯಶಸ್ವಿ ಆಗುತ್ತಾ ಬಂದಿದೆ. ಕನ್ನಡದ ಪ್ರೇಕ್ಷಕರು ಒಳ್ಳೆಯ ಚಿತ್ರಗಳನ್ನು ಕೈ ಹಿಡಿಯದೇ ಬಿಟ್ಟಿರುವ ನಿದರ್ಶನಗಳು ಕಡಿಮೆಯೇ. ಈಗಿನ ಹಾಗೆ ಪ್ರಚಾರಕ್ಕೆ ಸಾಮಾಜಿಕ ಜಾಲತಾಣಗಳು ಇಲ್ಲದಿದ್ದರೂ ಆ ಚಿತ್ರಗಳು ಪ್ರೇಕ್ಷಕರ ಮನ ಗೆಲ್ಲುವಲ್ಲಿ ಯಶಸ್ವಿ ಆಗಿದ್ದವು. ಈಗಲೂ ಕೂಡ ಒಳ್ಳೆಯ ನಿರ್ದೇಶಕರು, ಕಲಾವಿದರು, ತಂತ್ರಜ್ಞರು ಇದ್ದಾರೆ. ತಂತ್ರಜ್ಞಾನ ಸಾಕಷ್ಟು ಮುಂದುವರೆದಿದೆ. ಪ್ರಚಾರಕ್ಕೆ ಸಾಮಾಜಿಕ ಜಾಲತಾಣವಿದೆ. ಹಾಗಾಗಿ ಒಳ್ಳೆಯ ಚಿತ್ರತೆರೆಗೆ ತರಲಿಕ್ಕೆ ಸಾಕಷ್ಟು ಪೂರಕವಾದ ಅಂಶಗಳಿವೆ. ಅದನ್ನು ಸರಿಯಾಗಿ ಬಳಸಿಕೊಂಡು ಒಳ್ಳೆಯ ಕನ್ನಡ ಚಿತ್ರಗಳು ಮುಂಬರುವ ದಿನಗಳಲ್ಲಿ ಹೆಚ್ಚೆಚ್ಚು ಬರಲಿ 'ಚಂದನವನ' ಮತ್ತೆ ಅರಳಲಿ.

–ರಾಘವೇಂದ್ರ ಜೋಯಿಸ್, ಮೈಸೂರು

ರಾಜ್ಯದ ಶಾಲೆಗಳಲ್ಲೂ ಕನ್ನಡ ದಿನಪತ್ರಿಕೆಗಳ ಓದು ಕಡ್ಡಾಯವಾಗಲಿ

ಮಾನ್ಯರೆ,

ಉತ್ತರ ಪ್ರದೇಶದ ಸರ್ಕಾರಿ ಶಾಲೆಗಳಲ್ಲಿ ಪತ್ರಿಕೆ ಓದುವುದು ಕಡ್ಡಾಯಗೊಳಿಸುವ ಮೂಲಕ ಶಾಲೆಗಳ ನೋಟವನ್ನು ಬದಲಾಯಿಸುವುದರ ಜೊತೆಗೆ, ವಿದ್ಯಾರ್ಥಿಗಳ ಆಲೋಚನಾ ಶೈಲಿಯನ್ನು ಸುಧಾರಿಸಲು ಅಲ್ಲಿನ ಯೋಗಿ ಸರ್ಕಾರ ಮಹತ್ವದ ನಿರ್ಧಾರಕ್ಕೆ ಬಂದಿರೋದು ಸ್ವಾಗತಾರ್ಹವಾದುದು. ಅಲ್ಲದೇ ನಮ್ಮ ರಾಜ್ಯದ ಎಲ್ಲಾ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಪತ್ರಿಕೆ ಓದುವುದನ್ನು ಕಡ್ಡಾಯಗೊಳಿಸಬೇಕೆಂಬ ಕೂಗೂ ಸಹ ಎದ್ದಿರುವುದು ನ್ಯಾಯ ಸಮ್ಮತವಾಗಿದೆ.

ಕನ್ನಡ ಭಾಷೆಯ ಅಭಿವೃದ್ಧಿಯಲ್ಲಿ ಕನ್ನಡ ದಿನಪತ್ರಿಕೆಗಳ ಪಾತ್ರ ಬಹುಮುಖ್ಯವಾಗಿದೆ. ಕನ್ನಡ ಶಬ್ದಗಳನ್ನು ಪತ್ರಿಕೆಗಳಲ್ಲಿ ಪ್ರತಿನಿತ್ಯ ಬಳಸುವ ಮೂಲಕವಾಗಿ ಕನ್ನಡ ಶಬ್ದ ಭಂಡಾರವು ಮಕ್ಕಳಲ್ಲಿ ಹೆಚ್ಚಾಗುತ್ತಿದೆ. ಭಾಷಾ ಕೌಶಲ ಸುಧಾರಣೆ, ಹೊಸ ಪದಗಳು, ವಾಕ್ಯ ರಚನೆ, ಬರವಣಿಗೆ ಶೈಲಿ, ಭಾಷಾ ನೈಪುಣ್ಯತೆಯನ್ನು ಮಕ್ಕಳು ರೂಢಿಸಿಕೊಳ್ಳುತ್ತಾರೆ. ಅದರಲ್ಲೂ ನಮ್ಮ ಸರ್ಕಾರಿ ಶಾಲೆಗಳಲ್ಲಿ ಕನ್ನಡ ಪತ್ರಿಕೆಗಳನ್ನು ಓದಿಸುವುದು ಕಡ್ಡಾಯವಾದರೆ ಗ್ರಾಮೀಣ ಮಕ್ಕಳಿಗೂ ಜಾಗತಿಕ ಜ್ಞಾನ, ಹಳ್ಳಿಯ ಮಕ್ಕಳಿಗೆ ದೇಶ–ವಿದೇಶದ ವಿದ್ಯಮಾನಗಳು ಸುಲಭವಾಗಿ ತಲುಪುತ್ತವೆ. ಪತ್ರಿಕೆಗಳಲ್ಲಿ ಬರುವ ಪದಬಂಧಗಳನ್ನು ಬಿಡಿಸಲು ಮಕ್ಕಳನ್ನು ಪ್ರೋತ್ಸಾಹಿಸುವುದರಿಂದ, ಅವರಲ್ಲಿ ಆಲೋಚನಾ ಸಾಮರ್ಥ್ಯ ಹೆಚ್ಚುತ್ತದೆ. ಸಂಪಾದಕೀಯ, ಅಂಕಣಗಳನ್ನು ಓದಿ ವಿವಿಧ ದೃಷ್ಟಿಕೋನಗಳಲ್ಲಿ ಅರ್ಥ ಮಾಡಿಕೊಳ್ಳುತ್ತಾರೆ.

ಶಾಲಾ ಸಮಯದಲ್ಲಿ ದಿನನಿತ್ಯ 10–15 ನಿಮಿಷ ಮೀಸಲಿಟ್ಟು, ಪತ್ರಿಕೆ ಓದುವುದು, ಕಠಿಣ ಪದಗಳ ಅರ್ಥ ತಿಳಿಯುವುದು, ಭಿತ್ತಿಪತ್ರಿಕೆಗಳ ಮೂಲಕ ವಿಶ್ಲೇಷಣೆ ಮಾಡುವುದು, ಮತ್ತು ಮಕ್ಕಳ ವಿಭಾಗದ ಬರಹಗಳಿಗೆ ಪ್ರೋತ್ಸಾಹಿಸುವುದು ಉತ್ತಮ. ಇದು ವಿದ್ಯಾರ್ಥಿಗಳನ್ನು ಜಾಗೃತ ನಾಗರಿಕರನ್ನಾಗಿ ರೂಪಿಸಲು ಸಹಕಾರಿ. ಎಲ್ಲದಕ್ಕಿಂತ ಹೆಚ್ಚಾಗಿ ಮಕ್ಕಳಲ್ಲಿ ಸುಳ್ಳು ಸುದ್ದಿಗಳನ್ನು ಗುರುತಿಸುವ ಶಕ್ತಿ ಬರುತ್ತದೆ. ಎಳೆಯ ವಯಸ್ಸಿನಲ್ಲಿ ಇದು ರೂಢಿಯಾದರೆ ಜೀವಮಾನದ ಒಳ್ಳೆಯ ಅಭ್ಯಾಸವಾಗುತ್ತದೆ. ಇಷ್ಟೆಲ್ಲಾ ಅನುಕೂಲವಿರುವ ಕನ್ನಡ ದಿನಪತ್ರಿಕೆಗಳನ್ನು ನಮ್ಮ ರಾಜ್ಯದ ಶಾಲೆಗಳಲ್ಲಿ ಬೆಳಗಿನ ವೇಳೆಯಲ್ಲಿ ಸುದ್ದಿ ಓದುವುದು ಹಾಗೂ ಗ್ರಂಥಾಲಯದಲ್ಲಿ ಪತ್ರಿಕೆಗಳನ್ನು ಲಭ್ಯವಾಗಿರಿಸುವುದನ್ನು, ಸರ್ಕಾರ ಕಡ್ಡಾಯ ಮಾಡುವ ಹೊಸ ನಿಯಮವನ್ನು ಜಾರಿಗೆ ತಂದಿದ್ದೇ ಆದಲ್ಲಿ ವಿದ್ಯಾರ್ಥಿಗಳ ಜ್ಞಾನ ವೃದ್ಧಿಗೆ ಇನ್ನಷ್ಟು ಸಹಾಯವಾಗಲಿದೆ.

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

ಫ್ಯಾನ್ಸ್ ವಾರ್

ಮಾನ್ಯರೇ,

ಒಂದು ಸಿನಿಮಾ ಬಂತು ಎಂದರೆ ಎಲ್ಲರೂ ಹೋಗಿ ಅದನ್ನು ನೋಡಿ, ಪ್ರೋತ್ಸಾಹಿಸುವುದು ಇಂದಿನ ದಿನಗಳಲ್ಲಿ ಕಡಿಮೆಯಾಗಿದೆ. ಇತ್ತೀಚಿನ ದಿನಗಳಲ್ಲಿ ಚಲನಚಿತ್ರಗಳನ್ನು ನೋಡುವುದು ಸಹ ವಿಭಿನ್ನವಾಗಿದೆ. ಅಲ್ಲದೆ ತಮ್ಮ ತಮ್ಮ ನೆಚ್ಚಿನ ನಟರ ಚಲನಚಿತ್ರ ಬಂದರೆ ಅದಕ್ಕೆ ನೂರಾರು ರೀತಿಯ ವಿಶ್ಲೇಷಣೆ, ಹೊಗಳಿಕೆ, ತೆಗಳಿಕೆ, ವಾದ–ಪ್ರತಿವಾದಗಳು ಸೃಷ್ಟಿಯಾಗುತ್ತಿವೆ. ಸಿನಿಮಾ ನೋಡುವುದು ಒಂದು ಮನರಂಜನೆಗೆ ಆದರೆ ಈಗ ಬೇರೆ ಬೇರೆ ರೀತಿಯ ಆಯಾಮಗಳಲ್ಲಿ ಗಲಾಟೆ–ಗದ್ದಲಕ್ಕೆ ಕಾರಣವಾಗಿದೆ. ಆದ್ದರಿಂದ ಇದಕ್ಕೆಲ್ಲ ಅವಕಾಶ ಕೊಡದೆ ನಾವೆಲ್ಲರೂ ಪ್ರತಿಯೊಂದು ಕನ್ನಡ ಚಲನಚಿತ್ರಗಳನ್ನು ನೋಡಿ ಪ್ರೋತ್ಸಾಹಿಸೋಣ.

–ಸಾಯಿ ಸಂದೇಶ್ ಬಿ.ಎಸ್, ಮೈಸೂರು

ಚುಂಚನಕಟ್ಟೆ ಜಾತ್ರೆಯಲ್ಲಿ ಮುಸ್ಸಂಜೆಯ ಗೆಳೆಯರು

ಬಂಧುಗಳು ಇಲ್ಲದಿದ್ದರೂ ಜೀವಿಸಬಹುದು ಗೆಳೆಯರು ಇಲ್ಲದಿದ್ದರೆ ಜೀವಂತಿಕೆ ಇಲ್ಲದೆ ಜೀವಿಸಬೇಕಾಗುತ್ತದೆ. ಬಾಲ್ಯದಲ್ಲಿ ಗೆಳೆಯರೊಟ್ಟಿಗಿನ ಆಟ–ಪಾಠಗಳ ನಲಿವು ನಮ್ಮೊಳಗೆ ಶಾಶ್ವತವಾಗಿ ಸುಮಧುರ ಸಂಗೀತಗಳಿರುವ ಪೆನ್‌ಡ್ರೈವ್‌ನಂತೆ ನೆಲೆಯೂರಿ ಬಿಡುತ್ತದೆ. ಅದು ಬೇಕೆಂದಾಗಲೆಲ್ಲಾ ಮನಸ್ಸಿನ ತೆರೆಯಲ್ಲಿ ಬಿತ್ತರಿಸುತ್ತಿರುತ್ತದೆ. ಎಲ್ಲಿಯವರೆಗೆ?, ಬದುಕು ಮುಗಿಸಿ ಮಸಣ ಸೇರುವವರೆಗೂ!. ಅದನ್ನು ಸವಿಯುವ ಮಜಾದ ಪರಾಕಷ್ಟೆಯನ್ನು ಅಕ್ಷರಗಳಲ್ಲಿ ಇಳಿಸಲಾಗದು. ಜೀವನದ ಮುಸ್ಸಂಜೆಯಲ್ಲಿ ಇರುವವರಿಗೆ ಸ್ನೇಹವು ಅಗತ್ಯವಾಗಿಬೇಕು. ಇದು ನಮಗೆ ಇನ್ನಷ್ಟು ಕಾಲ ಬದುಕಲು ಜೀವ ಸೆಲೆಯಾಗಿ ಸಹಕರಿಸುತ್ತದೆ.



ಇಳಿವಯಸ್ಸಿನ ಸ್ನೇಹದ ಕುರಿತಾಗಿ ಬಹಳಷ್ಟು ಸಂಶೋಧನೆಗಳಾಗಿವೆ, ವೃದ್ಧಾಪ್ಯದಲ್ಲಿ ವಯಸ್ಸು ಅರವತ್ತರ ನಂತರ ಸ್ನೇಹಿತರಿಲ್ಲದೆ ಇರಕೂಡದು ಹಾಗೂ ಇರಲಾಗದು ಕೂಡ, ಒಂಟಿತನ ಹಾಗೂ ಸಾಮಾಜಿಕ ಪ್ರತ್ಯೇಕತೆಯು ಅಕಾಲಿಕ ಮರಣದ ಅಪಾಯವನ್ನು ಹೆಚ್ಚಿಸುತ್ತದೆ. ಬುದ್ಧಿಮಾಂದ್ಯತೆಯ ಅಪಾಯ 50%, ಹೃದಯ ಕಾಯಿಲೆಯ ಸಮಸ್ಯೆ 29% ಮತ್ತು ಪಾರ್ಶ್ವವಾಯುವಿನ ಅಪಾಯವು 32% ಆಗಿರುವುದನ್ನು ಸಂಶೋಧನೆ ಹೇಳುತ್ತದೆ, ಜೊತೆಗೆ ಖಿನ್ನತೆ, ಆತಂಕ ಮತ್ತು ಆತ್ಮಹತ್ಯೆಗಳು, ಗೆಳೆಯರು ಹಾಗೂ ಕುಟುಂಬದವರ ಒಡನಾಟ ಇಲ್ಲದವರಿಗೆ ಗಣನೀಯವಾಗಿ ಹೆಚ್ಚು.

Having Good Friends Can Lead to Better Health and a Longer Life.

ನಮಗೆ ವಯಸ್ಸಾದಂತೆ ಗೆಳೆಯರು ಇನ್ನಷ್ಟು ಮುಖ್ಯವಾಗುತ್ತಾರೆ. ಒಳ್ಳೆಯ ಗೆಳೆಯರನ್ನು ಸುತ್ತಲೂ ಇಟ್ಟುಕೊಳ್ಳುವುದು ನಮ್ಮ ಆರೋಗ್ಯ ಮತ್ತು ಆನಂದಕ್ಕೆ ಉತ್ತಮವಾದ ಮಾರ್ಗ ಮತ್ತು ಹೆಚ್ಚು ಕಾಲ ನೆಮ್ಮದಿಯಾಗಿ ಬದುಕುವುದಕ್ಕೆ ಸಾಧ್ಯವಾಗಿಸುತ್ತದೆ. ವಿಲಿಯಂ ಚಾಪಿಕ್ ಎಂಬ ಮನಃಶಾಸ್ತ್ರಜ್ಞನು ಸಂಬಂಧಗಳ ಕುರಿತಾಗಿ ಬಹಳಷ್ಟು ಸಂಶೋಧನೆ ಮಾಡಿದ್ದಾನೆ. ಹಾಗೆಯೇ ಗೆಳೆಯನೆಂಬ ಮುಖವಾಡ ತೊಟ್ಟವನು ಬಳಿ ಇದ್ದರೆ, ವೈರಿಗಳಿಂದ ಆಗುವ ಸಮಸ್ಯೆಗಳಿಗಿಂತಲೂ ಭೀಕರ, ಅವರ ಬಗ್ಗೆ ಸದಾ ಎಚ್ಚರದಿಂದ ಇರಬೇಕು, ಮುಖವಾಡದ ಗೆಳೆಯ ಜೊತೆಯಲ್ಲೇ ಇದ್ದು ಒಳಗೊಳಗೆ ಹೆಸರಿಗೆ ಮಸಿ ಬಳಿಯುತ್ತಾನೆ, ಬಾಲ್ಯದಲ್ಲಿನ ಸ್ನೇಹಿತರು ನಮ್ಮ ಭವಿಷ್ಯವನ್ನು ರೂಪಿಸುವ ಶಿಲ್ಪಿಗಳು, ಅದಕ್ಕಾಗಿಯೇ ಗುಣ ನೋಡಿ ಸ್ನೇಹ ಮಾಡಿಕೊಳ್ಳುವುದು ಒಳ್ಳೆಯದು.

ಇಷ್ಟು ಬರೆದಿದ್ದು ಗೆಳೆತನದ ಪೀಠಿಕೆ ಮಾತ್ರ, ಈಗ ನಿಮಗೆ ಬಾಲ್ಯದಿಂದ ಇಳಿವಯಸ್ಸಿನವರೆಗೆ ಉಳಿಸಿಕೊಂಡು ಬಂದಿರುವ ಗೆಳೆತನದ ಸುಮಧುರ ಅನುಭವದ ಪ್ರಸಂಗವನ್ನು ತಿಳಿಯಬಯಸುವೆ.

ಐವತ್ತು ವರ್ಷಗಳ ಹಿಂದೆ ನಾವು ಬಾಲ್ಯದವರಿದ್ದಾಗ, ವರ್ಷದ ಮೊದಲ ಹಬ್ಬ ಸಂಕ್ರಾಂತಿ ಬಂತೆಂದರೆ ನಮ್ಮೂರಿನ ಮಕ್ಕಳೆಲ್ಲರಿಗೂ ಸುಗ್ಗಿಯ ಸಂಭ್ರಮ, ಕೂಗಳತೆ ದೂರದ ಚುಂಚನಕಟ್ಟೆ ದನಗಳ ಜಾತ್ರೆಯಲ್ಲಿ ಶ್ರೀಕೋದಂಡರಾಮನ ತೇರು ಹರಿಯುವವರೆಗೆ ಸುಮಾರು ಹದಿನೈದು ದಿನಗಳು ಸಂಭ್ರಮಿಸುವ ಖುಷಿಗೆ ಮಿತಿ ಇರಲಿಲ್ಲ. ಸರ್ಕಾರಿ ಕನ್ನಡ ಪ್ರಾಥಮಿಕ ಶಾಲೆಯಲ್ಲಿ ಕಲಿಯುತ್ತಿರುವ ವಯಸ್ಸು, ಭತ್ತದ ಗದ್ದೆಗಳಿರುವ ರಾಮನ ಬಯಲು ನಮ್ಮದು, ಕೊಯ್ಲು ಆದ ಬಳಿಕ ಭತ್ತದ ಗದ್ದೆಗಳಲ್ಲಿ ಅಲ್ಲಲ್ಲಿ ಬಿದ್ದಿರುವ ಭತ್ತದ ತೆನೆಗಳನ್ನು ಆರಿಸಿ, ಭತ್ತವನ್ನು ಬೇರ್ಪಡಿಸುತ್ತಿದ್ದೆವು. ಇದನ್ನು ಅಂಕ್ಲು ಆಯುವುದು ಎಂದು ಹೇಳುತ್ತೇವೆ. ಹೀಗೆ ಸಿಕ್ಕ ಭತ್ತವನ್ನು ಮಾರಿ ಕೊಡಿಟ್ಟ ಹಣದೊಂದಿಗೆ ಸೈಕಲ್ ಅಥವಾ ನಡೆದುಕೊಂಡು ಗೆಳೆಯರೆಲ್ಲಾ ಚುಂಚನಕಟ್ಟೆಗೆ ಹೋಗುತ್ತಿದ್ದೆವು. ಜಾತ್ರೆ ಆದ್ದರಿಂದ ನಾಲ್ಕೈದು ಸಿನಿಮಾ ಟೂರಿಂಗ್ ಟಾಕೀಸ್‌ಗಳು ಬರುತ್ತಿದ್ದವು. ಬೆಳಗಿನವರೆಗೂ ನಿರಂತರವಾಗಿ ಮೂರು ಸಿನಿಮಾಗಳನ್ನು ನೋಡಿ ಅಪ್ಪ ದನಗಳನ್ನು ಕಟ್ಟುತ್ತಿದ್ದ ದಾವಣಿಯಲ್ಲಿ ಮಲಗುತ್ತಿದ್ದೆವು. ಅಂದಿನ ದಿನಗಳಲ್ಲಿ ಮನರಂಜನೆಗಳಿಗೆ ಅವಕಾಶ ಇರುತ್ತಿರಲಿಲ್ಲ, ಜಾತ್ರೆಗಳೇ ನಮಗೆ ಮನರಂಜನೆಯಾಗಿತ್ತು.

ಆ ದಿನಗಳಲ್ಲಿ ಗುಂಪಾಗಿ ಜಾತ್ರೆಗೆ ಹೋಗುತ್ತಿದ್ದವರಲ್ಲಿ ನನ್ನನ್ನು ಸೇರಿದಂತೆ ಐದು ಜನರು ಐವತ್ತು ವರ್ಷಗಳ ಹಿಂದೆ ನಮ್ಮ ಬಾಲ್ಯದಲ್ಲಿ ಜಾತ್ರೆಗೆ ಬಂದು ಮಜಾ ಮಾಡುತ್ತಿದ್ದ ನೆನಪಿಗಾಗಿ ರಜತ ಮಹೋತ್ಸವ ಆಚರಿಸುವ ಸಲುವಾಗಿ ಎರಡು ದಿನಗಳನ್ನು ಮೀಸಲಿಟ್ಟು ಎರಡು ತಿಂಗಳ ಹಿಂದೆಯೇ ಯೋಜನೆಯ ನೀಲಿ ನಕಾಶೆ ರೂಪಿಸಿದೆವು. ಇದೇ ತಿಂಗಳು ಮೂರರಂದು ಒಂದನೇ ತರಗತಿಯಿಂದ ಹತ್ತನೇಯ ತರಗತಿವರೆಗೆ ಜೊತೆಯಾಗಿ ಕಲಿತವರಾದ ನಾಲ್ಕೈದು ಜನ ಮುಸ್ಸಂಜೆ ಹೊತ್ತಿನ(ಅರವತ್ತು ದಾಟಿದ ಹಿರಿಯ ನಾಗರಿಕರು) ಆಪ್ತಮಿತ್ರರಾದ ನಟರಾಜ್ ಎಂ.ಪಿ, ಸುರೇಶ್ ಎಂ.ಎಸ್, ಭೀಮಣ್ಣ ಎಂ.ಜಿ ಮತ್ತು ಮೋಹನ್ ಎಂ.ಎಸ್ ಎಲ್ಲರೂ ಮೈಸೂರಿಂದ ಚುಂಚನಕಟ್ಟೆಗೆ ಹೊರಟೆವು, ಹೋಗುವ ದಾರಿಯಲ್ಲಿ ನೆನಪುಗಳ ಮೂಟೆಗಳು ಬಿಚ್ಚಿಕೊಂಡು ದಾರಿ ಉದ್ದಕ್ಕೂ ಚೆಲ್ಲುತ್ತಾ... ಸಾಗಿದೆವು. ಸೈಕಲ್ ಅಥವಾ ಕಾಲು ನಡಿಗೆಯಲ್ಲಿ ಹೋಗುತ್ತಿದ್ದವರು ಈಗ ಗೆಳೆಯನ ಐಷಾರಾಮಿ ಮಹಿಂದ್ರಾ ಥಾರ್ ಕಾರಿನಲ್ಲಿ ಜುಮ್ ಅಂತ ಪ್ರಯಾಣಿಸಿದ್ದು ಬಹುಶಃ ಅಭಿವೃದ್ಧಿಯ ಪರಿಣಾಮ ಇರಬಹುದು. ಅಂದು ಅಂಕ್ಲು ಬತ್ತ ಮಾರಿದ ಪುಡಿ ಚಿಲ್ಲರೆ ಹಣವಾದರೆ ಇಂದು ದುಡಿದ ನೋಟುಗಳು, ಬಾಲ್ಯದಲ್ಲಿ ಚಿಲ್ಲರೆ ಹಣ ಕೊಡುತ್ತಿದ್ದ ಪರಮಾನಂದವನ್ನು ಇಳಿ ವಯಸ್ಸಿನಲ್ಲಿ ನೋಟುಗಳು ಕೊಡಲಿಲ್ಲ, ಗೆಳೆಯರ ಒಡನಾಟದಿಂದ ಖುಷಿಯಂತೂ ಇತ್ತು.

ಕಾವೇರಿ ನದಿಯ ಧನುಷ್ಕೋಟಿ ಜಲಪಾತದ ಬಳಿ ಬಲದಂಡೆಯ ಮೇಲಿರುವ ಪವಿತ್ರವಾದ ಶ್ರೀಕೋದಂಡರಾಮನ ದೇವಾಲಯಕ್ಕೆ ಹೋಗುತ್ತಿದ್ದಂತೆಯೇ ನಟರಾಜನಿಗೆ ಅಲ್ಲಿ ಅರ್ಚಕರು ಪರಿಚಯ ಇದ್ದ ಕಾರಣ ಗರ್ಭಗುಡಿಯಲ್ಲಿ ದೇವರ ಮುಂದೆಯೇ ನಮ್ಮನ್ನು ಕೂರಿಸಿ ಪೂಜೆ ಮಾಡಿದ್ದು ವಿಶೇಷ ಎನಿಸಿತು. ಗೆಳೆಯ ಇಂಜಿನಿಯರ್ ಮೋಹನನಿಗೆ ಇಲ್ಲಿನ ಇಂಚಿಂಚು ಸ್ಥಳವು ಚಿರಪರಿಚಿತ ಏಕೆಂದರೆ ಹತ್ತಾರು ಕೋಟಿ ಮೊತ್ತದ ಅಭಿವೃದ್ಧಿ ಕಾಮಗಾರಿಗಳನ್ನು ದೇವಸ್ಥಾನದ ಸುತ್ತಾ ಮಾಡಿಸಿದ್ದಾನೆ. ಮಧ್ಯ ಮಧ್ಯ ಇದು ನಾನು ಮಾಡಿಸಿದ್ದು, ಅದು ನಾನು ಮಾಡಿಸಿದ್ದೆಂದು ಹೇಳಿಕೊಳ್ಳುತ್ತಿದ್ದ. ಎಲ್ಲವನ್ನೂ ಚೆನ್ನಾಗಿಯೇ ಮಾಡಿಸಿದ್ದ, ಅರುಣ್‌ಯೋಗಿರಾಜ್ ಕೆತ್ತಿರುವ ಮೂವತ್ತು ಅಡಿ ಎತ್ತರದ ಆಂಜನೇಯ ಮೂರ್ತಿಯನ್ನು ದೇವಾಲಯದ ಎದುರು ಅದ್ಭುತವಾಗಿ ಸ್ಥಾಪಿಸುವ ಕಾರ್ಯದಲ್ಲಿ ಭಾಗಿ ಆಗಿರುವುದು ಆ ಪ್ರತಿಮೆ ಇರುವವರೆಗೂ ಗೆಳೆಯನ ಹೆಸರು ಚಿರಸ್ಥಾಯಿ.

> ನಮಗೆ ವಯಸ್ಸಾದಂತೆ ಗೆಳೆಯರು ಇನ್ನಷ್ಟು ಮುಖ್ಯವಾಗುತ್ತಾರೆ. ಒಳ್ಳೆಯ ಗೆಳೆಯರನ್ನು ಸುತ್ತಲೂ ಇಟ್ಟುಕೊಳ್ಳುವುದು ನಮ್ಮ ಆರೋಗ್ಯ ಮತ್ತು ಆನಂದಕ್ಕೆ ಉತ್ತಮವಾದ ಮಾರ್ಗ ಮತ್ತು ಹೆಚ್ಚು ಕಾಲ ನೆಮ್ಮದಿಯಾಗಿ ಬದುಕುವುದಕ್ಕೆ ಸಾಧ್ಯವಾಗಿಸುತ್ತದೆ. ವೃದ್ಧಾಪ್ಯದಲ್ಲಿ ಗೆಳೆಯರೇ ನಮಗೆ ಚೈತನ್ಯ ಕೊಡುವ ಗುಳಿಗೆಗಳು.



ಮಿರ್ಲೆ ಚಂದ್ರಶೇಖರ
ಲೇಖಕರು,
ಮೊ:9916129654.



ದೇಹಕ್ಕೆ ಬಾಲ್ಯದಷ್ಟು ಲವಲವಿಕೆ ಇಲ್ಲದಿದ್ದರೂ ಸ್ವಾರಸ್ಯಕರವಾಗಿ ಮಾತನಾಡಿ ಆಗಾಗ್ಗೆ ಎಲ್ಲರಿಗೂ ಹುರುಪು ತುಂಬುತ್ತಿದ್ದ ನಟರಾಜ. ಕಣ್ಣು ಹಾಯಿಸಿದಷ್ಟು ದೂರದವರೆಗೆ ಹದಿನೈದರಿಂದ ಇಪ್ಪತ್ತು ಲಕ್ಷ ಬೆಲೆಯ ದನಗಳನ್ನು ಕಟಾವು ಆಗಿರುವ ಗದ್ದೆಗಳಲ್ಲಿ ಕಟ್ಟಿರುವುದನ್ನು ಎಲ್ಲೆಡೆ ಸುತ್ತಿ ನೆನಪುಗಳನ್ನು ಹಂಚಿಕೊಳ್ಳುತ್ತಾ ಆನಂದಿಸಿದೆವು. ವಯೋಸಹಜ ಕಾಯಿಲೆಗಳಿಂದ ನಿತ್ಯವೂ ತೆಗೆದುಕೊಳ್ಳಬೇಕಿರುವ ಮಾತ್ರೆಗಳು ಜೇಬಿನಲ್ಲಿ ಇದ್ದಾಗ್ಯೂ ಯಾರೊಬ್ಬರ ಮುಖದಲ್ಲಿ ಆಯಾಸ ಕಾಣುತ್ತಿರಲಿಲ್ಲ, ಎಲ್ಲರೂ ಹುರುಪಿನಿಂದ ಇದ್ದೆವು. ಒಮ್ಮೆಯೂ ನೋಡಿರದ ಎರಡು ಕಿಮೀ ದೂರದಲ್ಲಿ ನದಿ ದಂಡೆಯ ಮೇಲಿರುವ ರಾಮಲಿಂಗೇಶ್ವರ ದೇವಾಲಯವನ್ನು ನೋಡಿದ್ದಾಯಿತು.

ಆ ದಿನಗಳಲ್ಲಿ ಹತ್ತನೆಯ ತರಗತಿಯವರೆಗೂ ಬಹುತೇಕರಿಗೆ ಕಾಲಿಗೆ ಚಪ್ಪಲಿಗಳಿರಲಿಲ್ಲ, ಧರಿಸುವುದಕ್ಕೆ ಒಂದು ಜೊತೆ ಹಾಗೂ ಒಗೆದು ಒಣಗಿಸಲು ಒಂದು ಅಥವಾ ಮತ್ತೊಂದು ಜೊತೆ ಬಟ್ಟೆಗಳು. ಊಟತಿಂಡಿ ವಿಷಯ ಹೇಳುವುದೇ ಬೇಡ, ಹಬ್ಬಹರಿದಿನಗಳಲ್ಲಿ ಮಾತ್ರ ಒಳ್ಳೆಯ ಊಟ ಇತರೆ ದಿನಗಳಲ್ಲಿ ಹಸಿವು ನೀಗಿಸಲು ಆಹಾರ, ಈಗ ಜೇಬಲ್ಲಿ ಸಾಕಷ್ಟು ಹಣ ಇದೆ. ಮೃಷ್ಟಾನ್ನಕ್ಕೂ ಅವಕಾಶವಿದೆ ತಿನ್ನಲು ಆಸೆ ಆದರೆ ದೇಹವು ತಿನ್ನಬೇಡ ಎನ್ನುತ್ತದೆ, ಹಳ್ಳಿಗಳಲ್ಲಿ ಎಲ್ಲರ ಮನೆಗಳ ಪರಿಸ್ಥಿತಿ ಹೀಗೆಯೇ ಇತ್ತು, ಆದರೆ ಮೊದಲಿನಂತೆ ಹಳ್ಳಿಗಳಿಲ್ಲ, ನಮ್ಮೂರಲ್ಲೂ ಪಟ್ಟಣದಲ್ಲಿ ಸಂಬಳ ತೆಗೆದುಕೊಳ್ಳುವ ಉದ್ಯೋಗಿಗಳು ಹಾಗೂ ಉದ್ಯಮಿಗಳು ಇರುವಂತೆ ಎಲ್ಲಾ ಸೌಕರ್ಯಗಳೊಂದಿಗೆ ಜೀವನ ನಡೆಸುತ್ತಿದ್ದಾರೆ, ಪಾಪ ಕೆಲವರು ಇನ್ನೂ ಅದೇ ಐವತ್ತು ವರ್ಷಗಳ ಹಿಂದಿನ ಬದುಕಲ್ಲೇ ತೆವಳುತ್ತಿದ್ದಾರೆ.

ಚಿಂತೆ ಏಕೆ?, ಶ್ರೀಮಂತರಲ್ಲದಿದ್ದರೂ ಸೊಗಸಾಗಿಯೇ ಇದ್ದೇವೆ, ಎಲ್ಲರ ಬಳಿ ಕಾರುಬೈಕುಗಳಿವೆ, ಸ್ವಂತ ಮನೆ ಇದೆ, ಎಲ್ಲರ ಮಕ್ಕಳು ಉನ್ನತ ವಿದ್ಯೆ ಕಲಿತು ನೌಕರಿಯಲ್ಲಿದ್ದಾರೆ, ಮದುವೆಗಳಾಗಿ ಮೊಮ್ಮಕ್ಕಳು ಇವೆ, ಐವರಲ್ಲಿ ನಟರಾಜ್ ಉದ್ಯಮಿ ಬೆಂಗಳೂರಿ ನಲ್ಲಿ ವಾಸವಿದ್ದಾನೆ ಉಳಿದ ನಾವು ಮೈಸೂರಿನಲ್ಲಿ ನಮಗೂ ಸ್ವಂತ ಮನೆ, ಜೀವನಕ್ಕೆ ಆಗುವಷ್ಟು ಪಿಂಚಣಿ ಇನ್ನೇನು ಬೇಕು?, ಬೇಕಿದೆ ಉತ್ತಮ ಆರೋಗ್ಯ, ಸಧ್ಯ ಎಲ್ಲರಿಗೂ ಮಾತ್ರೆಗಳು ಕಡ್ಡಾಯ, ಆದರೂ ಕುಟುಂಬ ಮತ್ತು ಗೆಳೆಯರ ಒಡನಾಟವು ನೆಮ್ಮದಿಯಿಂದ ಇರುವಂತೆ ಮಾಡಿದೆ.

ನೆಮ್ಮದಿಯನ್ನು ಕಂಡುಕೊಳ್ಳಬೇಕಾದರೆ ಸವಿನೆನಪು ಕೊಡುವ ಬಾಲ್ಯದ ಗೆಳೆಯರು ಜೊತೆಯಲ್ಲಿ ಇರಬೇಕು. ನೆಮ್ಮದಿಯ ಗೆಳೆಯರು ನಾವು ಜಾತ್ರೆಯನ್ನು ಸುತ್ತಿ, ಸಮೀಪದ ಕೆಲವು ಜಾಗ ಗಳನ್ನು ನೋಡಿ ರಾತ್ರಿ ಉಳಿಯಲು ಚುಂಚನಕಟ್ಟೆ ಸೂಕ್ತ ಇರಲಿಲ್ಲ. ಎರಡು–ಮೂರು ಬಾರುಗಳಲ್ಲಿ ನಮಗಿಂತಲೂ ಹೆಚ್ಚು ಮಜಾ ಮಾಡುತ್ತಿದ್ದರು, ಒಳಗೆ ಜಾಗ ಸಾಕಾಗದೆ ಹೊರಗಡೆ ಸಿಕ್ಕಸಿಕ್ಕ ಸ್ಥಳದಲ್ಲಿ ಕುಳಿತು ಡೈರಕ್ಟ್ ಬಾಟಲಿಯನ್ನೇ ಎತ್ತಿ ಕುಡಿಯುತ್ತಾ ಚಿಕನ್ ತಿನ್ನುತ್ತಾ ಆನಂದಿಸುತ್ತಿದ್ದರು. ಕೆಲವರು ಮೆಟ್ಟಿಲುಗಳಲ್ಲಿ ಕುಡಿದಿದ್ದು ಜಾಸ್ತಿಯಾಗಿ ಬಿದ್ದಿದ್ದರು.

ಯೋಜನೆಯ ಪ್ರಕಾರ ನಾವು ರಾತ್ರಿ ಉಳಿಯಬೇಕಿತ್ತು, ಸಮೀಪದ ಹೆಬ್ಬಾಳಿನ ಕೆರೆಯ ಪಕ್ಕದಲ್ಲಿದ್ದ ಲಾಡ್ಜ್‌ನಲ್ಲಿ ವಾಸ್ತವ್ಯ, ರಾತ್ರಿಯೆಲ್ಲಾ ಜಾಗರಣೆ ಕಾರಣ ಬಾಲ್ಯದ ನೆನಪುಗಳು ಕೆದಕಿದಷ್ಟು ಹೊರ ಬರುತ್ತಲೇ ಇವೆ, ಕಣ್ಣುಗಳಿಗೂ ಕುತೂಹಲ ಮುಚ್ಚಲು ಒಪ್ಪುತ್ತಿಲ್ಲ. ಮುಂಜಾನೆಯ ಹಾಸಿಗೆಯಿಂದ ಹೊರ ಬಂದು ಹೆಬ್ಬಾಳು ಕೆರೆ ದಂಡೆಯ ಮೇಲೆ ವಾಯ ವಿಹಾರ, ನಂತರ ಸಿದ್ದವಾಗಿ ಸಮೀಪದ ಕಪ್ಪಡಿಗೆ ಹೋದೆವು, ಜೀವಿತಾವಧಿಯಲ್ಲಿ ನೋಡಬೇಕೆಂದು ಹಂಬಲಿಸುತ್ತಿದ್ದ ಪುಣ್ಯಸ್ಥಳ, ಗೆಳೆಯನಿಂದಾಗಿ ಇಂದು ನೋಡುವಂತಾಯಿತು, ಅದ್ಭುತವಾದ ಕ್ಷೇತ್ರ ಹಿಂದೆ ನಮ್ಮ ತಾಲೂಕಿನ ಜನತೆ ಕೋರ್ಟು–ಕಚೇರಿ ನಂಬಿದವರಲ್ಲ, ಕಪ್ಪಡಿಗೆ ಬಂದು ಆಣೆ–ಪ್ರಮಾಣ ಮಾಡಿ ನ್ಯಾಯ–ಅನ್ಯಾಯಗಳನ್ನು ಬಗೆಹರಿಸಿಕೊಳ್ಳುತ್ತಿದ್ದ ಪ್ರಬಲಶಕ್ತಿ ಇರುವ ಕೋರ್ಟ್ ಇದು, ಈಗಲೂ ನಂಬಿಕೆ ಉಳಿದುಕೊಂಡು ಬಂದಿದೆ.

ಮಧ್ಯಾಹ್ನ ಚುಂಚನಕಟ್ಟೆಯ ಪಕ್ಕದ ಶ್ರೀರಾಂಪುರದಲ್ಲಿ ಇರುವ ನಟರಾಜನ ಮಾವನ ಮನೆಯಲ್ಲಿ ಭಾನುವಾರದ ಬಾಡೂಟ, ಅಲ್ಲಿಗೆ ಪ್ರವಾಸ ಕೊನೆಗೊಂಡಿತು. ಮಜಾ ಮಾಡಿದಷ್ಟು ಮತ್ತೇ ಬೇಕೆನಿಸುವಷ್ಟು ಬಯಕೆ ಸಮಯ ಅಂತ ಒಂದು ಇದೆಯಲ್ಲಾ, ಅನುಭವಿಸಿದ ಎರಡು ದಿನಗಳು ನಮಗೆ ಆಯಸ್ಸಿನಲ್ಲಿ ಎರಡು ವರ್ಷ ಏರಿಕೆಯಾಗುವಷ್ಟು ನಮ್ಮ ದೇಹಗಳು ಹರ್ಷಗೊಂಡವು, ಇಷ್ಟ ಇಲ್ಲದಿದ್ದರೂ ಜಾತ್ರೆಯ ಮಜಾ ಮುಗಿಸಿ ವಾಪಸ್ಸಾದೆವು. ವಯಸ್ಸು ಆಯಿತೆಂದು ಏಕಾಂಗಿಯಾಗಿ ಇರುವುದು ಬೇಡ, ಜೊತೆಗೂಡಿ ಜೀವನವನ್ನು ಅನುಭವಿಸಿ ವೃದ್ಧಾಪ್ಯದಲ್ಲಿ ಗೆಳೆಯರೇ ನಮಗೆ ಚೈತನ್ಯ ಕೊಡುವ ಗುಳಿಗೆಗಳು?



ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಕುಟುಂಬ, ಕುಲಪತಿಗಳಿಂದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪುರಸ್ಕಾರ



ಕೆ.ಅನುಷಾ ಎಂ. ತೇಜಸ್ ಸುಹಾಸ್‌ನಾಯಕ್ ವಿ.ಪಿ.ಹೃತಿಕಾ ಮರ್ಲಿನ್‌ಅಲ್ಬರ್ಟ್ ಸಿ.ಎಲ್.ಸಿಂಚನ ಎ.ಕೆ.ಸಾಧನ



ಡಾ. ಮಹದೇವಪ್ಪ ಸುನೀಲ್ ಬೋಸ್ ಎಂ.ಕೆ. ಸವಿತಾ ಪ್ರೊ. ಲೋಕನಾಥ್

ಮೈಸೂರು, ಜ.9 (ಆರ್‌ಕೆ)– ಪ್ರತಿಷ್ಠಿತ ಮೈಸೂರು ವಿಶ್ವವಿದ್ಯಾನಿಲಯದ ಇತಿಹಾಸದಲ್ಲಿ ಇದೇ ಮೊದಲ ಬಾರಿ ಕುಲಪತಿಗಳು, ಕುಲಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರ ಕುಟುಂಬದವರ ಹೆಸರಿನಲ್ಲಿ ದತ್ತಿ ಸ್ಥಾಪಿಸಲಾಗಿದೆ.

ಸೋಮವಾರ ಕ್ರಾಫರ್ಡ್ ಭವನದಲ್ಲಿ ನಡೆದ 106ನೇ ಘಟಿಕೋತ್ಸವ ಸಮಾರಂಭದಲ್ಲಿ ಬಿಎ, ಎಂಎ, ಬಿಎಸ್ಸಿ, ಎಂಎಸ್ಸಿ ಪದವಿಗಳಲ್ಲಿ ಅತೀ ಹೆಚ್ಚು ಅಂಕ ಗಳಿಸಿರುವ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಈ ದತ್ತಿ ನಿಧಿಯಡಿ ಚಿನ್ನದ ಪದಕ ಹಾಗೂ ನಗದು ಬಹುಮಾನಗಳನ್ನು ವಿಶ್ವವಿದ್ಯಾನಿಲಯದ ಕುಲಾಧಿಪತಿಗಳೂ ಆದ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಪ್ರದಾನ ಮಾಡಿದರು.

ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ ಹೆಸರಲ್ಲಿ ಸ್ಥಾಪಿಸಿರುವ ದತ್ತಿ ನಿಧಿಯಡಿ ಮಾನಸ ಗಂಗೋತ್ರಿಯ ಡಾ. ಬಿ.ಆರ್.ಅಂಬೇಡ್ಕರ್ ಅಧ್ಯಯನ ಕೇಂದ್ರದ ಎಂ.ಎ. ಪದವಿಯಲ್ಲಿ ಅತೀ ಹೆಚ್ಚು ಅಂಕ ಪಡೆದಂತಹ ವಿದ್ಯಾರ್ಥಿನಿ ಕೆ. ಅನುಷಾ ಎಂಬುವರಿಗೆ ಚಿನ್ನದ ಪದಕ ಪ್ರದಾನ ಮಾಡಲಾಯಿತು. ಅದೇ ರೀತಿ ಸಚಿವರ ಪುತ್ರ, ಚಾಮರಾಜನಗರ ಸಂಸದ ಸುನಿಲ್ ಬೋಸ್ ಹೆಸರಲ್ಲಿ ಮಹಾರಾಣಿ ಕಾಲೇಜು ಬಿ.ಎ. ವಿದ್ಯಾರ್ಥಿ ಎಂ. ತೇಜಸ್‌ಗೆ ನಗದು ಬಹುಮಾನ ನೀಡಲಾಯಿತು.

ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್ ಅವರ ದತ್ತಿ ನಿಧಿಯಡಿ ಮಾನಸ ಗಂಗೋತ್ರಿ ಭೌತಶಾಸ್ತ್ರ ವಿಷಯದ ಎಂಎಸ್ಸಿ ವಿದ್ಯಾರ್ಥಿನಿ ಮರ್ಲಿನ್ ಅಲ್ಬರ್ಟ್‌ಗೆ ಚಿನ್ನದ ಪದಕ, ತಾಯಿ ಸಾವಿತ್ರಮ್ಮ, ತಂದೆ ಕೃಷ್ಣಪ್ಪಗೌಡರ ಹೆಸರಲ್ಲಿ ಸ್ಥಾಪಿಸಿರುವ ದತ್ತಿ ನಿಧಿಯಡಿ ಬಿ.ಎಸ್ಸಿ ಪದವಿಯಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ಎಚ್.ಎಲ್. ಸಿಂಚನಾಗೆ ಚಿನ್ನದ ಪದಕ ಪ್ರದಾನ ಮಾಡಲಾಯಿತು.

ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವರಾದ ಎಂ.ಕೆ. ಸವಿತಾ ಕೂಡ ಎರಡು ದತ್ತಿ ನಿಧಿ ಸ್ಥಾಪಿಸಿದ್ದು, ಅದರಲ್ಲಿ ಮಹಾರಾಜ ಕಾಲೇಜಿನ ಬಿಎ ಭೂಗೋಳಶಾಸ್ತ್ರ ವಿಷಯದಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ಎಂ. ಸುಹಾಸ್ ನಾಯಕ್‌ಗೆ ನಗದು ಬಹುಮಾನ ಹಾಗೂ ಮಾನಸ ಗಂಗೋತ್ರಿಯ ಎಂ.ಎಸ್ಸಿ. ಭೂಗೋಳಶಾಸ್ತ್ರ ವಿಷಯದಲ್ಲಿ ಅತೀ ಹೆಚ್ಚು ಅಂಕ ಪಡೆದ ವಿ.ಪಿ. ಹೃತಿಕಾಗೆ ನಗದು ಬಹುಮಾನ ನೀಡಲಾಯಿತು.

'ಮೈಸೂರು ಮಿತ್ರ' ಬೆಳ್ಳಿ ಮಹೋತ್ಸವ ಸ್ಮರಣಾರ್ಥ ಸ್ಥಾಪಿಸಿರುವ ದತ್ತಿ ನಿಧಿಯಡಿ ಮಾನಸ ಗಂಗೋತ್ರಿಯ ಪತ್ರಿಕೋದ್ಯಮ ಮತ್ತು ಸಂವಹನ ವಿಭಾಗದ ಎಂಎ ಪದವಿಯಲ್ಲಿ ಅತೀ ಹೆಚ್ಚು ಅಂಕ ಗಳಿಸಿರುವ ಎ.ಕೆ. ಸಾಧನ ಅವರಿಗೆ ರಾಜ್ಯಪಾಲರು ನಗದು ಬಹುಮಾನ ನೀಡಿದರು.

ಇದೇ ಪ್ರಥಮ ಬಾರಿಗೆ ದತ್ತಿ ನಿಧಿ ಸ್ಥಾಪಿಸಿದಲ್ಲಿ ಅದೇ ವರ್ಷ ನಗದು ಬಹುಮಾನ ಅಥವಾ ಪದಕ ನೀಡಲು ಸಾಧ್ಯವಿಲ್ಲ. ಕಾರಣ, ದತ್ತಿ ನಿಧಿಯ ಬಡ್ಡಿ ಹಣದಿಂದ ಇಂತಹ ಪುರಸ್ಕಾರ ನೀಡಬೇಕಾಗುತ್ತದೆ. ಆದರೆ ಡಾ. ಮಹದೇವಪ್ಪ ಕುಟುಂಬ ಸದಸ್ಯರು ಹಾಗೂ ಕುಲಪತಿಗಳು ದತ್ತಿ ಹಣದ ಜೊತೆಗೆ ಒಂದು ವರ್ಷದ ಅವಧಿಯ ಬಡ್ಡಿ ಹಣವನ್ನು ವಿಶ್ವವಿದ್ಯಾನಿಲಯಕ್ಕೆ ಪಾವತಿ ಮಾಡಿದ್ದರಿಂದಾಗಿ ಪ್ರಸಕ್ತ ಸಾಲಿನಲ್ಲೇ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ನಗದು ಬಹುಮಾನ ಹಾಗೂ ಚಿನ್ನದ ಪದಕ ನೀಡಲು ಸಾಧ್ಯವಾಯಿತು.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ಜ.9– ದುದ್ದಗೆರೆ ಫೀಡರ್ ಮಾರ್ಗದಲ್ಲಿ ಕಾಮಗಾರಿ ನಿಮಿತ್ತ ಜ.10 ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ದುದ್ದಗೆರೆ, ಕೀಳನಪುರ, ರಾಜಶ್ರೀ, ಇಂಡಸ್ಟ್ರೀಸ್, ಪಿ.ಜಿ. ಹುಂಡಿ, ಚಟ್ನಹಳ್ಳಿ ಪಾಳ್ಯ, ಲಕ್ಷ್ಮಿಪುರ, ಮಾದೇವಿ ಕಾಲೋನಿ, ಯಡಕೊಳ, ಕಡುವೆಕಟ್ಟೆ, ಕುಪ್ಪೆಗಾಲ, ಹೊಸಹಳ್ಳಿ, ಮೇಗಳಾಪುರ, ಎಸ್.ಆರ್. ಹುಂಡಿ, ರಂಗನಾಥಾಪುರ, ಶ್ರೀನಿವಾಸಪುರ, ಜಾಗ್ವಾರ್, ಸಿಮೆಂಟ್, ಶಿವಶಂಕರ ಪೋಲ್ ಫ್ಯಾಕ್ಟರಿ, ಟಿ.ನರಸೀಪುರ ಮುಖ್ಯರಸ್ತೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಐಎಎಸ್, ಕೆಎಎಸ್ ಪರೀಕ್ಷೆಗಳಿಗೆ ತರಬೇತಿ

ಮೈಸೂರು: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ವತಿಯಿಂದ ಕೇಂದ್ರ ಲೋಕ ಸೇವಾ ಆಯೋಗದವರು ನಡೆಸಲಿರುವ ಐಎಎಸ್ ಹಾಗೂ ಕರ್ನಾಟಕ ಲೋಕ ಸೇವಾ ಆಯೋಗದವರು ನಡೆಸಲಿರುವ ಕೆಎಎಸ್ ಮತ್ತಿತರ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ 50 ದಿನಗಳ ತರಬೇತಿಯನ್ನು ಮೈಸೂರಿನ ಕೇಂದ್ರ ಕಚೇರಿಯಲ್ಲಿ ನಡೆಯಲಿದೆ. ಆಸಕ್ತರು ಜ.17ರೊಳಗಾಗಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಲು ದೂ.ಸಂ.0821 –2515944 ನ್ನು ಸಂಪರ್ಕಿಸಬಹುದು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಶನಿವಾರ 10 ಜನವರಿ 2026

ಮುಖ್ಯಮಂತ್ರಿ ಸಿದ್ದರಾಮಯ್ಯ ದಾಖಲೆ ಮಾಡಿಲ್ಲ, ಅವರು ಕಳಂಕ ಹೊತ್ತ ಮುಖ್ಯಮಂತ್ರಿಯಾಗಿದ್ದಾರೆ

ದೇವರಾಜ ಅರಸು ಭೂಮಿ ಇಲ್ಲದವರಿಗೆ ಭೂಮಿ ಕೊಟ್ಟಿದ್ದಾರೆ, ಸಿದ್ದರಾಮಯ್ಯ ಹಾಗೆ ಮಾಡಿಲ್ಲ; ಮೈಸೂರು ನಗರ ಬಿಜೆಪಿ ವಕ್ತಾರ ಮೋಹನ್ ಆರೋಪ



ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಶುಕ್ರವಾರ ನಡೆದ ಸುದ್ದಿಗೋಷ್ಠಿಯಲ್ಲಿ ನಗರ ಬಿಜೆಪಿ ವಕ್ತಾರ ಮೋಹನ್ ಮಾತನಾಡಿದರು.

ಮೈಸೂರು, ಜ.9(ಜಿಎ)–ಮುಖ್ಯಮಂತ್ರಿ ಸಿದ್ದರಾಮಯ್ಯ ದಾಖಲೆ ಮಾಡಿಲ್ಲ. ಬದಲಾಗಿ ಕಳಂಕ ಹೊತ್ತಿರುವ ಮುಖ್ಯಮಂತ್ರಿಯಾಗಿದ್ದಾರೆ ಎಂದು ಬಿಜೆಪಿ ನಗರ ವಕ್ತಾರ ಮೋಹನ್ ಆರೋಪಿಸಿದರು.

ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಿದ್ದರಾಮಯ್ಯ ಅವರು ದೀರ್ಘ ಕಾಲ ಮುಖ್ಯಮಂತ್ರಿಯಾಗಿ ದಾಖಲೆ ಮುರಿದ್ದಾರೆ ಎಂದು ಎಲ್ಲಾ ಪತ್ರಿಕೆಗಳಲ್ಲಿ ಪ್ರಚಾರಕ್ಕಾಗಿ ಜಾಹಿರಾತು ನೀಡಿದ್ದಾರೆ. ಆದರೆ, ನಿಜವಾಗಿಯೂ ದೇವರಾಜ ಅರಸು ಅವರು ಸುಧೀರ್ಘವಾಗಿ ಮುಖ್ಯಮಂತ್ರಿಯಾಗಿ ದಾಖಲೆ ಮಾಡಿದರೆ, ಸಿದ್ದರಾಮಯ್ಯ ಎರಡು ಬಾರಿ ಮುಖ್ಯಮಂತ್ರಿಯಾಗಿ ಮುಡಾದಿಂದ 14 ಸೈಟ್‌ಗಳನ್ನು ಪಡೆದುಕೊಂಡು ಕಳಂಕ ಹೊತ್ತಿದ್ದಾರೆ ಎಂದರು.

ಕ್ರೀಡಾ ದಾಖಲೆಗೂ ರಾಜಕೀಯದ ದಾಖಲೆಗೂ ವ್ಯತ್ಯಾಸವಿದೆ. ರಾಜ್ಯದಲ್ಲಿ ಅಲ್ಪ ಅವಧಿಯಲ್ಲಿ ಮುಖ್ಯಮಂತ್ರಿಗಳಾಗಿ ಸಾಕಷ್ಟು ದಾಖಲೆಗಳನ್ನು ಮಾಡಿದ್ದಾರೆ. ದೇವರಾಜ ಅರಸು ಅವರು ಭೂಮಿ ಇಲ್ಲದ ವರಿಗೆ ಭೂಮಿ ನೀಡಿದ್ದಾರೆ. ಸಿದ್ದರಾಮಯ್ಯರಂತೆ ಮಾಡಿಲ್ಲ ಎಂದು ಅವರು ತಿಳಿಸಿದರು.

ಕಾಂಗ್ರೆಸ್ ವಕ್ತಾರ ಲಕ್ಷ್ಮಣ್ ಬಿಜೆಪಿ ಸಂಸದರು ಸುಳ್ಳು ಹೇಳುತ್ತಾರೆ ಎಂದು ಹೇಳಿಕೆ ನೀಡಿದ್ದಾರೆ. ಆದರೆ 11 ವರ್ಷದಿಂದ ಬಿಜೆಪಿಯ ಸಂಸದರು ಸಾಕಷ್ಟು ಕೆಲಸ ಮಾಡಿದ್ದಾರೆ. ಯೂನಿಟಿ ಮಾಲ್ ತಡೆಯಾಜ್ಞೆಗೆ ಡಿಸಿ, ಜಿಲ್ಲಾಡಳಿತದ ಯಡವಟ್ಟಿನಿಂದ ಆಗಿರುವುದು. ವಿವಾದವಿಲ್ಲದ ಸ್ಥಳವನ್ನು ನಿಗದಿ ಮಾಡಬೇಕಿರುವುದು ಜಿಲ್ಲಾಡಳಿತದ ಕರ್ತವ್ಯ. ಈ ಹಿನ್ನೆಲೆಯಲ್ಲಿ ಭೂಮಿಗೆ ಸಂಬಂಧಿಸಿದಂತೆ ತಡೆಯಾಜ್ಞೆ ತಂದಿದ್ದಾರೆ. ಕಾಂಗ್ರೆಸ್ ನಾಯಕಿ ಲಕ್ಷ್ಮಿ ಹೆಬ್ಬಾಳ್ಕರ್ ಗೃಹಲಕ್ಷ್ಮಿ ಹಣ ಬಿಡುಗಡೆ ಅಂಕಿ ಅಂಶದಲ್ಲಿ ಸುಳ್ಳು ಮಾಹಿತಿ ನೀಡಿ ಕ್ಷಮೆ ಕೋರಿದ್ದಾರೆ. ಇದ್ದರಿಂದ ಐದು ಸಾವಿರ ಕೋಟಿ ವಂಚನೆಯಾಗಿದೆ. ಈ ಹಿಂದೆ ವಾಲ್ಮೀಕಿ ಹಗರಣದಿಂದ ನಾಗೇಂದ್ರ ಜೈಲಿಗೆ ಹೋಗಿದ್ದಾರೆ ಎಂದು ಕಿಡಿಕಾರಿದರು.

ಮುಡಾ ಹೆಸರು ಬದಲಾವಣೆಯಾಗಿದೆ. ಅದರೆ ಅದೇ ರೀತಿ ಕೆಲಸ ನಡೆಯುತ್ತಿದೆ. 2021ರಲ್ಲಿ ವಿವಿಧ ಸಂಘ ಸಂಸ್ಥೆಗಳು ಸಿಎ ನಿವೇಶನಕ್ಕೆ ಅರ್ಜಿ ಸಲ್ಲಿಸಿದ್ದವು. ಆದರೆ, ಇತ್ತೀಚೆಗೆ ಮೈಸೂರು ಅಭಿವೃದ್ಧಿ ಪ್ರಾಧಿಕಾರದ ಸಭೆಯಲ್ಲಿ ಹೊಸ ಅರ್ಜಿಗೆ ಆಹ್ವಾನ ಮಾಡಲಾಗಿದೆ. ಇದನ್ನು ಪ್ರಶ್ನಿಸಿದರೆ, ಈಗ ನಿವೇಶನಗಳ ಬೆಲೆ ಏರಿಕೆಯಾಗಿದೆ ಎಂದು ಉತ್ತರ ನೀಡುತ್ತಿದ್ದಾರೆ. ಮರು ಅರ್ಜಿ ಆಹ್ವಾನವನ್ನು ಹಿಂಪಡೆದು ಅರ್ಹತೆಯ ಆಧಾರದ ಮೇಲೆ ಸಂಸ್ಥೆಗಳಿಗೆ ಸಿಎ ನಿವೇಶನ ನೀಡಬೇಕು ಎಂದು ಒತ್ತಾಯಿಸಿದರು.

ಮೈಸೂರಿನಲ್ಲಿ ಕಳೆದ 40 ದಿನಗಳಿಂದ ಸರ್ವರ್ ಸಮಸ್ಯೆಯಿಂದ ಇ–ಖಾತೆ ಆಗಿಲ್ಲ. ಯಾವುದೇ ಅಧಿಕಾರಿಗಳ ಬಳಿ ಕೇಳಿದ್ದಾಗ ಸರ್ವರ್ ಡೌನ್ ಎಂದು ಹೇಳುತ್ತಾರೆ. ಸರ್ವರ್ ಇದ್ದಾಗ ಅಧಿಕಾರಿ ಇರುವುದಿಲ್ಲ. ಬಹುತೇಕ ಅಧಿಕಾರಿಗಳು ಕಚೇರಿ ಅವಧಿಯಲ್ಲಿ ಇರುವುದಿಲ್ಲ. ಇದನ್ನು ಪ್ರಶ್ನಿಸಿದರೆ, ಫೀಲ್ಡ್‌ನಲ್ಲಿ ಇದ್ದಾರೆ ಎಂಬ ಉತ್ತರ ನೀಡುತ್ತಿದ್ದಾರೆ. ಆದರೆ ಸಾರ್ವಜನಿಕರು ಇ–ಖಾತೆಗಾಗಿ ನಿತ್ಯವೂ ಅಲೆದಾಡುವ ಸ್ಥಿತಿ ನಿರ್ಮಾಣವಾಗಿದೆ ಎಂದರು.

ಮೈಸೂರು ಅರಗು ಮತ್ತು ಬಣ್ಣದ ಕಾರ್ಖಾನೆಯಲ್ಲಿ ಶೇ.94ರಷ್ಟು ಶೇರ್ ಇದೆ. ಲಾಭಾಂಶದ ಮೇಲೆ ಸರ್ಕಾರಕ್ಕೆ ಹಣ ನೀಡಲಾಗುತ್ತಿದೆ. ಆದರೆ, ಈ ಬಾರಿ ಸರ್ಕಾರ ಹೆಚ್ಚುವರಿಯಾಗಿ ಶೇ.30ರಷ್ಟು ಹಣ ನೀಡುವಂತೆ ಆದೇಶ ಹೊರಡಿಸಿದ್ದು, ಇದ್ದರಿಂದ ಅಲ್ಲಿನ ಸಿಬ್ಬಂದಿಗೆ ಸಂಬಳ ಕೊಡಲು ಸಾಧ್ಯವಾಗದ ಸ್ಥಿತಿ ನಿರ್ಮಾಣವಾಗಲಿದೆ. ಇದೇ ರೀತಿ ರಾಜ್ಯ ಎಲ್ಲಾ ಸಂಸ್ಥೆಗಳನ್ನು ದಿವಾಳಿ ಮಾಡುತ್ತಿದೆ ಎಂದು ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಸೋಮ್ ಸುಂದರ್, ಸಂತೋಷ್ ಕುಮಾರ್, ರುದ್ರಮೂರ್ತಿ, ಮಹೇಶ್ ರಾಜೇ ಅರಸ್ ಮತ್ತಿತರರು ಉಪಸ್ಥಿತರಿದ್ದರು.

ಹೊಸ ಪಿಂಚಣಿ ಕಾಯ್ದೆ ಹಿಂಪಡೆಯುವಂತೆ ಆಗ್ರಹಿಸಿ ಪ್ರತಿಭಟನೆ

ಪಿಂಚಣಿಗಾರರ ನಿಧಿಯಿಂದ ಪಿಂಚಣಿ ನೀಡಲಾಗುತ್ತಿದೆಯೇ ಹೊರತು ತೆರಿಗೆ ಹಣದಿಂದಲ್ಲ; ಬಲವಾದ ಪ್ರತಿಪಾದನೆ



ಪಿಂಚಣಿ ಕಾಯ್ದೆ–2025ರ ಪ್ರಕಾರ ಕಾಯ್ದೆಗಳ ಕ್ರಮಬದ್ಧಗೊಳಿಸುವಿಕೆಯನ್ನು ತಕ್ಷಣ ಹಿಂಪಡೆಯಬೇಕು ಎಂದು ಒತ್ತಾಯಿಸಿ ರಾಷ್ಟ್ರೀಯ ಪಿಂಚಣಿದಾರರ ಸಂಘಟನೆಗಳ ಸಮನ್ವಯ ಸಮಿತಿ ಸದಸ್ಯರು ಪ್ರತಿಭಟನೆ ನಡೆಸಿದರು.

ಮೈಸೂರು,ಜ.9(ಎಂಟಿವೈ)– ಪಿಂಚಣಿ ಕಾಯ್ದೆ–2025ರ ಪ್ರಕಾರ ಕಾಯ್ದೆಗಳ ಕ್ರಮಬದ್ಧಗೊಳಿಸುವಿಕೆಯನ್ನು ತಕ್ಷಣ ಹಿಂಪಡೆಯಬೇಕು ಎಂದು ಒತ್ತಾಯಿಸಿ ರಾಷ್ಟ್ರೀಯ ಪಿಂಚಣಿದಾರರ ಸಂಘಟನೆಗಳ ಸಮನ್ವಯ ಸಮಿತಿ ಸದಸ್ಯರು ಪ್ರತಿಭಟನೆ ನಡೆಸಿದರು.

ಮೈಸೂರಿನ ಜಯಲಕ್ಷ್ಮೀಪುರಂನಲ್ಲಿರುವ ಬಿಎಸ್‌ಎನ್‌ಎಲ್ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಿದ ಪಿಂಚಣಿದಾರರು, ಕೇಂದ್ರ ಸರ್ಕಾರ ಪಿಂಚಣಿ ಕಾಯ್ದೆ–2025ನ್ನು 1972 ರಿಂದ ಅನ್ವಯ ಆಗುವಂತೆ ಜಾರಿಗೊಳಿಸಿ ಪಿಂಚಣಿದಾರರ ಹಕ್ಕುಗಳನ್ನು ಕಸಿಯಲು ಹೊರಟಿದೆ. ಈ ಕಾಯ್ದೆ ಜಾರಿಯಾದರೆ ಪಿಂಚಣಿ ಟಿಎ, ಡಿಎ ಕಡಿತಗೊಳಿಸುವ ಅಧಿಕಾರ ಕೇಂದ್ರ ಸರ್ಕಾರಕ್ಕೆ ಬರುತ್ತದೆ. ಇದರಿಂದ ಪಿಂಚಣಿದಾರರಿಗೆ ಅನ್ಯಾಯವಾಗುತ್ತದೆ. ಈ ಕಾಯ್ದೆಯಿಂದ ಯಾವುದೇ ಕಾನೂನು ರಕ್ಷಣೆ ಸಿಗುವುದಿಲ್ಲ. ಅಲ್ಲದೆ 10 ಲಕ್ಷ ಕೋಟಿ ಪಿಂಚಣಿದಾರರ ನಿಧಿಯಿದ್ದು ಆ ಹಣದಿಂದಲೇ ಪಿಂಚಣಿ ನೀಡಲಾಗುತ್ತಿದೆ. ಆದರೆ, ಕೇಂದ್ರ ಸರ್ಕಾರ ಸಾರ್ವಜನಿಕರ ತೆರಿಗೆ ಹಣದಿಂದ ನೀಡಲಾಗುತ್ತಿದೆ ಎಂದು ಸುಳ್ಳು ಹೇಳುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಪಿಂಚಣಿದಾರರ ನಿಧಿಯಲ್ಲಿನ ಹಣವನ್ನು ಬೇರೆ ಯೋಜನೆಗಳಿಗೆ ವರ್ಗಾಯಿಸಿಕೊಳ್ಳಲು ಕೇಂದ್ರ ಸರ್ಕಾರ ಸಂಚು ರೂಪಿಸುತ್ತಿದೆ. ಅಲ್ಲದೆ ಪ್ರಧಾನಮಂತ್ರಿಗಳ ಆರ್ಥಿಕ ಸಲಗೆಗಾರರು ಪಿಂಚಣಿ ನಿಲ್ಲಿಸುವಂತೆ ಸಲಹೆ ನೀಡಿರುವುದು ಆತಂಕಕ್ಕೆ ಕಾರಣವಾಗಿದೆ. ಹೀಗಾಗಿ ಕೂಡಲೇ ಪಿಂಚಣಿ ಕಾಯ್ದೆ–2025ರ ಪ್ರಕಾರ ಕಾಯ್ದೆಗಳ ಕ್ರಮಬದ್ಧಗೊಳಿಸುವಿಕೆಯನ್ನು ತಕ್ಷಣ ಹಿಂಪಡೆಯಬೇಕು. 8ನೇ ವೇತನ ಆಯೋಗದ ಉಲ್ಲೇಖಕ್ಕೆ ತಿದ್ದುಪಡಿ ತರುವ ಮೂಲಕ ಪಿಂಚಣಿ ಪರಿಷ್ಕರಣೆಗೆ 2026ಕ್ಕಿಂತ ಹಿಂದಿನ ಪಿಂಚಣಿದಾರರನ್ನೂ ಸೇರಿಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಅಧ್ಯಕ್ಷ ಪರಮೇಶ್ವರಯ್ಯ, ಜಿಲ್ಲಾ ಕಾರ್ಯದರ್ಶಿಗಳಾದ ಎಸ್.ವಿಷಕಂಠಮೂರ್ತಿ, ರಾಜಶೇಖರ, ಬಸವರಾಜು, ಸುಬ್ರಹ್ಮಣ್ಯಂ, ಶ್ರೀಧರ್, ರಾಜಗೋಪಾಲ್ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ಕರ್ನಾಟಕ ಕಬ್ಬಡಿ ತಂಡಕ್ಕೆ ಆಯ್ಕೆ



ಸಿ.ಪುಷ್ಪಾ



ಆರ್.ಸುಲ್ತಾನ



ಎಂ.ಟಿ.ಪ್ರಣತಿ

ಮೈಸೂರು, ಜ.9(ಎಸ್‌ಪಿಎನ್)– ಉತ್ತರಖಂಡದ ನೈನಿತಾಲ್‌ನ ಬಾಜ್‌ಪುರದ ಶ್ರೀ ಗುರುದ್ವಾರ ಸಾಹಿಬ್ ಸಭಾಂಗಣದಲ್ಲಿ ಶನಿವಾರದಿಂದ(ಜ.10) ಜ.12ರವರೆಗೆ ನಡೆಯುವ 19ನೇ ಸಿನಿಯರ್ ಸರ್ಕಲ್ ಸ್ಟೈಲ್ ರಾಷ್ಟ್ರೀಯ ಕಬ್ಬಡಿ ತಂಡಕ್ಕೆ ಮೈಸೂರು ಹ್ಯಾಪಿ ಗರ್ಲ್ಸ್ ಕಬಡ್ಡಿ ತಂಡದ ಕ್ರೀಡಾಪಟುಗಳಾದ ಚಿಕ್ಕಸಿದ್ದಯ್ಯ ಮತ್ತು ರತ್ನ ದಂಪತಿ ಪುತ್ರಿ ಸಿ.ಪುಷ್ಪಾ, ಲೇಟ್ ರಫೀಕ್ ಮತ್ತು ಶಹನುವಾಜ್ ದಂಪತಿ ಪುತ್ರಿ ಆರ್.ಸುಲ್ತಾನ, ರಾಮೇಗೌಡ ಮತ್ತು ತುಳಸಿ ದಂಪತಿ ಪುತ್ರಿ ಎಂ.ಟಿ.ಪ್ರಣತಿ ಅವರು ಕರ್ನಾಟಕ ಕಬ್ಬಡಿ ತಂಡಕ್ಕೆ ಆಯ್ಕೆಯಾಗಿದ್ದಾರೆ.

ಮೈಸೂರು ಜಿಲ್ಲಾ ಅಮೆಚೂರ್ ಕಬಡ್ಡಿ ಅಸೋಸಿಯೇಷನ್ ಅಧ್ಯಕ್ಷ ಅನಿಲ್, ಕಾರ್ಯದರ್ಶಿ ದಿನೇಶ್, ಪ್ರಸನ್ನ ಹಾಗೂ ಹ್ಯಾಪಿ ಗರ್ಲ್ಸ್ ಕಬಡ್ಡಿ ತಂಡದ ಅಧ್ಯಕ್ಷ ರಘು ಮತ್ತು ತರಬೇತಿದಾರ ಇಲಿಯಾಸ್ ರಾಜ್ಯ ಕಬಡ್ಡಿ ತಂಡಕ್ಕೆ ಆಯ್ಕೆಯಾದ ಆಟಗಾರರನ್ನು ಅಭಿನಂದಿಸಿದ್ದಾರೆ.

ಸಂಶೋಧನಾ ಪ್ರಬಂಧಕ್ಕೆ ಚಿನ್ನದ ಪದಕ



ಮೈಸೂರು, ಜ.9– ಚಾಮರಾಜನಗರ ಜಿಲ್ಲೆಯ ರಾಮಸಮುದ್ರ ಗ್ರಾಮದ ಸಿದ್ದರಾಜು.ಆರ್.ಸಿ ಅವರಿಗೆ ಎಂಎ ಜಾನಪದ ವಿಭಾಗದಲ್ಲಿ 'ಜಾನಪದ ಕಲಾವಿದ ಪುಟ್ಟಮಲ್ಲೇಗೌಡರ ಜೀವನ ಮತ್ತು ಸಾಧನೆ' ವಿಷಯ ಕುರಿತು ಪ್ರೊ.ಎಂ.ನಂಜಯ್ಯ ಹೊಂಗನೂರು ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಕಿರುಪ್ರಬಂಧಕ್ಕೆ ಮೈಸೂರು ವಿಶ್ವವಿದ್ಯಾಲಯ ಚಿನ್ನದ ಪದಕ ನೀಡಿ ಗೌರವಿಸಿದೆ.

ಮೈಸೂರು ವಿಶ್ವವಿದ್ಯಾಲಯದ 106ನೇ ಘಟಿಕೋತ್ಸವದಲ್ಲಿ ವಿವಿ ಕುಲಪತಿ ಪ್ರೊ. ಎನ್.ಕೆ.ಲೋಕನಾಥ್ ಪದವಿ ಪ್ರದಾನ ಮಾಡಿದರು.

ಉಪ್ಪಾರ ಸಂಘದ ವತಿಯಿಂದ ಸಾಧಕರಿಗೆ ಸನ್ಮಾನ



ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಭವನದಲ್ಲಿ ಜಿಲ್ಲಾ ಉಪ್ಪಾರ ಸಂಘದ ಮುಖಂಡ ಕೆ.ಟಿ.ಮೋಹನ್ ಕುಮಾರ್ ಮಾತನಾಡಿದರು.

ಮೈಸೂರು,ಜ.9(ಎಂಟಿವೈ)– ಮೈಸೂರು ಜಿಲ್ಲಾ ಉಪ್ಪಾರ ಸಂಘದ ವತಿಯಿಂದ ಜ.11ರಂದು ಬೆಳಗ್ಗೆ 10.30ಕ್ಕೆ ಗೋವರ್ಧನ್ ಹೋಟೆಲ್ ಸಭಾಂಗಣದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈಯ್ದ ಉಪ್ಪಾರ ಸಮುದಾಯದ ಸಾಧಕರು, ಸಮಾಜ ಸೇವಕರಿಗೆ ಸನ್ಮಾನ ಹಾಗೂ 2026ನೇ ಸಾಲಿನ ಕ್ಯಾಲೆಂಡರ್ ಬಿಡುಗಡೆ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ ಎಂದು ಶ್ರೀ ಭಗೀರಥ ಸಮಾಜಸೇವಾ ಪ್ರಶಸ್ತಿ ಪುರಸ್ಕೃತ ಕೆ.ಟಿ.ಮೋಹನ್ ಕುಮಾರ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹೊಸದುರ್ಗದ ಶ್ರೀ ಭಗೀರಥ ಪೀಠದ ಶ್ರೀ ಡಾ.ಪುರುಷೋತ್ತಮಾನಂದ ಪುರಿ ಮಹಾ ಸ್ವಾಮೀಜಿ ಸಾನಿಧ್ಯದಲ್ಲಿ ನಡೆಯುವ ಕಾರ್ಯಕ್ರಮವನ್ನು ಮಾಜಿ ಸಚಿವರು, ಎಂಎಸ್‌ಐಎಲ್ ಅಧ್ಯಕ್ಷರು ಆಗಿರುವ ಶಾಸಕ ಸಿ.ಪುಟ್ಟರಂಗಶೆಟ್ಟಿ ಉದ್ಘಾಟಿಸಲಿದ್ದಾರೆ. ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮದ ಅಧ್ಯಕ್ಷ ಭರಮಣ್ಣ ಲಕ್ಷ್ಮಣ ಉಪ್ಪಾರ ಹಾಗೂ ರಾಜ್ಯ ಉಪ್ಪಾರ ಸಂಘದ ಪ್ರಧಾನ ಕಾರ್ಯದರ್ಶಿ ಯು.ವೆಂಕೋಬ ಅವರು ಶ್ರೀ ಭಗೀರಥ ಮಹರ್ಷಿಯವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಲಿದ್ದಾರೆ. ನೂತನ ವರ್ಷದ ಕ್ಯಾಲೆಂಡರನ್ನು ಮುಡಾ ಮಾಜಿ ಅಧ್ಯಕ್ಷ ಹೆಚ್.ಎನ್.ವಿಜಯ್, ಕೆಎಂಎಫ್ ನಿರ್ದೇಶಕರಾದ ಶೀಲಾ ಪುಟ್ಟರಂಗಶೆಟ್ಟಿ ಹಾಗೂ ಮಾಜಿ ಉಪಮೇಯರ್ ಡಾ.ರೂಪ ಯೋಗೇಶ್ ಬಿಡುಗಡೆ ಮಾಡಲಿದ್ದು, ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮೈಸೂರು ಜಿಲ್ಲಾ ಉಪ್ಪಾರ ಸಂಘದ ಅಧ್ಯಕ್ಷ ನಾಗರಾಜು ಕರಳಪುರ ವಹಿಸಲಿದ್ದಾರೆ ಎಂದರು.

ಇದೇ ವೇಳೆ ಸಂವಿಧಾನ ಮತ್ತು ಸಾಮಾಜಿಕ ಸಮೀಕ್ಷೆ ಕುರಿತು ಜಿ.ಪಂ. ನಿವೃತ್ತ ಉಪ ಕಾರ್ಯದರ್ಶಿ ಕೆ.ಎಂ.ಶಿವಕುಮಾರ ಸ್ವಾಮಿ ಉಪನ್ಯಾಸ ನೀಡಲಿದ್ದಾರೆ. ಕಾರ್ಯಕ್ರಮದಲ್ಲಿ ವೃತ್ತ ನಿರೀಕ್ಷಕರುಗಳಾದ ಸಿ.ಶಿವನಂಜಶೆಟ್ಟಿ, ಮಹದೇವಸ್ವಾಮಿ, ಮಹದೇವಸ್ವಾಮಿ, ಸಬ್ ಇನ್ಸ್‌ಪೆಕ್ಟರ್‌ಗಳಾದ ಕೃಷ್ಣಕಾಂತ್ ಕೋಳಿ, ಬಸವರಾಜು, ಅರಣ್ಯ ಅಧಿಕಾರಿ ಸೋಮು, ಬೆಂಗಳೂರು ಗ್ರಾಮಾಂತರ ಉಪ್ಪಾರ ಸಂಘದ ಅಧ್ಯಕ್ಷ ಸುನಿಲ್, ಗೌರಿಬಿದನೂರಿನ ಉದ್ಯಮಿ ನಾಗರಾಜು ಸೇರಿದಂತೆ ಸಮಾಜದ ಸಾಧಕರು ಸಮಾಜಸೇವಕರು ಹಾಗೂ ಗಣ್ಯರನ್ನು ಅಭಿನಂದಿಸಲಾಗುವುದು ಎಂದರು.

ಮೈಸೂರು ಜಿಲ್ಲಾ ಉಪ್ಪಾರ ಸಂಘದ ಅಧ್ಯಕ್ಷ ನಾಗರಾಜು ಕರಳಪುರ ಮಾತನಾಡಿ ಜಿಲ್ಲೆಯಾದ್ಯಂತ ಉಪ್ಪಾರ ಸಂಘಟನೆ ಮಾಡುವ ಕೆಲಸವನ್ನು ಎಲ್ಲರ ಸಲಹೆ, ಸಹಕಾರ, ಮಾರ್ಗದರ್ಶನದೊಂದಿಗೆ ಮಾಡಲಾಗುತ್ತಿದೆ. ಮುಂದಿನ ದಿನಗಳಲ್ಲಿ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ಪ್ರವಾಸ ಕೈಗೊಂಡು ಗ್ರಾಮ ಮಟ್ಟದಿಂದ ನಗರ ಪ್ರದೇಶದವರೆಗೆ ಇರುವ ಉಪ್ಪಾರ ಸಮಾಜದ ಬಂಧುಗಳನ್ನು ಒಂದೇ ವೇದಿಕೆಯಡಿ ತರುವಂತಹ ಕೆಲಸವನ್ನು ಮಾಡುವ ಮೂಲಕ ಉಪ್ಪಾರ ಸಂಘಟನೆಯನ್ನು ಬಲಪಡಿಸಲಾಗುವುದು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮೈಸೂರು ಜಿಲ್ಲಾ ಉಪ್ಪಾರ ಸಂಘದ ಗೌರವಾಧ್ಯಕ್ಷ ಕನಕನಗರ ಮಹದೇವ್, ಪ್ರಧಾನ ಕಾರ್ಯದರ್ಶಿ ಜೆ.ಕೃಷ್ಣ, ಸಂಘಟನಾ ಕಾರ್ಯದರ್ಶಿ ಆರ್.ವಿನೋದ್ ಉಪ್ಪಾರ್, ಕಾರ್ಯದರ್ಶಿ ಮಲ್ಲೇಶ್, ಮಹಿಳಾ ಘಟಕದ ಪ್ರಧಾನ ಕಾರ್ಯದರ್ಶಿ ವಿಜಯ ಕುಮಾರಿ, ಪದಾಧಿಕಾರಿಗಳಾದ ಮಹೇಶ್, ವೆಂಕಟೇಶ್, ಜಿಲ್ಲಾ ಉಪ್ಪಾರ ಸಂಘದ ಮಹಿಳಾ ಘಟಕದ ಅಧ್ಯಕ್ಷೆ ಗೌರಮ್ಮ, ಮಹಿಳಾ ಘಟಕದ ಗೌರವಾಧ್ಯಕ್ಷೆ ಡಾ.ಗೀತಾ ಇದ್ದರು.

ಜ.17, 18ರಂದು ಸಿನಿಮಾಸನ ಶಿಬಿರ

ಮೈಸೂರು,ಜ.9(ಎಂಟಿವೈ)–ಮೈಸೂರಿನ ದಿ. ಗ್ರೀನ್ ಹೋಟೆಲ್ ಸಭಾಂಗಣದಲ್ಲಿ ಜ.17 ಮತ್ತು 18ರಂದು 'ಸಿನಿಮಾಸನ ಶಿಬಿರ' ಆಯೋಜಿಸಲಾಗಿದೆ ಎಂದು ಖ್ಯಾತ ಪಿಟೀಲು ವಾದಕ ಸುಮಂತ್ ಮಂಜುನಾಥ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಡ್ ಸ್ಟೋರಿ ರಿಟ್ರೀಟ್ ಹಾಗೂ ಅನೋಖಿ ಗಾರ್ಡನ್‌ಗಳ ಸಂಯುಕ್ತಾಶ್ರಯದಲ್ಲಿ ಜ. 17 ಮತ್ತು 18 ರಂದು ಈ ಶಿಬಿರ ನಡೆಯುತ್ತಿದ್ದು, ಶಿವಾಜಿ ಸುರತ್ಕಲ್ ಚಿತ್ರ ನಿರ್ದೇಶಕ ಆಕಾಶ್ ಶ್ರೀವತ್ಸ ಶಿಬಿರವನ್ನು ನಿರ್ವಹಿಸುವರು. ಅಮೆರಿಕಾ ಮೂಲದ ಪ್ರಸ್ತುತ ಮೈಸೂರಿನಲ್ಲಿ ನೆಲೆಸಿರುವ ಯೋಗ ಶಿಕ್ಷಕಿ ಮತ್ತು ನಟಿ ಸ್ಯಾಂಡಿ ಹಿಗ್ಗಿನ್ಸ್ ಅವರು ಶಿಬಿರದಲ್ಲಿ ಪಾಲ್ಗೊಳ್ಳಲಿದ್ದಾರೆ. ಶಿಬಿರವು ಸಿನಿಮಾ ನಿರ್ಮಾಣ, ಯೋಗಾಭ್ಯಾಸ, ಇದರೊಡನೆ ನೇರ ರಾಗ ಸಂಯೋಜನೆ, ಭಾವನೆ, ಲಯ ನೆಲೆಯಲ್ಲಿ ಸೃಜನಶೀಲತೆ ಅನ್ವೇಷಿಸುವ ಉದ್ದೇಶ ಹೊಂದಿದೆ. ಹೆಚ್ಚಿನ ಮಾಹಿತಿಗೆ 76195 70635 ಅನ್ನು ಸಂಪರ್ಕಿಸುವಂತೆ ಕೋರಿದರು. ಸುದ್ದಿಗೋಷ್ಠಿಯಲ್ಲಿ ಅಂತರರಾಷ್ಟ್ರೀಯ ಯೋಗ ಪಟು ಸ್ಯಾಂಡಿ ಹಿಗಿನ್ಸ್ ಇದ್ದರು.

ಜ.12, ಸ್ವಾಮಿ ವಿವೇಕಾನಂದ ಜಯಂತ್ಯುತ್ಸವ

ಮೈಸೂರು, ಜ.9– ಮೈಸೂರಿನ ರಾಮಕೃಷ್ಣ ವೃತ್ತದ ಶ್ರೀ ರಾಮಕೃಷ್ಣ ಪರಮಹಂಸ ಸೇವಾ ಪ್ರತಿಷ್ಠಾನ ಹಾಗೂ ವಿವೇಕಾನಂದ ಜಯಂತ್ಯುತ್ಸವ ಸಮಿತಿ ಸಹಯೋಗದಲ್ಲಿ ಜ.12ರಂದು ಸ್ವಾಮಿ ವಿವೇಕಾನಂದ ಜಯಂತ್ಯುತ್ಸವ ಆಯೋಜಿಸಲಾಗಿದೆ.

ಕುವೆಂಪುನಗರ ಕಾಂಪ್ಲೆಕ್ಸ್ ಬಳಿಯ ಆಂಜನೇಯ ಸ್ವಾಮಿ ದೇವಸ್ಥಾನದಿಂದ ಅಂದು ಸಂಜೆ 4.30ಕ್ಕೆ ಮೆರವಣಿಗೆ ಆರಂಭವಾಗಲಿದೆ. ವಿವೇಕಾನಂದನಗರದ ವಿವೇಕಾನಂದ ವೃತ್ತಕ್ಕೆ ಮೆರವಣಿಗೆ ತಲುಪಿದ ನಂತರ ಸಂಜೆ 6ಕ್ಕೆ ಸಭಾ ಕಾರ್ಯಕ್ರಮ ನಡೆಯಲಿದೆ.

ಶ್ರೀ ರಾಮಕೃಷ್ಣ ಆಶ್ರಮದ ಸ್ವಾಮಿ ಮುಕ್ತಿದಾನಂದ ಮಹಾರಾಜ್ ಅವರ ಸಾನಿಧ್ಯದಲ್ಲಿ ಶಾಸಕ ಟಿ.ಎಸ್.ಶ್ರೀವತ್ಸ, ವಿವೇಕಾನಂದರ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಲಿದ್ದಾರೆ. ಸತತ 14 ಗಂಟೆ ವಿವೇಕಾನಂದರ ವಿಚಾರಧಾರೆ ಮಂಡಿಸಿದ ಪ್ರತಿಭಾನ್ವಿತ ಚೇತನ್ ಕುಮಾರ್, ವಿವೇಕಾನಂದರ ಕುರಿತು ಮಾತನಾಡಲಿದ್ದಾರೆ. ಶ್ರೀ ರಾಮಕೃಷ್ಣ ಸೇವಾ ಪ್ರತಿಷ್ಠಾನದ ಅಧ್ಯಕ್ಷರಾದ ವಿಧಾನ ಪರಿಷತ್ ಮಾಜಿ ಸದಸ್ಯ ಡಿ.ಮಾದೇಗೌಡ, ಕಾರ್ಯಾಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ, ಮಾಜಿ ಶಾಸಕರಾದ ಎಲ್.ನಾಗೇಂದ್ರ, ಎಂ.ಕೆ.ಸೋಮಶೇಖರ್ ಸೇರಿದಂತೆ ಹಲವು ಗಣ್ಯರು ಭಾಗವಹಿಸಲಿದ್ದಾರೆ ಎಂದು ಪ್ರತಿಷ್ಠಾನದ ಪದಾಧಿಕಾರಿ ಬೂಕನಕೆರೆ ವಿಜೇಂದ್ರ ತಿಳಿಸಿದ್ದಾರೆ.

ಶಬರಿಮಲೆ 'ಚಿನ್ನ ಕಳ್ಳತನ' ಪ್ರಕರಣ: ಎಸ್‌ಐಟಿ ತನಿಖೆ, ಪ್ರಧಾನ ಅರ್ಚಕ ಬಂಧನ!

ತಿರುವನಂತಪುರಂ, ಜ.9– ಶಬರಿಮಲೆ ಚಿನ್ನಾಭರಣ ಕಳ್ಳತನ ಪ್ರಕರಣದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡ (SIT) ಶುಕ್ರವಾರ ಇಲ್ಲಿನ ಅಯ್ಯಪ್ಪ ದೇವಾಲಯದ ಪ್ರಧಾನ ಅರ್ಚಕ ಕಂದರಾರು ರಾಜೀವರನ್ನು ಬಂಧಿಸಿದೆ.

ಅಯ್ಯಪ್ಪ ಸ್ವಾಮಿ ದೇಗುಲದಲ್ಲಿ ಪ್ರಮುಖ ಹುದ್ದೆಯಲ್ಲಿದ್ದ ತಂತ್ರಿ ರಾಜೀವರು ಅವರನ್ನು ಬೆಳಿಗ್ಗೆ ಅಜ್ಞಾತ ಸ್ಥಳದಲ್ಲಿ ವಿಚಾರಣೆಗೊಳಪಡಿಸಲಾಯಿತು. ನಂತರ ಮಧ್ಯಾಹ್ನ ಎಸ್‌ಐಟಿ ಕಚೇರಿಗೆ ಸ್ಥಳಾಂತರಿಸಲಾಯಿತು. ಅಲ್ಲಿ ಅಧಿಕೃತವಾಗಿ ಬಂಧಿಸಲಾಯಿತು ಎಂದು ಮೂಲಗಳು ಹೇಳಿವೆ.

ಪ್ರಮುಖ ಆರೋಪಿ ಉನ್ನಿಕೃಷ್ಣನ್ ಪಾಟಿ ಮತ್ತು ತಿರುವಾಂಕೂರು ದೇವಸ್ವಂ ಮಂಡಳಿಯ ಮಾಜಿ ಅಧ್ಯಕ್ಷ ಎ ಪದ್ಮಕುಮಾರ್ ನೀಡಿದ ಹೇಳಿಕೆಗಳನ್ನು ಆಧರಿಸಿ ಇವರನ್ನು ಬಂಧಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರಾಜೀವರು ಪಾಟಿಯೊಂದಿಗೆ ನಿಕಟ ಸಂಬಂಧವನ್ನು ಹೊಂದಿದ್ದರು ಮತ್ತು ದ್ವಾರಪಾಲಕರ ವಿಗ್ರಹಗಳ ಚಿನ್ನದ ಲೇಪನ ಬದಲಾಯಿಸಲು ಶಿಫಾರಸು ಮಾಡಿದ್ದಾರೆ ಎಂದು SIT ತನಿಖೆ ವೇಳೆ ತಿಳಿದುಬಂದಿದೆ.

ನಂತರ, ತಿರುವಾಂಕೂರು ದೇವಸ್ವಂ ಮಂಡಳಿಯು ಮರುಲೇಪನಕ್ಕೆ ಅನುಮತಿ ಕೋರಿದಾಗ ರಾಜೀವರು ಅನುಮೋದನೆಯನ್ನು ನೀಡಿದ್ದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ತನಿಖೆಯ ಭಾಗವಾಗಿ ಈ ಹಿಂದೆ ರಾಜೀವರನ್ನು ವಿಚಾರಣೆ ನಡೆಸಲಾಗಿತ್ತು ಎಂದು ಎಸ್‌ಐಟಿ ಅಧಿಕಾರಿಗಳು ತಿಳಿಸಿದ್ದಾರೆ. ಚಿನ್ನ ಕಳ್ಳತನ ಪ್ರಕರಣದ ತನಿಖೆಗಾಗಿ ಕೇರಳ ಹೈಕೋರ್ಟ್ ಎಸ್‌ಐಟಿ ರಚಿಸಿದ ನಂತರ ಪ್ರಕರಣದಲ್ಲಿ ಬಂಧಿತರಾದವರಲ್ಲಿ ರಾಜೀವರ 11 ನೇ ವ್ಯಕ್ತಿಯಾಗಿದ್ದಾರೆ.

ರಿಮಾಂಡ್ ಪ್ರಕ್ರಿಯೆಯ ಭಾಗವಾಗಿ ಅವರನ್ನು ವಿಜಿಲೆನ್ಸ್ ನ್ಯಾಯಾಲಯಕ್ಕೆ ಹಾಜರುಪಡಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಕೇರಳ ಹೈಕೋರ್ಟ್‌ನ ಮೇಲ್ವಿಚಾರಣೆಯಲ್ಲಿ ತನಿಖೆ ನಡೆಸಲಾಗುತ್ತಿದೆ ಎಂದು ದೇವಸ್ವಂ ಸಚಿವ ವಿ ಎನ್ ವಾಸವನ್ ಹೇಳಿದ್ದಾರೆ

ಜಾಗತಿಕ ಮಟ್ಟದಲ್ಲಿ ಸಾಮರ್ಥ್ಯ ಮೆರೆಯುವ ಪ್ರತಿಭೆಗಳು ಭಾರತದಲ್ಲಿವೆ

- ವಿಶ್ರಾಂತ ಕುಲಪತಿಗಳೂ ಆದ ವಿಶ್ವಖ್ಯಾತಿಯ ವಿಜ್ಞಾನ ಪ್ರೊ.ಕೆ.ಎಸ್.ರಂಗಪ್ಪ ಪ್ರಶಂಸೆ
- ಆದರೆ ಭಾರತದಲ್ಲಿ ಸಂಶೋಧನೆಗೆ ಹೇಳಿಕೊಳ್ಳುವಷ್ಟು ಪ್ರೋತ್ಸಾಹ ಇಲ್ಲ; ಬೇಸರ



ಮೈಸೂರಿನ ಕಾವೇರಿ ಸಮೂಹ ಶಿಕ್ಷಣ ಸಂಸ್ಥೆಗಳ ವತಿಯಿಂದ ಆಯೋಜಿಸಿದ್ದ ಸಂಶೋಧನೆ ಕುರಿತ ವಿಶೇಷ ಕಾರ್ಯಾಗಾರವನ್ನು ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ ಉದ್ಘಾಟಿಸಿದರು. ಈ ವೇಳೆ ಕಾವೇರಿ ಸಂಸ್ಥೆಗಳ ಅಧ್ಯಕ್ಷ ಡಾ.ಜಿ.ಆರ್.ಚಂದ್ರಶೇಖರ್ ಮತ್ತಿತರ ಗಣ್ಯರು ಉಪಸ್ಥಿತರಿದ್ದರು.

ಮೈಸೂರು, ಜ.9– ಮೈಸೂರಿನ ಪ್ರತಿಷ್ಠಿತ ಕಾವೇರಿ ಸಮೂಹ ಶಿಕ್ಷಣ ಸಂಸ್ಥೆಯ ಕಾಲೇಜಿನ ಸಭಾಂಗಣದಲ್ಲಿ 'ಅಂತರಶಾಖಾ ಸಂಶೋಧನೆಯಲ್ಲಿ, ಸಂಶೋಧನಾ ಸಾಮರ್ಥ್ಯ ವೃದ್ಧಿ ಹಾಗೂ ಯೋಜನಾ ಪ್ರಸ್ತಾವನೆ ತಯಾರಿಕೆ' ಕುರಿತ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು.

ಕಾರ್ಯಾಗಾರವನ್ನು ಉದ್ಘಾಟಿಸಿದ ಮೈಸೂರು ವಿಶ್ವವಿದ್ಯಾಲಯ ಹಾಗೂ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿಗಳೂ ಆದ ವಿಶ್ವ ಖ್ಯಾತಿಯ ವಿಜ್ಞಾನಿ ಪ್ರೊ.ಕೆ.ಎಸ್.ರಂಗಪ್ಪ ಮಾತನಾಡಿ, ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಭಾರತದಲ್ಲಿ ಸಂಶೋಧನೆಗೆ ಪ್ರಾಮುಖ್ಯತೆ ಕಡಿಮೆ ಇದೆ. ಅಲ್ಲದೆ ಇದಕ್ಕಾಗಿ ವೆಚ್ಚ ಮಾಡುವ ಹಣದ ಪ್ರಮಾಣವೂ ಕಡಿಮೆ ಎಂದರು.

ಆದರೆ ದೇಶದಲ್ಲಿ ಅಪಾರ ಸಂಖ್ಯೆಯ ಪ್ರತಿಭಾವಂತ ಯುವ ವಿಜ್ಞಾನಿಗಳು ಇದ್ದು, ತಮ್ಮ ಸಾಮರ್ಥ್ಯವನ್ನು ಜಾಗತಿಕ ಮಟ್ಟದಲ್ಲಿ ಪ್ರದರ್ಶಿಸುವ ಶಕ್ತಿ ಹೊಂದಿದ್ದಾರೆ. ಭಾರತವು ಜಗತ್ತಿನ ಶೇಕಡಾ 60ರಷ್ಟು ಲಸಿಕೆ ಪೂರೈಕೆಯನ್ನು ಮಾಡುತ್ತಿರುವುದು ನಮ್ಮ ವೈಜ್ಞಾನಿಕ ಸಾಮರ್ಥ್ಯಕ್ಕೆ ಸಾಕ್ಷಿಯಾಗಿದೆ. ಶಿಕ್ಷಣ ಸಂಸ್ಥೆಗಳು ಸಂಶೋಧನಾ ಚಟುವಟಿಕೆಗಳಿಗೆ ಹೆಚ್ಚಿನ ಒತ್ತು ನೀಡಬೇಕಿದ್ದು, ಈ ನಿಟ್ಟಿನಲ್ಲಿ ಕಾವೇರಿ ಸಮೂಹ ಶಿಕ್ಷಣ ಸಂಸ್ಥೆಯು ಕಾರ್ಯಾಗಾರ ನಡೆಸುತ್ತಿರುವುದು ಶ್ಲಾಘನೀಯ. ವಿದ್ಯಾರ್ಥಿಗಳಿಗೆ ಇಂತಹ ವೇದಿಕೆಗಳನ್ನು ಕಲ್ಪಿಸುವ ಮೂಲಕ ವಿಜ್ಞಾನ ಹಾಗೂ ಸಂಶೋಧನೆಯನ್ನು ಜೀವನದ ಭಾಗವಾಗಿಸಬೇಕು ಎಂದು ಆಶಿಸಿದರು.

ಅಧ್ಯಕ್ಷತೆ ವಹಿಸಿದ್ದ ಕಾವೇರಿ ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಡಾ.ಜಿ.ಆರ್.ಚಂದ್ರಶೇಖರ್ ಮಾತನಾಡಿ, ಸಂಶೋಧನೆ ಎನ್ನುವುದು ಜೀವನ ಪರಿವರ್ತನೆಯ ಸಾಧನವಾಗಿದ್ದು, ಅದರ ಪ್ರಯೋಜನವನ್ನು ಸಮಾಜದ ಅಭಿವೃದ್ಧಿಗೆ ಬಳಸಬೇಕು. ಯುವ ಮನಸ್ಸುಗಳಲ್ಲಿ ಸಂಶೋಧನಾ ಚಿಂತನೆಯನ್ನು ಬೆಳೆಸುವುದು ಹಾಗೂ ನಿಷ್ಠೆ ಮತ್ತು ಶ್ರಮದೊಂದಿಗೆ ಕೆಲಸ ಮಾಡಲು ಪ್ರೇರೇಪಿಸುವುದು ವಿದ್ಯಾಸಂಸ್ಥೆಗಳ ಜವಾಬ್ದಾರಿಯಾಗಿದೆ ಎಂದರು.

ಸಂಪನ್ಮೂಲ ವ್ಯಕ್ತಿಗಳಾದ ಬೆಂಗಳೂರಿನ ಜಿ.ಬಿ.ಪಂತ್, ರಾಷ್ಟ್ರೀಯ ಹಿಮಾಲಯ ಪರಿಸರ ಸಂಸ್ಥೆಯ ಪ್ರೊ.ಸುನಿಲ್ ನೌಟಿಯಾಲ್ ಹಾಗೂ ಮೈಸೂರಿನ ಸಿಎಫ್‌ಟಿಆರ್‌ಐ ಸಂಸ್ಥೆಯ ಮುಖ್ಯ ವಿಜ್ಞಾನಿ ಡಾ.ಪ್ರಕಾಶ್ ಎಲ್.ಹಲಾಮಿ ಅವರು 'ಅಂತರಶಾಖಾ ಸಂಶೋಧನೆ ಮತ್ತು ಪರಿಣಾಮಕಾರಿಯಾದ ಯೋಜನಾ ಪ್ರಸ್ತಾವನೆ ತಯಾರಿಕೆ' ಕುರಿತು ಮಾತನಾಡಿದರು.

ಸಂಸ್ಥೆಯ ಡೀನ್ ಪ್ರೊ.ಎಸ್.ಶ್ರೀಕಂಠಸ್ವಾಮಿ, ಕಾವೇರಿ ಹೃದಯ ಹಾಗೂ ಬಹುವಿಶೇಷ ಆಸ್ಪತ್ರೆಯ ಸಾಮಾನ್ಯ ಶಸ್ತ್ರಚಿಕಿತ್ಸಕರಾದ ಡಾ.ಆರ್.ಎಂ.ಅರವಿಂದ್, ಸಂಸ್ಥೆಯ ವಿವಿಧ ಕಾಲೇಜುಗಳ ಪ್ರಾಂಶುಪಾಲರು, ಬೋಧಕ ವರ್ಗ, ಕಾವೇರಿ ಸಮೂಹ ಶಿಕ್ಷಣ ಸಂಸ್ಥೆಯ ಸುಮಾರು 200ಕ್ಕೂ ಹೆಚ್ಚು ಅಧ್ಯಾಪಕ ವೃಂದದವರು ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು.

ಮೈಸೂರು ಪರಂಪರೆ, ಯದುವಂಶ ಉಳಿಯಲು ಮಹಿಳೆಯರೇ ಕಾರಣ

ಜೀವನೋಪಾಯ ಕೇಂದ್ರ ಉದ್ಘಾಟನೆಯಲ್ಲಿ ಯದುವೀರ್ ಅಭಿಪ್ರಾಯ



ಮೈಸೂರು ಮಹಾನಗರ ಪಾಲಿಕೆ ಮತ್ತು ಜ್ಞಾನಜ್ಯೋತಿ ಸಂಸ್ಥೆ ವತಿಯಿಂದ ಬೋಗಾದಿಯ ಕುದುರೆಮಾಳದಲ್ಲಿರುವ ಸಮುದಾಯ ಭವನದ ಮೊದಲನೇ ಮಹಡಿಯಲ್ಲಿ ಆರಂಭಿಸಿರುವ ನಗರ ಜೀವನೋಪಾಯ ಕೇಂದ್ರ(ಪೂರ್ವ)ವನ್ನು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಉದ್ಘಾಟಿಸಿದರು.

ಮೈಸೂರು, ಜ.9(ಜಿಎ)–ಸಂಸ್ಕೃತಿ ಉಳಿಯಲು ಮಹಿಳೆಯರಿಂದ ಮಾತ್ರ ಸಾಧ್ಯ ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅಭಿಪ್ರಾಯಪಟ್ಟರು.

ಮೈಸೂರು ಮಹಾನಗರ ಪಾಲಿಕೆ ಮತ್ತು ಜ್ಞಾನಜ್ಯೋತಿ ಸಂಸ್ಥೆ ವತಿಯಿಂದ ಬೋಗಾದಿಯ ಕುದುರೆಮಾಳದಲ್ಲಿರುವ ಸಮುದಾಯ ಭವನದ ಮೊದಲನೇ ಮಹಡಿಯಲ್ಲಿ ಆರಂಭಿಸಿರುವ ನಗರ ಜೀವನೋಪಾಯ ಕೇಂದ್ರ(ಪೂರ್ವ) ಉದ್ಘಾಟಿಸಿ ಅವರು ಮಾತನಾಡಿದರು.

ಮೈಸೂರು ಪರಂಪರೆಯಲ್ಲಿ ಮಹಿಳೆಯರ ಪಾತ್ರ ಪ್ರಮುಖವಾಗಿದ್ದು, ಯದುವಂಶ ಉಳಿಯಲು ಮಹಿಳೆಯರೇ ಕಾರಣ. ಟಿಪ್ಪುವಿನ ಕೊನೆ ಯುದ್ಧದ ನಂತರ ಬ್ರಿಟಿಷರು ಒಪ್ಪಂದ ಮಾಡಿಕೊಂಡ ರಾಣಿ ಲಕ್ಷ್ಮಮ್ಮಣಿ ಅವರು ಎಲ್ಲಾ ರೀತಿಯ ಒತ್ತಡ, ಸಮಸ್ಯೆಗಳನ್ನು ನಿಭಾಯಿಸಿ, ಮೈಸೂರಿನ ಅಭಿವೃದ್ದಿಗೆ ಅಡಿಪಾಯ ಹಾಕಿದರು. ನಂತರ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರಿಗೂ ಅವರೇ ಸ್ಪೂರ್ತಿಯಾಗಿ ಜನರ ಪರ ಕೆಲಸ ಮಾಡುವಂತೆ ಮನವರಿಕೆ ಮಾಡಿದರು ಎಂದು ಸ್ಮರಿಸಿದರು.

ರಾಣಿ ಲಕ್ಷ್ಮಮ್ಮಣಿ ಅವರು ಸಂಸ್ಕೃತಿ ಉಳಿಸುವ ಜೊತೆಗೆ ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಂಡು ಬಂದರು. ಅದಕ್ಕೆ ಪ್ರಮುಖ ಉದಾಹರಣೆ ಸಿಡುಬು ಸಾಂಕ್ರಾಮಿಕ ರೋಗ ಆರಂಭವಾದಾಗ ತಾವು ಹಾಗೂ ತಮ್ಮ ಪುತ್ರಿಯರಿಗೆ ಲಸಿಕೆ ಹಾಕಿಸುವ ಮೂಲಕ ಜನರಿಗೆ ಸಂದೇಶ ರವಾನಿಸಿದರು. ಹೀಗೆ ಮಹಿಳೆಯರಿಂದ ಮಾತ್ರ ಸಂಸ್ಕೃತಿ ಉಳಿಸಲು ಸಾಧ್ಯ ಎಂದು ಹಿರಿಯರು ತೋರಿಸಿಕೊಟ್ಟಿದ್ದಾರೆ ಎಂದರು.

ವಿಕಸಿತ ಭಾರತದಲ್ಲಿ ಪ್ರದಾನ ಮಂತ್ರಿ ಹೇಳಿರುವಂತೆ ಭಾರತದ ಆರ್ಥಿಕತೆಗೆ ಮಹಿಳೆಯರ ಸಾಥ್ ಬಹಳ ಮುಖ್ಯ ಎಂದು ತಿಳಿಸಿದ್ದಾರೆ. ಕೌಶಲ್ಯ ವೃದ್ದಿಸಿಕೊಳ್ಳಿ, ಮಹಿಳೆಯರಿಗೆ ನಾಯಕತ್ವದ ಕೊರತೆ ಇದೆ. ಅದನ್ನು ರೂಢಿಸಿಕೊಳ್ಳಿ ಎಂದು ಸಲಹೆ ನೀಡಿದರು.

ಭಾರತೀಯ ಸಂಸ್ಕೃತಿಯನ್ನು ಉಳಿಸುವ ನಿಟ್ಟಿನಲ್ಲಿ ನಾಯಕತ್ವ ವೃದ್ದಿಸಿಕೊಳ್ಳುವುದು ಬಹಳ ಮುಖ್ಯ. ರಾಜಕೀಯದಲ್ಲಿ ಮಹಿಳೆಯರಿಗೆ ಶೇ.33ರಷ್ಟು ಮೀಸಲಿಡಲಾಗುತ್ತಿದೆ. ಈ ನಿಟ್ಟಿನಲ್ಲಿ ನೀವು ನಾಯಕತ್ವ ಅಳವಡಿಸಿಕೊಳ್ಳಿ ಎಂದು ಸಲಹೆ ನೀಡಿದರು.

ಇಂದು ಇಲ್ಲಿ ನಿರ್ಮಿಸಿರುವ ಕೇಂದ್ರಕ್ಕೆ ಮೂಲ ಸೌಕರ್ಯ ನೀಡುತ್ತೇವೆ.ಅದರ ಬಗ್ಗೆ ನಿಮಗೆ ಚಿಂತೆ ಬೇಡ ವಿಕಸಿತ ಭಾರತದ ಮೂಲಕ ಸೌಲಭ್ಯಗಳನ್ನು ಜನರು ಉತ್ತಮವಾಗಿ ಸದ್ಬಳಕೆ ಮಾಡಿಕೊಳ್ಳಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಮಾಜಿ ಮೇಯರ್ ಭಾಗ್ಯವತಿ, ವಲಯ ಆಯುಕ್ತ ಮಹೇಶ್, ಹೆಚ್ಚುವರಿ ಆಯುಕ್ತೆ ಕುಸುಮರಾಣಿ, ಜ್ಞಾನಜ್ಯೋತಿ ಸಂಸ್ಥೆ ಕಾರ್ಯದರ್ಶಿ ಎಂ.ಎಸ್.ಹೇಮಾವತಿ ಉಪಸ್ಥಿತರಿದ್ದರು.

ಪ್ರತಿಯೊಬ್ಬರೂ ಆಹಾರದ ಮಹತ್ವ ತಿಳಿದುಕೊಳ್ಳಬೇಕು

ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ

ಮಂಡ್ಯ, ಜ.9– ಪ್ರತಿಯೊಬ್ಬರೂ ಆಹಾರದ ಮಹತ್ವ ತಿಳಿದುಕೊಳ್ಳಬೇಕು. ಕಳೆದ 40 ವರ್ಷಗಳ ಹಿಂದೆ ಭಾರತ ಆಹಾರದ ಕೊರತೆ ಎದುರಿಸುತ್ತಿತ್ತು. ಆದರೆ ಇಂದು ಬೇರೆ ದೇಶಗಳಿಗೆ ಭಾರತ ಆಹಾರ ರಫ್ತು ಮಾಡುತ್ತಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು.

ಶುಕ್ರವಾರ ಜಿಲ್ಲಾ ಗ್ರಾಹಕ ಮಾಹಿತಿ ಕೇಂದ್ರ, ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆ, ಕಾನೂನು ಮಾಪನ ಶಾಸ್ತ್ರ ಇಲಾಖೆ, ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ, ಕರ್ನಾಟಕ ರಾಜ್ಯ ಆಹಾರ ಆಯೋಗ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ವಕೀಲರ ಸಂಘ(ರಿ) ವಿವಿಧ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ಡಿಜಿಟಲ್ ನ್ಯಾಯದ ಮೂಲಕ ಪರಿಣಾಮಕಾರಿ ಹಾಗೂ ತ್ವರಿತ ವಿಲೇವಾರಿ ಎಂಬ ಘೋಷವಾಕ್ಯದಡಿ ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಆಯೋಜಿಸಿದ್ದ ರಾಷ್ಟ್ರೀಯ ಗ್ರಾಹಕರ ದಿನಾಚರಣೆ–2025 ಆಹಾರ ಸುರಕ್ಷತೆ ಮತ್ತು ಕಾನೂನು ಅರಿವು ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.



ಕಾರ್ಯಕ್ರಮವನ್ನು ಸಚಿವ ಎನ್.ಚಲುವರಾಯಸ್ವಾಮಿ ಉದ್ಘಾಟಿಸಿದರು.

ಕಾನೂನು ಬಗ್ಗೆ ಎಲ್ಲರೂ ಜಾಗೃತರಾಗಿ. ರಾಷ್ಟ್ರೀಯ ಗ್ರಾಹಕರ ದಿನಾಚರಣೆ ಬಗ್ಗೆ ಪ್ರತಿಯೊಬ್ಬರೂ ತಿಳಿದುಕೊಳ್ಳಬೇಕು. ಮನಮೋಹನ್ ಸಿಂಗ್ ಪ್ರಧಾನಿಯಾದ ವೇಳೆ ಭಾರತದ ಪ್ರತಿಯೊಬ್ಬ ಪ್ರಜೆಗೂ ಆಹಾರ ಭದ್ರತೆ ನೀಡುವ ಸಲುವಾಗಿ ಆಹಾರ ಆಯೋಗವನ್ನು ಜಾರಿಗೆ ತಂದರು. ಎಲ್ಲಾ ಬಡ ಜನರಿಗೆ ಕೈಗೆಟುಕುವ ದರದಲ್ಲಿ ಗುಣಮಟ್ಟದ ಆಹಾರ ಸಿಗಬೇಕು ಎಂಬ ನಿಟ್ಟಿನಲ್ಲಿ ಆಹಾರ ಅಧಿ ನಿಯಮದ ಕಾಯ್ದೆ ಜಾರಿಗೊಳಿಸಲಾಯಿತು. ಅಲ್ಲದೇ ಪ್ರತಿ ವ್ಯಕ್ತಿಗೆ 5 ಕೆಜಿ ಅಕ್ಕಿ ವಿತರಿಸುವ ಯೋಜನೆ ಜಾರಿಗೊಳಿಸಿದರು ಎಂದರು.

ಸಿಎಂ ಸಿದ್ದರಾಮಯ್ಯ ಅವರು ರಾಜ್ಯದ ಜನರನ್ನು ಹಸಿವು ಮುಕ್ತರಾಗಿಸಲು ತಲಾ 10 ಕೆಜಿ ಅಕ್ಕಿ ವಿತರಿಸಿದರು. ಅಕ್ಕಿ ನೀಡುವುದರಿಂದ ಅಕ್ರಮ ಸಂಭವಿಸಬಹುದು ಎಂಬ ಉದ್ದೇಶದಿಂದ ರಾಗಿ, ಗೋಧಿ, ಎಣ್ಣೆ ಕೊಡಲು ತೀರ್ಮಾನಿಸಲಾಗಿದೆ ಎಂದರು.

ಇಂದಿಗೂ ಆಹಾರ ಸಿಗದಿರುವ ಜನರಿದ್ದಾರೆ. ಕೆಲವರು ಆಹಾರದ ಉಪಯೋಗ ಪಡೆದುಕೊಳ್ಳದೆ ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ. ಗ್ರಾಹಕರಿಗೆ ಸಂಕಷ್ಟ ಬರದಂತೆ ನೋಡಿಕೊಳ್ಳುವುದು ಸರ್ಕಾರದ ಜವಾಬ್ದಾರಿ. ಸಾರ್ವಜನಿಕರಿಗೆ ನ್ಯಾಯ ಸಿಗಬೇಕು ಎನ್ನುವ ನಿಟ್ಟಿನಲ್ಲಿ ಆಹಾರ ಆಯೋಗ ಕ್ರಮ ವಹಿಸಲಾಗುತ್ತಿದೆ. ಅದರ ಕೆಳಗೆ ಜಿಲ್ಲಾಡಳಿತ ಇದರ ಜವಾಬ್ದಾರಿ ನಿರ್ವಹಿಸಬೇಕು ಎಂದರು.

ರಾಜ್ಯ ಆಹಾರ ಆಯೋಗದ ಅಧ್ಯಕ್ಷ ಡಾ.ಹೆಚ್.ಕೃಷ್ಣ ಮಾತನಾಡಿ, ಗ್ರಾಹಕರು ಮೋಸ ಹೋಗದಂತೆ ಅರಿವು ಮೂಡಿಸುವ ಕಾರ್ಯ ಮಾಡಲಾಗುತ್ತಿದೆ. ಗ್ರಾಹಕರಿಗೆ ಗ್ರಾಹಕ ಕಾನೂನಿನ ಕುರಿತು ಅರಿವು ಇರಬೇಕು. ಅನ್ಯಾಯಕ್ಕೆ ಒಳಗಾದ ಗ್ರಾಹಕರಿಗೆ ನ್ಯಾಯ ಕೊಡಿಸುವ ಕೆಲಸವಾಗುತ್ತಿದೆ. ಸಾರ್ವಜನಿಕರಿಗೆ ಆಹಾರ ಭದ್ರತೆ ಒದಗಿಸುವ ಕೆಲಸ ಸರ್ಕಾರದ ಕರ್ತವ್ಯ ಎಂದರು.

ಈ ವೇಳೆ ಡಿಸಿ ಡಾ.ಕುಮಾರ್, ಜಿಲ್ಲಾ ಹಿರಿಯ ಸಿವಿಲ್ ನ್ಯಾಯಾಧೀಶ ಆನಂದ್, ಎಸ್ಪಿ ಶೋಭಾರಾಣಿ, ಮೈಶುಗರ್ ಅಧ್ಯಕ್ಷ ಸಿ.ಡಿ.ಗಂಗಾಧರ್, ವಕೀಲರ ಸಂಘದ ಅಧ್ಯಕ್ಷ ಟಿ.ಎಸ್.ಸತ್ಯಾನಂದ, ಜಿಲ್ಲಾ ಗ್ರಾಹಕ ವ್ಯಾಜ್ಯಗಳ ಸಂಘದ ಅಧ್ಯಕ್ಷ ವಂಸತ್ ಕುಮಾರ್, ನ್ಯಾಷನಲ್ ಲಾ ಕಾಲೇಜಿನ ತರಬೇತಿ ಸಂಯೋಜಕ ಕುಮಾರಸ್ವಾಮಿ, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಜಂಟಿ ನಿರ್ದೇಶಕ ಪ್ರತೀಕ್ ಹೆಗ್ಡೆ, ಡಾ.ಶಶಿಧರ್ ಸೇರಿದಂತೆ ಇನ್ನಿತರರಿದ್ದರು.

ಮಂಡ್ಯಕ್ಕೆ ಹೈಟೆಕ್ ಸ್ಪರ್ಶ: ತಲೆ ಎತ್ತಲಿದೆ ಕೆಂಪೇಗೌಡ ಪ್ರತಿಮೆ

ಮಂಡ್ಯ: ನಗರದ ರಸ್ತೆಗಳ ಅಭಿವೃದ್ಧಿ, ಡಿವೈಡರ್‌ಗಳು, ಸ್ಕೈ ವಾಕರ್, ಫುಟ್‌ಪಾತ್ ಮತ್ತು ರಸ್ತೆಗಳ ನಡುವೆ ಕಂಬಿಗಳ ಅಳವಡಿಕೆ, ಕೆಲ ರಸ್ತೆಗಳ ಅಗಲೀಕರಣ ಸೇರಿದಂತೆ ಮಂಡ್ಯ ನಗರಕ್ಕೆ ಹೈಟೆಕ್ ಸ್ಪರ್ಶ ನೀಡಿರುವ ಹಿನ್ನೆಲೆಯಲ್ಲಿ ಮಂಡ್ಯದಲ್ಲಿ ನಾಡಪ್ರಭು ಕೆಂಪೇಗೌಡರ ಬೃಹತ್ ಪ್ರತಿಮೆ ಅನಾವರಣಕ್ಕೆ ಸಿದ್ಧತೆ ಕೈಗೊಳ್ಳಲಾಗಿದೆ.

ನಗರದ ಸಂಜಯ ವೃತ್ತದಲ್ಲಿ 26 ಅಡಿ ಎತ್ತರದ ಕೆಂಪೇಗೌಡರ ಪ್ರತಿಮೆ ನಿರ್ಮಾಣಕ್ಕೆ ಶಾಸಕ ರವಿಕುಮಾರ್ ಗಣಿಗ ನಿರ್ಧರಿಸಿದ್ದು, ಈ ಹಿನ್ನೆಲೆಯಲ್ಲಿ ಖ್ಯಾತ ಶಿಲ್ಪಿ ಅರುಣ್ ಯೋಗಿರಾಜ್ ಜೊತೆ ಶಾಸಕ ಗಣಿಗ ರವಿಕುಮಾರ್ ಸ್ಥಳ ಪರಿಶೀಲಿಸಿದರು.

ಕೆಂಪೇಗೌಡರ ಪ್ರತಿಮೆ ಕೆತ್ತನೆ ಜವಾಬ್ದಾರಿ ಶಿಲ್ಪಿ ಅರುಣ್ ಯೋಗಿರಾಜ್ ಹೆಗಲಿಗೆ ನೀಡಿದ್ದು, 2 ಕೋಟಿ ವೆಚ್ಚದಲ್ಲಿ ಕೆಂಪೇಗೌಡರ ಬೃಹತ್ ಪ್ರತಿಮೆ ನಿರ್ಮಾಣಗೊಳ್ಳಲಿದೆ.

ಶಾಸಕ ರವಿಕುಮಾರ್ ಗಣಿಗ ಮಾತನಾಡಿ, ಕೆಂಪೇಗೌಡರ ಪ್ರತಿಮೆಯಿಂದ ಮಂಡ್ಯಕ್ಕೆ ಹೊಸ ರೂಪ ಬರುತ್ತದೆ. ಹೊಸ ಮಂಡ್ಯ ಕಟ್ಟಿಕೊಡುವ ಮಾತು ಕೊಟ್ಟಿದ್ದೆ. ಅದೇ ರೀತಿ ಹೊಸ ಸ್ಪರ್ಶ ಕೊಡುತ್ತಿದ್ದೇನೆ. ಮಂಡ್ಯ ನಗರ ಗುಂಡಿಮುಕ್ತ ನಗರ ಮಾಡಿದ್ದೇನೆ ಎಂದರು.

ಶಿಲ್ಪಿ ಅರುಣ್ ಯೋಗಿರಾಜ್ ಮಾತನಾಡಿ, ನಾಡಪ್ರಭು ಕೆಂಪೇಗೌಡರ ಪ್ರತಿಮೆ ಮಾಡುವ ಅವಕಾಶ ಸಿಕ್ಕಿದೆ. ನಮ್ಮ ತಾಯೂರು ಮಂಡ್ಯ ಅದಕ್ಕೆ ವಿಶೇಷ ಅಭಿಮಾನವಿದೆ. ಅಚ್ಚುಕಟ್ಟಾಗಿ, ಜವಾಬ್ದಾರಿಯುತವಾಗಿ ಕೆಲಸ ಮಾಡುತ್ತೇನೆ. ಮಹಾನ್ ನಾಯಕರಿಗೆ ಇತಿಹಾಸ ಇದೆ. ಆ ಇತಿಹಾಸ ತಿಳಿದು ನಾಯಕರ ಪ್ರತಿಮೆ ಕೆತ್ತನೆ ಮಾಡುತ್ತೇನೆ ಎಂದರು.

ಇದೇ ವೇಳೆ ಮುಡಾ ಅಧ್ಯಕ್ಷ ಬಿ.ಪಿ.ಪ್ರಕಾಶ್, ಮಾಜಿ ನಗರಸಭೆ ಅಧ್ಯಕ್ಷ ಮಂಜು, ಮುಡಾ ಮಾಜಿ ನಿರ್ದೇಶಕ ಕೃಷ್ಣ ಸೇರಿ ಹಲವರಿದ್ದರು.



ಕೆಂಪೇಗೌಡರ ಪ್ರತಿಮೆ ಅನಾವರಣ ಹಿನ್ನಲೆ ರವಿಕುಮಾರ್, ಸಂಜಯ ವೃತ್ತ ಪರಿಶೀಲಿಸಿದರು.

ಇಂದು ವಿದ್ಯುತ್ ವ್ಯತ್ಯಯ

ನಾಗಮಂಗಲ: ಚೀಣ್ಯ ಎನ್‌ಜೆವೈ 11 ಕೆವಿ ಮಾರ್ಗಕ್ಕೆ ತಗಲುವ ಮರದ ರೆಂಬೆ ಮತ್ತು ಕೊಂಬೆಗಳನ್ನು ಕತ್ತರಿಸುವುದು ಜಂಪ್‌ಗಳನ್ನು ಬಿಗಿಗೊಳಿಸುವಿಕೆ, ಬದಲಾಯಿಸುವುದು, ಬಾಗಿರುವ ಕಂಬಗಳನ್ನು ಸರಿಪಡಿಸುವುದು ಹಾಗೂ ಮಾರ್ಗಗಳ ಇತರೆ ಎಲ್ಲಾ ನಿರ್ವಹಣೆ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಜ.10 ರಂದು ಬೆಳಗ್ಗೆ 10 ರಿಂದ ಸಂಜೆ 5ರವರೆಗೆ ಚೀಣ್ಯ, ಹೊಣಕೆರೆ ಮತ್ತು ಮಣ್ಣಹಳ್ಳಿ ಗ್ರಾಪಂಗಳ ವ್ಯಾಪ್ತಿಯ ಕೆಲವು ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಕೆಂಪಮ್ಮ ನಿಧನ



ಭಾರತೀನಗರ, ಜ.9– ಇಲ್ಲಿಗೆ ಸಮೀಪದ ಅಣ್ಣೂರು ಗ್ರಾಮದ ಕೆಂಪಮ್ಮ (75) ಶುಕ್ರವಾರ ಮಧ್ಯಾಹ್ನ ನಿಧನರಾದರು. ಮೃತರು ಅಣ್ಣೂರು ಎಂಪಿಸಿಎಸ್ ನಿರ್ದೇಶಕ ಯೋಗೇಶ್ ಸೇರಿದಂತೆ ಮೂವರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮದ ರುದ್ರಭೂಮಿಯಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಎಸ್.ಕೆಂಪೇಗೌಡ



ಭಾರತೀನಗರ, ಜ.9– ಇಲ್ಲಿಗೆ ಸಮೀಪದ ಕ್ಯಾತಘಟ್ಟ ಗ್ರಾಮದ ನಿವಾಸಿ ಎಸ್.ಕೆಂಪೇಗೌಡ (84) ಶುಕ್ರವಾರ ಬೆಳಗ್ಗೆ ನಿಧನರಾದರು.

ಮೃತರು ಪತ್ನಿ, ಇಬ್ಬರು ಪುತ್ರರು, ನಾಲ್ವರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸಂಜೆ ಸ್ವಗ್ರಾಮದ ರುದ್ರಭೂಮಿಯಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಎಲ್.ವಿ.ಕಿಶೋರ್



ಕೆ.ಆರ್.ಪೇಟೆ, ಜ.9– ತಾಲೂಕಿನ ಲಕ್ಷ್ಮೀಪುರ ಗ್ರಾಪಂ ಮಾಜಿ ಅಧ್ಯಕ್ಷ ಎಲ್.ವಿ.ಕಿಶೋರ್(53) ನಿಧನರಾದರು. ಮೃತರು ಪತ್ನಿ ಜಲಜಾಕ್ಷಿ, ಇಬ್ಬರು ಪುತ್ರಿಯರು, ತಂದೆ ನಿವೃತ್ತ ಶಿಕ್ಷಕ ಎ.ಹೆಚ್.ವೆಂಕಟೇಶಗೌಡ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶುಕ್ರವಾರ ಸಂಜೆ ಹುಟ್ಟೂರಲ್ಲಿ ನಡೆಯಿತು. ಮೃತರ ನಿಧನಕ್ಕೆ ಸೇರಿದಂತೆ ಗಣ್ಯರು ಸಂತಾಪ ಸೂಚಿಸಿದ್ದಾರೆ.

ಆಕಸ್ಮಿಕ ಬೆಂಕಿ; ಹುಲ್ಲಿನ ಮೆದೆ ಭಸ್ಮ



ಹುಲ್ಲಿನ ಮೆದೆಗೆ ಆಕಸ್ಮಿಕ ಬೆಂಕಿ ಬಿದ್ದಿರುವುದು.

ಕೆ.ಆರ್. ಪೇಟೆ, ಜ.9– ಆಕಸ್ಮಿಕ ಬೆಂಕಿಗೆ ಹುಲ್ಲಿನ ಮೆದೆ ಭಸ್ಮವಾಗಿರುವ ಘಟನೆ ತಾಲೂಕಿನ ಅಕ್ಕಿಹೆಬ್ಬಾಳು ಗ್ರಾಮದಲ್ಲಿ ಶುಕ್ರವಾರ ಸಂಜೆ ನಡೆದಿದೆ.

ಅಕ್ಕಿಹೆಬ್ಬಾಳು ಗ್ರಾಮದ ವಿನಾಯಕ ಬಡಾವಣೆ ನಿವಾಸಿ ಲಕ್ಷ್ಮಿ ಅವರಿಗೆ ಸೇರಿದ ಹುಲ್ಲಿನ ಮೆದೆ ಭಸ್ಮವಾಗಿದ್ದು, ಸುಮಾರು 50 ಸಾವಿರ ರೂ. ನಷ್ಟ ಸಂಭವಿಸಿದೆ ಎಂದು ಅಂದಾಜಿಸಲಾಗಿದೆ. ವಿಷಯ ತಿಳಿದು ಸ್ಥಳಕ್ಕಾಮಿಸಿದ ಕೆ.ಆರ್.ಪೇಟೆ ಅಗ್ನಿಶಾಮಕ ಠಾಣಾಧಿಕಾರಿ ಸೋಮಶೇಖರಗೌಡ, ಸಿಬ್ಬಂದಿಗಳಾದ ಶ್ರೀಕಾಂತ್, ಮೋಹನ್ ಕುಮಾರ್, ಅಶೋಕ್, ಮಾಲತೇಶ್ ನೇತೃತ್ವದ ಅಗ್ನಿಶಾಮಕ ಅಧಿಕಾರಿಗಳ ತಂಡ ಗ್ರಾಮಸ್ಥರ ಸಹಕಾರದೊಂದಿಗೆ ಬೆಂಕಿ ನಂದಿಸಿ ಹೆಚ್ಚಿನ ಅನಾಹುತ ತಪ್ಪಿಸಿದ್ದಾರೆ. ಸಕಾಲಕ್ಕೆ ಆಗಮಿಸಿ ಬೆಂಕಿ ನಂದಿಸಿದ ಅಗ್ನಿಶಾಮಕ ದಳದ ಸಿಬ್ಬಂದಿಗೆ ತಾಲೂಕು ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಲೋಲಾಕ್ಷಿ, ತಾಪಂ ಮಾಜಿ ಸದಸ್ಯೆ ವಿನುತ ಸೇರಿದಂತೆ ಗ್ರಾಮದ ಮುಖಂಡರು ಕೃತಜ್ಞತೆ ಸಲ್ಲಿಸಿದ್ದಾರೆ.

ಶ್ರೀರಂಗಪಟ್ಟಣ: ನಿರಾಶ್ರಿತರಿಗೆ ಹೊದಿಕೆ ವಿತರಣೆ

ಶ್ರೀರಂಗಪಟ್ಟಣ, ಜ.9– ಮೈಸೂರಿನ ಶ್ರೇಷಾದ್ರಿಪುರಂ ಇಂಜಿನಿಯರಿಂಗ್ ಕಾಲೇಜಿನ ಎನ್‌ಎಸ್‌ಎಸ್ ಘಟಕ ಹಾಗೂ ಶ್ರೀರಂಗಪಟ್ಟಣದ ರೋಟರಿ ವತಿಯಿಂದ ಪಟ್ಟಣದಲ್ಲಿ ನಿರಾಶ್ರಿತರಿಗೆ ಹೊದಿಕೆ ವಿತರಿಸಲಾಯಿತು.

ಎನ್‌ಎಸ್‌ಎಸ್ ಅಧಿಕಾರಿ ಡಾ.ರಾಘವೇಂದ್ರ ಮಾತನಾಡಿ, ಬಡವರು ಮತ್ತು ಅಸಹಾಯಕರು ಸೇರಿದಂತೆ ಫುಟ್‌ಪಾತ್ ಹಾಗೂ ಬೀದಿ ಬದಿ ಮಲಗುವವರ ಅನುಕೂಲಕ್ಕಾಗಿ ಹೊದಿಕೆ ವಿತರಿಸಲಾಗಿದೆ ಎಂದರು.

ಸತತ 11 ವರ್ಷಗಳಿಂದ ಚಳಿಗಾಲದಲ್ಲಿ ನಿರಾಶ್ರಿತರಿಗೆ ಹೊದಿಕೆ ವಿತರಿಸಲಾಗಿದ್ದು, ವಾರದಿಂದ 600ಕ್ಕೂ ಹೆಚ್ಚು ಮಂದಿಗೆ ವಿತರಿಸಲಾಗಿದೆ ಎಂದು ತಿಳಿಸಿದರು. ಈ ವೇಳೆ ಶಿಬಿರಾರ್ಥಿಗಳು ಜೊತೆಯಲ್ಲಿದ್ದರು.



ಶ್ರೀರಂಗಪಟ್ಟಣದಲ್ಲಿ ನಿರಾಶ್ರಿತರಿಗೆ ಹೊದಿಕೆ ವಿತರಿಸಲಾಯಿತು.

ಸ್ವಾಮೀಜಿಗೆ ಅಭಿನಂದನೆ



ಪಾಂಡವಪುರ ತಾಲೂಕಿನ ಚಿಕ್ಕಮರಳಿ ಗ್ರಾಮದ ಬಳಿಯ 16 ಕೂಟದ ದೊರೆ ಶ್ರೀಚನ್ನಿಗರಾಯಸ್ವಾಮಿ ದೇವಸ್ಥಾನದ ಪೂಜೆಗೆ ಆಗಮಿಸಿದ ಕನಕಗುರು ಪೀಠದ ಕೆ.ಆರ್.ನಗರ ಶಾಖಾ ಮಠದ ಅರುಣ ಸಿದ್ದೇಶ್ವರಸ್ವಾಮೀಜಿ ಅವರನ್ನು ಗ್ರಾಮಸ್ಥರು ಅಭಿನಂದಿಸಿದರು. ಗ್ರಾಮದ ಯಜಮಾನರಾದ ಪಿ.ರಮೇಶ್, ಸಿ.ಸ್ವಾಮಿಗೌಡ, ಪೂಜಾರಿ ಚನ್ನಪ್ಪ, ತಾಪಂ ಮಾಜಿ ಸದಸ್ಯೆ ಮಂಗಳ, ಮುಖಂಡರಾದ ಪಿ.ಕೃಷ್ಣ, ಸಿ.ಕೆ.ಚಿಕ್ಕೇಗೌಡ, ನವೀನ್‌ಕುಮಾರ್, ಚನ್ನಮಾದೇಗೌಡ, ನಾರಾಯಣ, ರಾಜಶೇಖರ್, ಪೂಜಾರಿಗಳಾದ ಮರಿಚನ್ನಯ್ಯ, ಮಧುಸೂದನ್ ಇತರರಿದ್ದರು.

ಮಾಧ್ಯಮ ಅಕಾಡೆಮಿ ಪ್ರಶಸ್ತಿಗೆ ಕೆ.ಆರ್.ನೀಲಕಂಠ ಆಯ್ಕೆ

ಕೆ.ಆರ್.ಪೇಟೆ: ತಾಲೂಕಿನ ಹಿರಿಯ ಪತ್ರಕರ್ತ ಕೆ.ಆರ್.ನೀಲಕಂಠ ಕರ್ನಾಟಕ ಮಾಧ್ಯಮ ಅಕಾಡೆಮಿ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ನಾಡಿನ ವಿವಿಧ ಪತ್ರಿಕೆಗಳ ತಾಲೂಕು ವರದಿಗಾರರಾಗಿ ಸೇವೆ ಸಲ್ಲಿರುವ ಕೆ.ಆರ್.ನೀಲಕಂಠ ಅವರು ಹೇಮಾವತಿ ಬಯಲು ಪತ್ರಿಕೆ ಸಂಪಾದಕರಾಗಿ ಪತ್ರಿಕೋದ್ಯಮಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಇವರ ಸೇವೆ ಗುರುತಿಸಿರುವ ಕರ್ನಾಟಕ ಮಾಧ್ಯಮ ಅಕಾಡೆಮಿ 2025ನೇ ಸಾಲಿನ ಮಾಧ್ಯಮ ಅಕಾಡೆಮಿ ಪ್ರಶಸ್ತಿಗೆ ಆಯ್ಕೆ ಮಾಡಿದೆ ಎಂದು ಕರ್ನಾಟಕ ಮಾಧ್ಯಮ ಅಕಾಡೆಮಿ ಅಧ್ಯಕ್ಷೆ ಆಯೇಶಾಖಾನಂ ಮತ್ತು ಕಾರ್ಯದರ್ಶಿ ಎಂ.ಸಹನಾ ಅವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕರ್ನಾಟಕ ಮಾಧ್ಯಮ ಅಕಾಡೆಮಿ ಪ್ರಶಸ್ತಿಗೆ ಆಯ್ಕೆಯಾಗಿರುವ ಹಿರಿಯ ವರದಿಗಾರ ಕೆ.ಆರ್.ನೀಲಕಂಠ ಅವರನ್ನು ತಾಲೂಕಿನ ವಿವಿಧ ಪತ್ರಕರ್ತರು ಅಭಿನಂದಿಸಿದ್ದಾರೆ.



ಒಂದನೇ ಪುಟದಿಂದ

ಚಾಮುಂಡಿಬೆಟ್ಟದಲ್ಲಿ 'ಪ್ರಸಾದ' ಕಾಮಗಾರಿ ಆರಂಭ

ಮಾಡಿರುವ ಕಲ್ಲುಗಳನ್ನು ಅಳವಡಿಸಲಾಗುವುದು. ಚಾಮುಂಡಿಬೆಟ್ಟದ ಪಾರಂಪರಿಕ ಶೈಲಿಗೆ ಯಾವುದೇ ರೀತಿಯಲ್ಲೂ ಧಕ್ಕೆಯಾಗದಂತೆ ಸಾಲು ಮಂಟಪ ನಿರ್ಮಾಣ ಮಾಡಲಾಗುತ್ತಿದೆ. ಪ್ರಸಾದ ಯೋಜನೆ ಕೈಗೊಳ್ಳುತ್ತಿರುವ ಕಾಮಗಾರಿ ಬಗ್ಗೆ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದ ಗುತ್ತಿಗೆದಾರ ಸುಜಯ್ ಕುಮಾರ್ ಶೆಟ್ಟಿ ಅವರು, ಚಾಮುಂಡೇಶ್ವರಿ ದೇವಸ್ಥಾನದ ಪಕ್ಕದಲ್ಲಿ ವಿವಿಧೋದ್ದೇಶಿತ ವೇದಿಕೆ ಹಾಗೂ ಭಕ್ತರು ಸರದಿ ಸಾಲಿನಲ್ಲಿ ದೇವಸ್ಥಾನ ಪ್ರವೇಶಿಸಲು ಸಾಲು ಮಂಟಪ ನಿರ್ಮಾಣ ಮಾಡಲಾಗುತ್ತಿದೆ. ದೇವಸ್ಥಾನದ ಹಿಂಭಾಗದ ಮೆಟ್ಟಿಲು ಬಳಿ ಇದನ್ನು ನಿರ್ಮಿಸಲಾಗುವುದು ಎಂದು ತಿಳಿಸಿದರು.

ಅಲ್ಲದೆ ಚಾಮುಂಡಿಬೆಟ್ಟದ ಪ್ರವೇಶ ದ್ವಾರದ ಬಳಿ ಚಪ್ಪಲಿ ಸ್ಟ್ಯಾಂಡ್, ಕ್ಲಾಕ್ ರೂಂ ಸಹ ನಿರ್ಮಿಸಲಾಗುವುದು. ಮಹಿಷಾಸುರ ಪ್ರತಿಮೆ ಬಳಿ ದೇವಸ್ಥಾನಕ್ಕೆ ವಿಶೇಷ ದರ್ಶನ ಪಡೆಯುವ ಟಿಕೆಟ್ ವಿತರಣೆ ಕೇಂದ್ರ ಹಾಗೂ ಮಾಹಿತಿ ಕೇಂದ್ರವಿರುವ ಪ್ಲಾಜಾ ನಿರ್ಮಾಣ ಮಾಡಲಾಗುವುದು ಎಂದರು.

ಆರರಿಂದ ಏಳು ತಿಂಗಳಲ್ಲಿ ಪೂರ್ಣ: ಯಾವುದೇ ತೊಂದರೆ ಎದುರಾಗದಿದ್ದರೆ ಇನ್ನು ಆರರಿಂದ ಏಳು ತಿಂಗಳಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸುವುದಾಗಿ ತಿಳಿಸಿದರು.

ಚಾಮುಂಡಿಬೆಟ್ಟದ ನಂದಿಗೆ ಹೋಗುವ ಮಾರ್ಗದ ವೃತ್ತದಲ್ಲಿರುವ ವ್ಯೂ ಪಾಯಿಂಟ್ ಅನ್ನು ವಿಶಾಲವಾಗಿ ನಿರ್ಮಾಣ ಮಾಡಲಾಗುವುದು. ಈಗಿರುವ ಪಾರ್ಕಿಂಗ್ ಸ್ಥಳವನ್ನು ನವೀಕರಣ ಮಾಡಲಾಗುವುದು. ಈ ಎಲ್ಲಾ ಕಾಮಗಾರಿ ಮಾಡಲು 35 ಕೋಟಿ ರೂಪಾಯಿಗೆ ಟೆಂಡರ್ ನೀಡಲಾಗಿದೆ. ಆದರೆ ನಂದಿ ಪ್ರತಿಮೆ ಬಳಿ ಕೈಗೊಳ್ಳುವ ಕಾಮಗಾರಿಯ ಟೆಂಡರ್ ನನಗೆ ನೀಡಿಲ್ಲ ಎಂದು ಸುಜಯ್ ಕುಮಾರ್ ಶೆಟ್ಟಿ ಸ್ಪಷ್ಟಪಡಿಸಿದರು. ಪ್ರವಾಸೋದ್ಯಮ ಇಲಾಖೆಯ ಅಡಿಯಲ್ಲಿ ಕಾರ್ಯ ನಿರ್ವಹಿಸುವ ಕರ್ನಾಟಕ ಪ್ರವಾಸೋದ್ಯಮ ಮೂಲ ಸೌಕರ್ಯ ಲಿಮಿಟೆಡ್ (ಕೆಟಿಐಎಲ್) ಈ ಯೋಜನೆ ಅನುಷ್ಠಾನ ಮಾಡುತ್ತಿದೆ. ಒಟ್ಟು 46 ಕೋಟಿ ವೆಚ್ಚದಲ್ಲಿ ಕೈಗೆತ್ತಿಕೊಂಡಿರುವ ಈ ಯೋಜನೆಗೆ ಕೇಂದ್ರ ಸರ್ಕಾರ 30 ಕೋಟಿ ರೂಪಾಯಿ ನೀಡಿದರೆ, ರಾಜ್ಯ ಸರ್ಕಾರ 16 ಕೋಟಿ ರೂಪಾಯಿ ನೀಡುತ್ತಿದೆ

ಕರ್ನಾಟಕ ಪ್ರವಾಸೋದ್ಯಮ ಇಲಾಖೆಯ ಕಾರ್ಯನಿರ್ವಾಹಕ ಇಂಜಿನಿಯರ್ ಪುರುಷೋತ್ತಮ್ ಪ್ರಸಾದ ಯೋಜನೆಯಲ್ಲಿ ನಡೆಯುವ ಕಾಮಗಾರಿ ಅನುಷ್ಠಾನದ ಉಸ್ತುವಾರಿ ವಹಿಸಿದ್ದಾರೆ. ಅಲ್ಲದೆ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ ಪಂಡಿತ್ ಅಥಾನಿ ಅವರು ಸ್ಥಳಿಯ ಕಾಮಗಾರಿಯ ಮೇಲ್ವಿಚಾರಣೆ ನಡೆಸಲಿದ್ದಾರೆ.

ಅಗತ್ಯ ಎಚ್ಚರಿಕಾ ಕ್ರಮ: ಕಾಮಗಾರಿಯಿಂದ ಭಕ್ತರಿಗೆ ಯಾವುದೇ ರೀತಿಯಲ್ಲೂ ತೊಂದರೆ ಆಗದಂತೆ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳಲಾಗಿದೆ. ದೇವಸ್ಥಾನ ಮುಚ್ಚಿದ ಸಂದರ್ಭದಲ್ಲಿ ರಾತ್ರಿ ವೇಳೆ ಹೆಚ್ಚಿನ ಕೆಲಸ ಮಾಡಿಕೊಳ್ಳಲು ನಿರ್ಧರಿಸಲಾಗಿದೆ. ಆದರೆ ಅನಿವಾರ್ಯವಾಗಿ ಕೆಲವು ಕಾಮಗಾರಿಯನ್ನು ಹಗಲಿನ ವೇಳೆ ಮಾಡಲು ತೀರ್ಮಾನಿಸಲಾಗಿದೆ.

ಚಾಮುಂಡೇಶ್ವರಿ ದೇವಸ್ಥಾನದ ಗೋಪುರ ಮರೆಯಾಗುವ ಆತಂಕ

ಚಾಮುಂಡಿಬೆಟ್ಟದ ಶ್ರೀ ಚಾಮುಂಡೇಶ್ವರಿ ದೇವಸ್ಥಾನದ ಗೋಪುರ ಮೈಸೂರು ನಗರಕ್ಕೆ ಮುಕುಟ ಮಣಿ. ಮೈಸೂರು ನಗರದ ಯಾವ ಭಾಗದಲ್ಲಿ ನಿಂತು ಚಾಮುಂಡಿಬೆಟ್ಟದತ್ತ ದೃಷ್ಟಿ ಹಾಯಿಸಿದರೂ ಗೋಪುರ ದರ್ಶನವಾಗುತ್ತದೆ. ಮೈಸೂರಿಗರು ಗೋಪುರ ದರ್ಶನದೊಂದಿಗೆ ಪುರದೇವತೆ ತಾಯಿ ಚಾಮುಂಡೇಶ್ವರಿಗೆ ಕೈ ಮುಗಿದು, ವಂದಿಸುತ್ತಾರೆ.



ಆದರೆ, ಈಗ ಚಾಮುಂಡೇಶ್ವರಿ ದೇವಸ್ಥಾನದ ಬಲ ಭಾಗದಲ್ಲಿ ನಿರ್ಮಾಣವಾಗುತ್ತಿರುವ ವಿವಿಧೋದ್ದೇಶ ವೇದಿಕೆ (ಮಲ್ಟಿ ಪರ್ಪಸ್ ಸ್ಟೇಜ್) ಯಿಂದ ಗೋಪುರ ಮರೆಯಾಗಬಹುದೇ ಎಂಬ ಆತಂಕ ಎದುರಾಗಿದೆ.

ಗುತ್ತಿಗೆದಾರ ಸುಜಯ್ ಕುಮಾರ್ ಶೆಟ್ಟಿ ಪ್ರಕಾರ ಸುಮಾರು 10 ರಿಂದ 15 ಅಡಿ ಎತ್ತರದ ವೇದಿಕೆ ನಿರ್ಮಾಣವಾಗಲಿದೆ. ಆದರೆ ಮೂಲಗಳ ಪ್ರಕಾರ ಅದರ ಎತ್ತರ 20 ಅಡಿಗೂ ಹೆಚ್ಚು ಎನ್ನಲಾಗುತ್ತಿದೆ. ಇದರಿಂದ ಗೋಪುರದ ಸ್ವಲ್ಪ ಭಾಗ ಮರೆಯಾಗಬಹುದೇ ಎಂಬ ಆತಂಕ ಮನೆ ಮಾಡಿದೆ.

ಹಾಗಾಗಿಯೇ ಚಾಮುಂಡಿಬೆಟ್ಟದಲ್ಲಿ ಯಾವುದೇ ಅಭಿವೃದ್ಧಿ ಕಾಮಗಾರಿ ಮಾಡಬಾರದೆಂದು ಆಸ್ತಿಕ ಮಹಾಶಯರು ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ಈ ಮಧ್ಯೆ ಕಳೆದ ವಾರ ಮೈಸೂರಿನ ಕೆಲವು ಸಂಘ–ಸಂಸ್ಥೆಯವರು ಪ್ರತಿಭಟನೆ ಸಹ ನಡೆಸಿದ್ದರು. ಚಾಮುಂಡಿಬೆಟ್ಟದ ಮೂಲ ದೇವಾಲಯವನ್ನು ಹೊಯ್ಸಳರ ಕಾಲದಲ್ಲಿ ನಿರ್ಮಿಸಲಾಗಿದೆ. ಆದರೆ ಗೋಪುರವನ್ನು 17 ನೇ ಶತಮಾನದಲ್ಲಿ ವಿಜಯನಗರ ಅರಸರು ನಿರ್ಮಾಣ ಮಾಡಿದ್ದಾರೆ ಎನ್ನಲಾಗಿದೆ. 19 ನೇ ಶತಮಾನದಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರಿಂದ ಗೋಪುರ ನವೀಕರಿಸಲ್ಪಟ್ಟಿದೆ ಎಂಬ ಅಧಿಕೃತ ಮಾಹಿತಿ ಇದೆ. ಏಳು ಅಂತಸ್ತುಗಳಿರುವ ಗೋಪುರವನ್ನು ದ್ರಾವೀಡ ಶೈಲಿಯಲ್ಲಿ ನಿರ್ಮಿಸಲಾಗಿದೆ. ಈ ಭವ್ಯ ಗೋಪುರವು ಬಿಳಿ ಹಾಗೂ ಚಿನ್ನದ ಬಣ್ಣದ ಚಿಕ್ಕ ದೇವಿಯ ವಿಗ್ರಹಗಳಿಂದ ಅಲಂಕರಿಸಲ್ಪಟ್ಟಿದೆ.

ವಿಹರಿಸುತ್ತಿದ್ದ ತಾಯಿ ಹುಲಿ ಸೆರೆ

ಈ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಡಿಸಿಎಫ್ ಶ್ರೀಪತಿ ಮಾತನಾಡಿ, ಇಂದು ಬೆಳಗ್ಗೆ ಬೋನಿಗೆ ಹುಲಿ ಬಿದ್ದಿದೆ ಎಂದು ಸ್ಥಳೀಯರು ಕರೆ ಮಾಡಿ ತಿಳಿಸಿದರು. ನಮ್ಮ ಸಿಬ್ಬಂದಿ ತಕ್ಷಣ ಬಂದು, ಎಚ್ಚರ ವಹಿಸಿ, ತುಮಕೂರು ಕೇಜ್‌ನಿಂದ ಫೈಬರ್ ಕೇಜ್‌ಗೆ ಸ್ಥಳಾಂತ ರಿಸಿದ್ದೇವೆ. ಇದು ನಂಜೇದೇವನಪುರ ಗ್ರಾಮದಲ್ಲಿ ಈ ಹಿಂದೆ ನಾಲ್ಕು ಮರಿಗಳೊಂದಿಗೆ ಕಾಣಿಸಿಕೊಂಡಿದ್ದ ತಾಯಿ ಹುಲಿ ಎಂಬುದು ಖಾತರಿಯಾಗಿದೆ ಎಂದರು.

ಮರಿ ಹುಲಿಗಳ ಸೆರೆಗೆ ಸಿದ್ಧತೆ: ತಾಯಿ ಹುಲಿ ಸೆರೆ ಸಿಕ್ಕ ಬೆನ್ನಲ್ಲೇ ನಾಲ್ಕು ಮರಿ ಹುಲಿಗಳ ಸೆರೆಗೆ ಅರಣ್ಯ ಇಲಾಖೆ ಸಿದ್ಧತೆ ಕೈಗೊಂಡಿದ್ದು, ಇದಕ್ಕೂ ಇಲಾಖಾ ಅನುಮತಿ ಪಡೆಯಲಾಗಿದೆ ಎಂದು ಡಿಸಿಎಫ್ ಶ್ರೀಪತಿ ತಿಳಿಸಿದರು. ತಾಯಿ ಹುಲಿ ಸೆರೆಸಿಕ್ಕ ಸ್ಥಳದಲ್ಲೇ ಬೋನ್ ಇಟ್ಟು ಮರಿ ಹುಲಿಗಳಿಗೆ ಕಾಯಲಾಗುತ್ತಿದೆ. ಇದೀಗ ಸೆರೆ ಹಿಡಿದಿರುವ ತಾಯಿ ಹುಲಿಯ ಆರೋಗ್ಯದ ಬಗ್ಗೆ ಕೂಡ ನಿಗಾ ವಹಿಸಲಾಗಿದೆ ಎಂದರು.

> "ಗಂಡು ಹುಲಿ ಬಂದಿದ್ದ ವೇಳೆ ಹೆಣ್ಣು ಹುಲಿ ಸ್ಥಳ ಖಾಲಿ ಮಾಡಿತ್ತು. ಆ ಹುಲಿ ಹಿಡಿದ ನಂತರ ಮತ್ತೇ ಈ ಹುಲಿ ಕಾಣಿಸಿದೆ. ಮರಿ ಹುಲಿಗಳ ಹಿಡಿಯಲು ಕೂಡ ನಾವು ಪ್ರಯತ್ನ ಮಾಡುತ್ತಿದ್ದು, ಶೀಘ್ರವೇ ಎಲ್ಲಾ ಹುಲಿಗಳನ್ನು ಸೆರೆ ಹಿಡಿಯಲಾಗುವುದು. - **ಶ್ರೀಪತಿ,** ಡಿಸಿಎಫ್.

ಹುಲಿ ನೋಡಲು ಮುಗಿಬಿದ್ದ ಜನ: ನಂಜೇದೇವನಪುರ ಗ್ರಾಮದಲ್ಲಿ ಹುಲಿ ಬೋನಿಗೆ ಬಿದ್ದ ವಿಷಯ ತಿಳಿದು ಸುತ್ತಮುತ್ತಲ ಗ್ರಾಮಗಳ ಜನರು ನೂರಾರು ಸಂಖ್ಯೆಯಲ್ಲಿ ಭೇಟಿ ನೀಡಿ ಹುಲಿ ನೋಡಲು ಮುಗಿಬಿದ್ದರು.

ಒಕ್ಕಲಿಗ ಸಮಾಜದವರು ಭೂಮಿ ಮಾರಿ ಮದುವೆ ಮಾಡಬೇಡಿ; ಸರಳವಾಗಿ ಮಾಡಿ

ಶಾಸಕ ಜಿ.ಟಿ.ದೇವೇಗೌಡ ಕಿವಿಮಾತು

ಬೆಂಗಳೂರು, ಜ.9– ಒಕ್ಕಲಿಗ ಸಮಾಜದವರು ಭೂಮಿ ಮಾರಾಟ ಮಾಡಿ ಅದ್ದೂರಿಯಾಗಿ ಮದುವೆ ಮಾಡುವ ಬದಲು, ಸರಳ ವಿವಾಹದ ಮೂಲಕ ಇತರರಿಗೆ ಮಾದರಿಯಾಗಬೇಕು ಎಂದು ಶಾಸಕ ಜಿ.ಟಿ.ದೇವೇಗೌಡರು ಕಿವಿಮಾತು ಹೇಳಿದರು.

ಬೆಂಗಳೂರಿನ ಅರಮನೆ ಮೈದಾನದಲ್ಲಿ ಫಸ್ಟ್ ಸರ್ಕಲ್ ಹಮ್ಮಿಕೊಂಡಿರುವ ಉದ್ಯಮಿ ಒಕ್ಕಲಿಗ ಎಕ್ಸ್ ಪೋ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನನ್ನ ಇಬ್ಬರು ಮಕ್ಕಳ ಮದುವೆಯನ್ನು ತಿರುಪತಿಯಲ್ಲಿ ಸರಳವಾಗಿ ಮಾಡಿದೆ. ಇದರಿಂದ ಒಂದಷ್ಟು ಜನ ಸರಳ ವಿವಾಹಕ್ಕೆ ನಿರ್ಧರಿಸಬಹುದು ಎಂಬುದು ನನ್ನ ಆಶಯವಾಗಿತ್ತು ಎಂದರು. ಎಷ್ಟೇ ಅದ್ದೂರಿ ಮದುವೆ ಮಾಡಿದರೂ ಎರಡೂ ಕುಟುಂಬದಲ್ಲಿ ನೆಮ್ಮದಿ ಇರುವುದಿಲ್ಲ. ಎರಡ್ಮೂರು ದಿನದ ಸಂಭ್ರಮಕ್ಕೆ ಜಮೀನು ಕಳೆದುಕೊಂಡು ಸಾಲದ ಸಂಕಷ್ಟಕ್ಕೆ ಸಿಲುಕುತ್ತಾರೆ. ಮದುವೆ ಊಟದಲ್ಲಿ ಮೂರ್‍ನಾಲ್ಕು ಬಗೆಯ ಸಿಹಿಯನ್ನೊಳಗೊಂಡ ಭೂರಿಭೋಜನ ಮಾಡಿಸುತ್ತಾರೆ. ಅದೆಲ್ಲಾ ಪ್ರತಿಷ್ಠೆಗಷ್ಟೇ ಹೊರತು ಯಾರೂ ಸಂಪೂರ್ಣವಾಗಿ ಸವಿಯುವುದಿಲ್ಲ. ಆದ್ದರಿಂದ ರಾಷ್ಟ್ರಕವಿ ಕುವೆಂಪು ಅವರು ಹೇಳಿರುವಂತೆ 'ಮಂತ್ರ ಮಾಂಗಲ್ಯ'ದ ಮೂಲಕ ಸರಳ ವಿವಾಹ ಮಾಡುವುದು ಉತ್ತಮ. ಆ ನಿಟ್ಟಿನಲ್ಲಿ ಫಸ್ಟ್ ಸರ್ಕಲ್ ಒಂದು ಗಂಭೀರ ಪ್ರಯತ್ನ ಮಾಡಬೇಕು ಎಂದು ಸಲಹೆ ನೀಡಿದರು.

ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷರಾಗಿದ್ದ ಭೈರವೈಕ್ಯ ಡಾ.ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರು ಎಲ್ಲಾ ರಾಜ್ಯದಲ್ಲೂ ನೆಲೆಸಿದ್ದ ಒಕ್ಕಲಿಗರನ್ನು ಗುರುತಿಸಿ, ಅವರನ್ನು ಮಠಕ್ಕೆ ಬರುವಂತೆ ಮಾಡಿದರು. ಅದರ ಫಲವಾಗಿ ಇಂದಿಗೂ ಹೊರಗಿನಿಂದ ಸಾಕಷ್ಟು ಭಕ್ತರು ಶ್ರೀಮಠಕ್ಕೆ ಬರುತ್ತಿದ್ದಾರೆ. ಶ್ರೀಗಳು ಮಠದ ವತಿಯಿಂದ ಶಿಕ್ಷಣ ಸಂಸ್ಥೆಗಳು ಮತ್ತು ಆರೋಗ್ಯ ಸಂಸ್ಥೆಗಳನ್ನು ನಿರ್ಮಿಸಿದರು. ಅವುಗಳನ್ನು ಶ್ರೀಮಠದ ಪೀಠಾಧ್ಯಕ್ಷರಾದ ಡಾ.ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಸಮರ್ಥವಾಗಿ ಮುನ್ನಡೆಸಿಕೊಂಡು ಹೋಗುತ್ತಿದ್ದಾರೆ ಎಂದು ಬಣ್ಣಿಸಿದರು.



ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆದ ಉದ್ಯಮಿ ಒಕ್ಕಲಿಗ ಎಕ್ಸ್ ಪೋ ಕಾರ್ಯಕ್ರಮವನ್ನು ಶ್ರೀ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಸಾನಿಧ್ಯದಲ್ಲಿ ಗಣ್ಯರು ಉದ್ಘಾಟಿಸಿದರು.

ನಮ್ಮ ಸಮಾಜದ ಹೆಚ್.ಡಿ.ದೇವೇಗೌಡರು ಪ್ರಧಾನಿಯಾಗಿ ದೇಶವನ್ನು ಮುನ್ನಡೆಸಿ ಒಕ್ಕಲಿಗ ಸಮಾಜಕ್ಕೆ ಕೀರ್ತಿ ತಂದುಕೊಟ್ಟಿದ್ದಾರೆ. ಮಾಜಿ ಮುಖ್ಯಮಂತ್ರಿ ದಿ.ಕೆಂಗಲ್ ಹನುಮಂತಯ್ಯ ಅವರು ವಿಧಾನಸೌಧವನ್ನು ನಿರ್ಮಿಸಿದ್ದು, ಅವರ ಹೆಸರು ಶಾಶ್ವತವಾಗಿ ಉಳಿಯುವಂತಾಗಿದೆ ಎಂದರು.

ಮೈಸೂರಿನಲ್ಲಿ ಪಡುವಾರಹಳ್ಳಿ, ಮಂಚೇಗೌಡನಕೊಪ್ಪಲು, ಕನ್ನೇಗೌಡನ ಕೊಪ್ಪಲು, ಈ ಮೂರು ಗ್ರಾಮಗಳಲ್ಲೂ ಒಕ್ಕಲಿಗರ ಜಮೀನುಗಳು ಇದ್ದವು. ನಗರಾಭಿವೃದ್ಧಿ ಪ್ರಾಧಿಕಾರವು ಒಂದು ಎಕರೆ ಜಮೀನಿಗೆ 25 ರಿಂದ 30 ಸಾವಿರ ಕೊಟ್ಟು ಸ್ವಾಧೀನ ಪಡಿಸಿಕೊಂಡಿತು. ಈಗ ಆ ಜಮೀನಿನ ಬೆಲೆ 2–3 ಕೋಟಿ ಆಗಿದೆ. ಜಮೀನು ಕಳೆದುಕೊಂಡ ಒಕ್ಕಲಿಗರ ಮಕ್ಕಳಿಗೆ ಈಗ ನಿವೇಶನ ಇಲ್ಲದಂತಹ ಪರಿಸ್ಥಿತಿ ಉಂಟಾಗಿದೆ. ಹೊರರಾಜ್ಯದವರೇ ಹೆಚ್ಚು ಉದ್ದಿಮೆದಾರರಾಗಿದ್ದಾರೆ. ರೈತರು ಈಗ ಉಳಿಯುತ್ತಿಲ್ಲ, ಆದ್ದರಿಂದ ನಮ್ಮ ಸಮಾಜದ ಉದ್ಯಮಿಗಳು ಸಮಾಜದ ಇತರರನ್ನೂ ಉದ್ಯಮಿಗಳಾಗಲು ಪ್ರೇರೇಪಿಸಿ, ಅವರಿಗೆ ಆತ್ಮಸ್ಥೈರ್ಯ ತುಂಬಬೇಕು. ಒಕ್ಕಲಿಗರ ಸಮಾಜ ಬೇಡಿದ ಸಮುದಾಯವಲ್ಲ, ನೀಡಿದ ಸಮುದಾಯ. ಎಲ್ಲರೂ ಒಗ್ಗೂಡುವುದರಲ್ಲೇ ನಮ್ಮ ಶಕ್ತಿ ಹೆಚ್ಚಾಗುತ್ತದೆ ಎಂದು ಹೇಳಿದರು.

ಇದೇ ವೇಳೆ ಉದ್ಯಮಿಗಳಾಗಲು ಪ್ರೇರಣೆ ನೀಡುತ್ತಿರುವ ಫಸ್ಟ್ ಸರ್ಕಲ್ ಸಂಸ್ಥಾಪಕ ಜಯರಾಮ್ ರಾಯ್‌ಪುರ್ ಅವರನ್ನು ಅಭಿನಂದಿಸಲಾಯಿತು. ಶ್ರೀ ಡಾ.ನಿರ್ಮಲಾನಂದನಾಥ ಸ್ವಾಮೀಜಿ, ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ರಾಜ್ಯ ಕೃಷಿ ಸಚಿವ ಚಲುವರಾಯಸ್ವಾಮಿ, ಶಾಸಕರಾದ ಗೋಪಾಲಯ್ಯ, ಶರತ್ ಬಚ್ಚೇಗೌಡ, ವಿಧಾನ ಪರಿಷತ್ ಮಾಜಿ ಸದಸ್ಯ ಬಿ.ಎಲ್.ಶಂಕರ್, ಸ್ಟಾರ್ ಚಂದ್ರು, ಆರ್.ಎಂ.ಮಂಜುನಾಥ್ ಗೌಡ ಹಾಗೂ ಉದ್ಯಮಿಗಳು ಉಪಸ್ಥಿತರಿದ್ದರು.

ಡಬ್ಲ್ಯೂಪಿಎಲ್ ಪಂದ್ಯಾವಳಿ–2026

ಉದ್ಘಾಟನಾ ಪಂದ್ಯದಲ್ಲಿ ಆರ್‌ಸಿಬಿ ಶುಭಾರಂಭ

ಮೈಸೂರು, ಜ.9(ವಿವಿಹೆಚ್)– ನದೀನ್ ಡಿ ಕ್ಲರ್ಕ್ ಅವರ ಆಲ್‌ರೌಂಡರ್ ಆಟದ ನೆರವಿನಿಂದ ಹಾಲಿ ಚಾಂಪಿಯನ್ ಮುಂಬೈ ಇಂಡಿಯನ್ಸ್ ವಿರುದ್ಧ ರಾಯಲ್ ಚಾಲೆಂಜರ್ಸ್ ಬೆಂಗಳೂರು 3 ವಿಕೆಟ್‌ಗಳ ಭರ್ಜರಿ ಜಯಗಳಿಸಿದೆ ಆ ಮೂಲಕ ಶುಭಾರಂಭ ಮಾಡಿದೆ.

ಇಲ್ಲಿನ ಡಿ.ವೈ.ಪಾಟೀಲ್ ಮೈದಾನದಲ್ಲಿ ಶುಕ್ರವಾರ ಸಂಜೆ ನಡೆದ ಉದ್ಘಾಟನಾ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಮುಂಬೈ ನಿಗದಿತ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 154 ರನ್ ಗಳಿಸಿತು. ಗೆಲುವಿನ ಗುರಿ ಬೆನ್ನತ್ತಿದ ಆರ್‌ಸಿಬಿ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 157 ರನ್ ಗಳಿಸಿ ಜಯದ ನಗೆ ಬೀರಿತು.

ಮುಂಬೈ ತಂಡದ ಮೊತ್ತ 67 ರನ್ ಆಗುವಷ್ಟರಲ್ಲಿ ಅಮೆಲಿಯಾ ಕೆರ್, ನ್ಯಾಟ್ ಸಿವರ್–ಬ್ರಂಟ್ ತಲಾ 4 ರನ್, ನಾಯಕಿ ಹರ್ಮನ್ ಪ್ರೀತ್ ಕೌರ್ 20, ಜಿ.ಕಮಲಿನಿ 32 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ನಂತರ ಬಂದ ಸಜೀವನ ಸಜ್ನಾ 45, ನಿಕೋಲಾ ಕ್ಯಾರಿ 40 ರನ್ ಗಳಿಸಿ ತಂಡದ ಮೊತ್ತವನ್ನು 150ರ ಗಡಿ ದಾಟಿಸಿದರು. ಆರ್‌ಸಿಬಿ ಪರ ನದೀನ್ ಡಿ ಕ್ಲರ್ಕ್ 4, ಲಾರೆನ್ ಬೆಲ್, ಶ್ರೇಯಾಂಕ ಪಾಟೀಲ್ ತಲಾ ಒಂದೊಂದು ವಿಕೆಟ್ ಕಬಳಿಸಿದರು.

155 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಆರ್‌ಸಿಬಿ ನಿರಂತರವಾಗಿ ವಿಕೆಟ್ ಕಳೆದುಕೊಳ್ಳತ್ತಾ ಸಾಗಿ ವಿಜಯದ ನಗೆ ಬೀರಿತು. ತಂಡದ ಪರ ನದೀನ್ ಡಿ ಕ್ಲರ್ಕ್ 7 ಬೌಂಡರಿ, 2 ಸಿಕ್ಸರ್ ಒಳಗೊಂಡ 63, ಅರುಂಧತಿ ರೆಡ್ಡಿ 20, ಗ್ರೇಸ್ ಹ್ಯಾರೀಸ್ 25, ನಾಯಕಿ ಸ್ಮೃತಿ ಮಂದನಾ 18 ರನ್ ಗಳಿಸಿದರು. ಮುಂಬೈ ಪರ ಅಮೇಲಿ ಕೆರ್ ಹಾಗೂ ನಿಕೋಲಾ ಕ್ಯಾರಿ ತಲಾ 2 ವಿಕೆಟ್ ಪಡೆದರು. ಬ್ಯಾಟಿಂಗ್ ಹಾಗೂ ಬೌಲಿಂಗ್‌ನಲ್ಲಿ ಅಮೋಘ ಪ್ರದರ್ಶನ ನೀಡಿದ ನದೀನ್ ಡಿ ಕ್ಲರ್ಕ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.



ನದೀನ್ ಡಿ ಕ್ಲೆರ್ಕ್ ಬ್ಯಾಟಿಂಗ್ ವೈಖರಿ

ವರ್ಣರಂಜಿತ ಚಾಲನೆ: ಇದಕ್ಕೂ ಮುನ್ನಾ 4ನೇ ಆವೃತ್ತಿಯ ಡಬ್ಲ್ಯೂಪಿಎಲ್‌ಗೆ ವರ್ಣರಂಜಿತ ಚಾಲನೆ ನೀಡಲಾಯಿತು. 2021ರ ವಿಶ್ವ ಸುಂದರಿ ಹರ್ನಾಜ್ ಕೌರ್ ಸಂಧು ತಮ್ಮ ರ‍್ಯಾಂಪ್ ವಾಕ್ ಮೂಲಕ ವೇದಿಕೆಗೆ ಕಿಚ್ಚು ಹಚ್ಚಿದರು. ನಂತರ ಬಾಲಿವುಡ್ ನಟಿ ಜಾಕ್ವೆಲಿನ್ ಫರ್ನಾಂಡಿಸ್ ಉತ್ಸಾಹಭರಿತ ಪ್ರದರ್ಶನದೊಂದಿಗೆ, ಮತ್ತಷ್ಟು ಮೆರಗು ನೀಡಿದರು. ಈ ಜೋಡಿ ಮೋಡಿಗೆ ತಲೆ ತೂಗಿದ್ದ ಪ್ರೇಕ್ಷಕ ಸಮೂಹಕ್ಕೆ, ಮುಂಬೈ ನಾಯಕಿ ಹರ್ಮನ್‌ಪ್ರೀತ್ ಕೌರ್ ಮತ್ತು ರಾಯಲ್ ಚಾಲೆಂಜರ್ಸ್ ಬೆಂಗಳೂರು ನಾಯಕಿ ಸ್ಮೃತಿ ಮಂದಾನ ಜೊತೆಯಾಗಿ ರ‍್ಯಾಪರ್–ಗಾಯಕ ಯೋ ಯೋ ಹನಿ ಸಿಂಗ್ ವೇದಿಕೆಗೆ ಏರುತ್ತಿದ್ದಂತೆ ಇಡೀ ಕ್ರೀಡಾಂಗಣವೇ ಹುಚ್ಚೆದ್ದು ಕುಣಿಯಿತು. ತಮ್ಮ ಇತ್ತೀಚಿನ ಹಾಡುಗಳು ಮತ್ತು ಟೈಮ್‌ಲೆಸ್ ಹಿಟ್‌ಗಳ ಮಿಶ್ರಣದಿಂದ ಪ್ರೇಕ್ಷಕರನ್ನು ರೋಮಾಂಚನಗೊಳಿಸಿದರು.

ಮೈಸೂರು ಮಿತ್ರ

ಶನಿವಾರ 10 ಜನವರಿ 2026

ಗೂಡ್ಸ್ ವಾಹನ ಡಿಕ್ಕಿ: ಬೈಕ್ ಸವಾರ ಸಾವು



ಮೈಸೂರು, ಜ. 9 (ಆರ್‌ಕೆ)– ಸರಕು ಸಾಗಣೆ ವಾಹನವೊಂದು ಬೈಕ್‌ಗೆ ಡಿಕ್ಕಿ ಹೊಡೆದ ಪರಿಣಾಮ ವ್ಯಕ್ತಿಯೋರ್ವ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಬನ್ನೂರು ರಸ್ತೆಯಲ್ಲಿ ಬಡಗಲಹುಂಡಿ ಗೇಟ್ ಬಳಿ ಗುರುವಾರ ಸಂಜೆ ಸಂಭವಿಸಿದೆ.

ಮೈಸೂರು ತಾಲೂಕು, ವರುಣಾ ಹೋಬಳಿ ಬಡಗಲಹುಂಡಿ ಗ್ರಾಮದ ನಿವಾಸಿ ಮಹದೇವು (58) ಸಾವನ್ನಪ್ಪಿದವರು. ಗುರುವಾರ ಸಂಜೆ ತಮ್ಮ ಊರಿನಿಂದ ಬೈಕ್‌ನಲ್ಲಿ ಮೈಸೂರಿಗೆ ಬರುತ್ತಿದ್ದ ಮಹದೇವು ಬನ್ನೂರು ರಸ್ತೆಯಲ್ಲಿ ಬಲಗಡೆ ಪೆಟ್ರೋಲ್ ಬಂಕ್‌ಗೆ ತಿರುಗುವಾಗ ಬನ್ನೂರು ಕಡೆಯಿಂದ ಮೈಸೂರಿಗೆ ಬರುತ್ತಿದ್ದ ಸರಕು ತುಂಬಿದ ಟಾಟಾ ಏಸ್ ವಾಹನ ಡಿಕ್ಕಿ ಹೊಡೆದಿದೆ. ವಾಹನ ಅಪ್ಪಳಿಸಿದ ರಭಸಕ್ಕೆ ತೀವ್ರ ಗಾಯಾಗಳಾಗಿ ಅವರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಧಾವಿಸಿದ ಅರಕೆರೆ ಠಾಣೆ ಪೊಲೀಸರು ಮಹಜರು ನಡೆಸಿ, ಮೃತ ದೇಹವನ್ನು ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರಕ್ಕೆ ಸಾಗಿಸಿದರು. ಮರಣೋತ್ತರ ಪರೀಕ್ಷೆ ಬಳಿಕ ಇಂದು ಬೆಳಿಗ್ಗೆ ದೇಹವನ್ನು ವಾರಸುದಾರರಿಗೆ ಒಪ್ಪಿಸಲಾಯಿತು. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ವಾಹನಗಳನ್ನು ವಶಕ್ಕೆ ಪಡೆದುಕೊಂಡಿದ್ದು, ತನಿಖೆ ನಡೆಸುತ್ತಿದ್ದಾರೆ.

ಮಾದಕ ವಸ್ತುಗಳ ಬಗ್ಗೆ ಜಾಗೃತಿ ಸಮಾವೇಶ, ಜಾಥ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ರಾಷ್ಟ್ರ ಸಮಿತಿಯ ನಗರ ಯುವ ಘಟಕದ ಅಧ್ಯಕ್ಷ ಕೆ. ಆನಂದ್ ಮಾತನಾಡಿದರು.

ಮೈಸೂರು, ಜ.9(ಎಂಟಿವೈ)– ಮಾದಕ ವಸ್ತುಗಳಿಗೆ ದಾಸರಾಗದಂತೆ ಯುವ ಜನರಲ್ಲಿ ಜಾಗೃತಿ ಮೂಡಿಸಲು ಮೈಸೂರಿನ ಪುರಭವನದಲ್ಲಿ ಜ.12ರಂದು ಬೆಳಗ್ಗೆ 10.30ಕ್ಕೆ ಜಾಗೃತಿ ಸಮಾವೇಶ ಮತ್ತು ಜಾಗೃತಿ ಜಾಥ ನಡೆಸಲಾಗುತ್ತಿದೆ ಎಂದು ಕರ್ನಾಟಕ ರಾಷ್ಟ್ರ ಸಮಿತಿ (ಕೆಆರ್‌ಎಸ್)ಯ ನಗರ ಯುವ ಘಟಕದ ಅಧ್ಯಕ್ಷ ಕೆ. ಆನಂದ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಮಾದಕ ವಸ್ತುಗಳ ಜಾಲ ಯುವಸಮುದಾಯವನ್ನೇ ಹಾಳು ಮಾಡುತ್ತಿವೆ. ಯುವಜನತೆ ಮಾದಕ ವಸ್ತುಗಳ ವ್ಯಸನಿಗಳಾಗಿ ಜೀವನ ಹಾಳು ಮಾಡಿಕೊಳ್ಳುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ದುಶ್ಚಟಗಳಿಂದ ಯುವ ಜನರನ್ನು ದೂರವಿರಿಸಲು ಕಾಗೃತಿ ಮಾಡಿಸಲು ಜಾಗೃತಿ ಸಮಾವೇಶ ಹಾಗೂ ಜಾಗೃತಿ ಜಾಥ ಹಮ್ಮಿಕೊಳ್ಳಲಾಗಿದೆ ಎಂದರು.

ಜ.12ರಂದು ಕೆಆರ್‌ಎಸ್ ಪಕ್ಷದ ಕಾರ್ಯಾಧ್ಯಕ್ಷರಾಗಿದ್ದ, ಪಕ್ಷ ಕಾರ್ಯಕರ್ತರಿಗೆ ಸ್ಫೂರ್ತಿಯಾಗಿದ್ದ ಎಸ್.ಎಚ್. ಲಿಂಗೇಗೌಡರ ಜನ್ಮದಿನವೂ ಆಗಿರುವುದರಿಂದ ಅವರನ್ನು ಸ್ಮರಿಸುವ ಉದ್ದೇಶದಿಂದ ಕಾರ್ಯಕ್ರಮ ಆಯೋಜಿಸಲಾಗಿದೆ.ಈ ಸಮಾವೇಶದಲ್ಲಿ ಪಕ್ಷದ ಗೌರವಾಧ್ಯಕ್ಷ ರವಿ ಕೃಷ್ಣಾ ರೆಡ್ಡಿ, ಅಧ್ಯಕ್ಷ ಸಿ.ಎನ್. ದೀಪಕ್, ರಘು ಜಾಣಗೆರೆ, ಜನಗಿ ವತ್ಸಲ ಮೊದಲಾದವರು ಪಾಲ್ಗೊಳ್ಳುವರು. ಜಾಥದಲ್ಲಿ ಸುಮಾರು ಎರಡು ಸಾವಿರ ಮಂದಿ ಭಾಗವಹಿಸುವ ನಿರೀಕ್ಷೆಯಿದೆ ಎಂದರು.

ರಾಷ್ಟ್ರದ ಶಕ್ತಿಯಾಗಿರುವ ಯುವಜನತೆಯನ್ನು ಇತ್ತೀಚೆಗೆ ಕಡೆಗಣಿಸಲಾಗುತ್ತಿದೆ. ಅವರ ಭವಿಷ್ಯವನ್ನು ದುರ್ಭರಗೊಳಿಸುವ ಎಲ್ಲ ಯತ್ನ ನಡೆಯುತ್ತಿದೆ. ಇದೇ ವೇಳೆ ಬಹಳಷ್ಟು ಯುವಜನತೆ ಮಾದಕ ವಸ್ತುಗಳ ದಾಸರಾಗುತ್ತಿದ್ದಾರೆ. ಹೀಗಾಗಿ ಅವರಲ್ಲಿ ಅರಿವು ಮೂಡಿಸಲು ಈ ಸಮಾವೇಶ ಆಯೋಜಿಸಲಾಗುತ್ತಿದೆ. ಜಾಥ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದಿಂದ ಆರಂಭವಾಗಿ, ವಿವಿಧ ರಸ್ತೆಗಳ ಮೂಲಕ ಬಸವೇಶ್ವರ ಪ್ರತಿಮೆ ಬಳಿ ಸಮಾರೋಪಗೊಳ್ಳಲಿದೆ ಎಂದು ತಿಳಿಸಿದರು.

ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹರೀಶ್, ಕಾರ್ಯದರ್ಶಿ ರಾಜೇಶ್, ಲೋಕೇಶ್ ಹಾಗೂ ಇನ್ನಿತರರು ಇದ್ದರು.

ದಸಂಸ ಸಂಸ್ಥಾಪಕ ಸಂಚಾಲಕ ಲಕ್ಷ್ಮಿನಾರಾಯಣ ನಾಗವಾರ ಸ್ಮರಣಾರ್ಥ

ಇಂದು 'ಗುರಿ ಮುಟ್ಟದ ದಲಿತ ರಾಜಕಾರಣ–ಮುಂದಿನ ನಡೆ' ವಿಚಾರ ಸಂಕಿರಣ

ಮೈಸೂರು, ಜ.9– ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ(ದಸಂಸ)ಯ ಸಂಸ್ಥಾಪಕ ರಾಜ್ಯ ಸಂಚಾಲಕರಾಗಿದ್ದ ಲಕ್ಷ್ಮಿನಾರಾಯಣ ನಾಗವಾರ ಅವರ ಪ್ರಥಮ ವರ್ಷದ ಸ್ಮರಣಾರ್ಥ ಸಮಿತಿ ವತಿಯಿಂದ 'ಗುರಿ ಮುಟ್ಟದ ದಲಿತ ರಾಜಕಾರಣ ಮತ್ತು ಮುಂದಿನ ನಡೆ' ಕುರಿತು ವಿಚಾರ ಸಂಕಿರಣವನ್ನು ಶನಿವಾರ(ಜ.10) ಬೆಳಗ್ಗೆ 10.30ಕ್ಕೆ ನಗರದ ಜೆಎಲ್‌ಬಿ ರಸ್ತೆಯ ರೋಟರಿ ಸಂಸ್ಥೆ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ.

ಗಾಂಧಿನಗರ ಉರಿಲಿಂಗಪೆದ್ದಿ ಮಠದ ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ ವಿಚಾರ ಸಂಕಿರಣವನ್ನು ಉದ್ಘಾಟಿಸಲಿದ್ದು, ದಸಂಸ ರಾಜ್ಯ ಸಂಘಟನಾ ಸಂಚಾಲಕ ದೇವಗಳ್ಳಿ ಸೋಮಶೇಖರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ರಾಜ್ಯ ದಲಿತ ಮಹಿಳಾ ಒಕ್ಕೂಟದ ರಾಜ್ಯ ಸಂಚಾಲಕಿ ಡಾ.ಜಾನಕಮ್ಮ ಲಕ್ಷ್ಮೀನಾರಾಯಣ ನಾಗವಾರ ಹಾಗೂ ದಸಂಸ ಕಾರ್ಯಕಾರಿ ಸಂಚಾಲಕ ಜೀವನಹಳ್ಳಿ ವೆಂಕಟೇಶ್ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಮೈಸೂರು ವಿಭಾಗೀಯ ಸಂಚಾಲಕ ರಾಜಶೇಖರ ಕೋಟೆ, ಜಿಲ್ಲಾ ಸಂಚಾಲಕ ಭುಗತಗಳ್ಳಿ ಕೆ.ಮಣಿಯಯ್ಯ ಮತ್ತಿತರರು ಉಪಸ್ಥಿತರಿರಲಿದ್ದಾರೆ.

ಮಧ್ಯಾಹ್ನ 12ಕ್ಕೆ 'ಅಹಿಂದ' ರಾಜಕಾರಣದಲ್ಲಿ ದಲಿತ ರಾಜಕೀಯದ ಅಸ್ತಿತ್ವ ಮತ್ತು ಪರಿಣಾಮಗಳು(ಎಸ್‌ಸಿಪಿ/ಟಿಎಸ್‌ಪಿ ಒಳಮೀಸಲಾತಿಯಲ್ಲಿನ) ನ್ಯೂನತೆಗಳು' ಕುರಿತು ಚಿಂತಕ ಸಿ.ಹರಕುಮಾರ್, ಮಧ್ಯಾಹ್ನ 1ಕ್ಕೆ 'ದಲಿತ ರಾಜಕಾರಣಕ್ಕೆ ಐಕ್ಯತೆ ಮತ್ತು ಬಲಿಷ್ಠತೆಯ ಅಗತ್ಯತೆ' ಕುರಿತು ಪಿಯುಸಿಎಲ್ ಅಧ್ಯಕ್ಷ ಹಾಗೂ ಪತ್ರಕರ್ತ ಕಮಲ್ ಗೋಪಿನಾಥ್ ವಿಷಯ ಮಂಡಿಸಲಿದ್ದಾರೆ. ಹಿರಿಯ ಪತ್ರಕರ್ತ ಅಂಶಿಪ್ರಸನ್ನ ಕುಮಾರ್ ಹಾಗೂ ದಸಂಸದ ಹಿರಿಯ ಮುಖಂಡ ಹರಿಹರ ಆನಂದಸ್ವಾಮಿ ಕ್ರಮವಾಗಿ ಗೋಷ್ಠಿಗಳ ಅಧ್ಯಕ್ಷತೆ ವಹಿಸಲಿದ್ದಾರೆ. ದಸಂಸ ಜಿಲ್ಲಾ ಸಂಘಟನಾ ಸಂಚಾಲಕರಾದ ಎಸ್.ಡಿ.ಸಣ್ಣಸ್ವಾಮಿ ಸರಗೂರು, ಬೊಕ್ಕಳ್ಳಿ ಲಿಂಗಯ್ಯ, ನಗರ ಸಂಚಾಲಕ ವಿ.ಎಸ್.ಮೋಹನ್ ಕುಮಾರ್ ಗೋಷ್ಠಿಗಳಲ್ಲಿ ಉಪಸ್ಥಿತರಿರಲಿದ್ದಾರೆ.

ಮಹತ್ವದ 'ಪಿಎಂ ಸೂರ್ಯ ಘರ್ ಯೋಜನೆ' ಜಾರಿಗೆ ರಾಜ್ಯ ಸರ್ಕಾರದ ನಿರಾಸಕ್ತಿ

● ಸಂಸದ ಯದುವೀರ್ ವಿಷಾದ ● ವಿದ್ಯುತ್ ಬಳಕೆಯಲ್ಲಿ ಸ್ವಾವಲಂಬನೆಗೆ ಯೋಜನೆ ಸಹಕಾರಿ

ಮೈಸೂರು, ಜ.9(ಎಂಕೆ)– ಕೇಂದ್ರ ಸರ್ಕಾರ ಮಹತ್ವಾಕಾಂಕ್ಷಿ 'ಪಿಎಂ ಸೂರ್ಯ ಘರ್ ಯೋಜನೆ' ಅನುಷ್ಠಾನಕ್ಕೆ ರಾಜ್ಯ ಸರ್ಕಾರ ತೀವ್ರ ನಿರಾಸಕ್ತಿ ತೋರುತ್ತಿದ್ದು, ದಾಖಲೆ ಹೆಚ್ಚು ದಿನಗಳ ಆಡಳಿತದ ಜೊತೆಗೆ ಜನಪ್ರಿಯ ಯೋಜನೆಗಳನ್ನು ಜಾರಿಗೊಳಿಸುವ ಮೂಲಕವೂ ಆಗಬೇಕು ಎಂದು ಮೈಸೂರು–ಕೊಡಗು ಲೋಕಸಭಾ ಸದಸ್ಯ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಹೇಳಿದರು.

ಮೈಸೂರಿನ ಸಿದ್ದಾರ್ಥ ಹೋಟೆಲ್‌ನಲ್ಲಿ ಇಂಡಿಯನ್ ಸೋಲಾರ್ ಅಸೋಸಿಯೇಷನ್ ವತಿಯಿಂದ ಶುಕ್ರವಾರ ಆಯೋಜಿಸಿದ್ದ ಸೋಲಾರ್ ರೂಫ್ ಟಾಪ್ ಡೆವಲಪರ್ಸ್ ಮೀಟ್(solar roof top developer's meet) ಹಾಗೂ 'ಪಿಎಂ–ಸೂರ್ಯ ಘರ್ ಯೋಜನೆ' ಜಾಗೃತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, 2024ರ ಫೆಬ್ರವರಿಯಿಂದ ಜಾರಿಯಾದ 'ಪಿಎಂ–ಸೂರ್ಯ ಘರ್ ಯೋಜನೆ' ಮೂಲಕ ಸಬ್ಸಿಡಿ ದರದಲ್ಲಿ ಮನೆಯ ಮೇಲೆ ಸೋಲಾರ್ ಘಟಕ ಅಳವಡಿಸಿಕೊಂಡು ವಿದ್ಯುತ್ ಬಳಕೆಯಲ್ಲಿ ಸ್ವಾವಲಂಬನೆ ಸಾಧಿಸಬಹುದಾಗಿದೆ. ರಾಜ್ಯದಲ್ಲಿ 2 ಲಕ್ಷಕ್ಕೂ ಹೆಚ್ಚು ಮಂದಿ ಪಿಎಂ–ಸೂರ್ಯ ಘರ್ ಯೋಜನೆಯಡಿ ಅರ್ಜಿ ಸಲ್ಲಿಸಿದ್ದು, ರಾಜ್ಯ ಸರ್ಕಾರದ ನಿರಾಸಕ್ತಿಯಿಂದ ಅನುಷ್ಠಾನಗೊಂಡಿರುವುದು ಕೇವಲ 10 ಸಾವಿರ ಮಂದಿಗೆ ಮಾತ್ರ ಎಂದು ಬೇಸರ ವ್ಯಕ್ತಪಡಿಸಿದರು.



ಸೋಲಾರ್ ರೂಫ್‌ಟಾಪ್ ಡೆವಲಪರ್ಸ್ ಮೀಟ್ ಹಾಗೂ 'ಪಿಎಂ–ಸೂರ್ಯ ಘರ್ ಯೋಜನೆ' ಜಾಗೃತಿ ಕಾರ್ಯಕ್ರಮವನ್ನು ಸಂಸದ ಯದುವೀರ್ ಉದ್ಘಾಟಿಸಿದರು. ಮಾಜಿ ಸಂಸದ ಸಿ.ನರಸಿಂಹನ್ ಮತ್ತಿತರರಿದ್ದರು.

ಪಿಎಂ–ಸೂರ್ಯ ಘರ್ ಯೋಜನೆ ಮೂಲಕ ವಿದ್ಯುತ್ ಬಿಲ್ ಕಡಿಮೆ ಅಥವಾ ಶೂನ್ಯವೂ ಆಗಬಹುದು. ಹಾಗೆಯೇ ಹೆಚ್ಚಿನ ವಿದ್ಯುತ್ ಉತ್ಪಾದಿಸಿ, ಮಾರಾಟ ಮಾಡುವ ಮೂಲಕ ಆರ್ಥಿಕವಾಗಿ ಸ್ವಾವಲಂಬಿಗಳಾಗಬಹುದಾಗಿದೆ. ಜೊತೆಗೆ ನವೀಕರಿಸಬಹುದಾದ ಇಂಧನ ಬಳಕೆಗೆ ಪ್ರೋತ್ಸಾಹ ಮತ್ತು ಮಾಲಿನ್ಯ ಹಾಗೂ ಹವಾಮಾನ ವೈಪರಿತ್ಯಕ್ಕೂ ತಡೆ ಬೀಳಲಿದೆ. ಆದರೆ, ಇಂತಹ ಮಹತ್ವದ ಯೋಜನೆಗೆ ರಾಜ್ಯದಲ್ಲಿ ಪ್ರೋತ್ಸಾಹ ನೀಡದಿರುವುದು ನೋವಿನ ಸಂಗತಿ ಎಂದರು.

ಕೇಂದ್ರ ಸರ್ಕಾರ ದೇಶದ ಸಮಗ್ರ ಅಭಿವೃದ್ಧಿಗೆ ಪೂರಕವಾದ ಯೋಜನೆಗಳನ್ನು ರೂಪಿಸುತ್ತಿದ್ದು, ರಾಜ್ಯ ಸರ್ಕಾರ ಅನುಷ್ಠಾನಕ್ಕೆ ಅವಕಾಶ ನೀಡಿ ಪ್ರೋತ್ಸಾಹಿಸಬೇಕು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದೀರ್ಘಕಾಲದವರೆಗೆ ಮುಖ್ಯಮಂತ್ರಿಗಳಾಗಿ ದಾಖಲೆ ಮಾಡಿದ್ದಾರೆಂಬುದು ಪ್ರಚಾರವಾಗುತ್ತಿದೆ. ಹೆಚ್ಚು ದಿನ ಅಧಿಕಾರದಲ್ಲಿರುವುದೇ ದಾಖಲೆ ಅಲ್ಲ. ಜನಪ್ರಿಯ ಯೋಜನೆಗಳನ್ನು ಜಾರಿಗೊಳಿಸುವ ಮೂಲಕವೂ ದಾಖಲೆ ಮಾಡಬೇಕು. ಕೇಂದ್ರ ಯೋಜನೆಗಳನ್ನು ಜನರಿಗೆ ತಲುಪಿಸುವ ಕೆಲಸವಾಗಬೇಕು ಎಂದು ಹೇಳಿದರು.

ರಾಜಕೀಯ ಮಾಡಬಾರದು: ಇಂಡಿಯನ್ ಸೋಲಾರ್ ಅಸೋಸಿಯೇಷನ್ ಅಧ್ಯಕ್ಷ ಹಾಗೂ ಮಾಜಿ ಸಂಸದ ಸಿ.ನರಸಿಂಹನ್ ಮಾತನಾಡಿ, ಮನೆಗಳು, ಕಟ್ಟಡಗಳ ಮೇಲೆ ಸೌರ ವಿದ್ಯುತ್ ಭಾವಣಿ ಹಾಕಿಸಿಕೊಳ್ಳಲು ಎಲ್ಲರನ್ನೂ ಸಂಪರ್ಕಿಸಿ, ಪ್ರೋತ್ಸಾಹಿಸುವ ಕೆಲಸ ಮಾಡಬೇಕಾಗಿದೆ. ಪಿಎಂ–ಸೂರ್ಯ ಘರ್ ಯೋಜನೆಯ ಲಾಭವನ್ನು ಪ್ರತಿಯೊಬ್ಬರು ಪಡೆದುಕೊಳ್ಳುವಂತಾಗಬೇಕಿದೆ. ಈ ವಿಚಾರದಲ್ಲಿ ರಾಜ್ಯ ಸರ್ಕಾರಗಳು ರಾಜಕೀಯ ಮಾಡದೆ ಅನುಷ್ಠಾನಕ್ಕೆ ಕ್ರಮ ಕೈಗೊಳ್ಳಬೇಕು ಎಂದು ಕೋರಿದರು.

ಜಾಗೃತಿ ಹೆಚ್ಚುತ್ತಿದೆ: ನರೇಂದ್ರ ಮೋದಿ ಪ್ರಧಾನಿಯಾದ ಬಳಿಕ ನವೀಕರಿಸಬಹುದಾದ ಇಂಧನ ಬಳಕೆ ಪ್ರಮಾಣ ಜಾಸ್ತಿಯಾಗಿದ್ದು, ಜಾಗೃತಿಯೂ ಹೆಚ್ಚುತ್ತಿದೆ. ಪಿಎಂ–ಸೂರ್ಯ ಘರ್ ಯೋಜನೆಗೆ ರಾಜ್ಯ ಸರ್ಕಾರಗಳಿಂದ ಇನ್ನಷ್ಟು ಪ್ರೋತ್ಸಾಹ ನೀಡಬೇಕು. ಬ್ಯಾಂಕುಗಳ ಕೂಡ ಸಾಲ–ಸೌಲಭ್ಯ ನೀಡಲು ಸಿದ್ಧವಿದ್ದು, ಯೋಜನೆ ಸದ್ಬಳಕೆಯಾಗಬೇಕು ಎಂದು ತಿಳಿಸಿದರು.

ಐಓಬಿ ಬ್ಯಾಂಕ್ ನೋಡಲ್ ಅಧಿಕಾರಿ ಪ್ರಕಾಶ್, ಕೆನರಾ ಬ್ಯಾಂಕ್ ನೋಡಲ್ ಅಧಿಕಾರಿ ಲಕ್ಷ್ಮಣ್ ಪ್ರತಾಪ್, ಇಂಡಿಯನ್ ಸೋಲಾರ್ ಅಸೋಸಿಯೇಷನ್ ಪದಾಧಿಕಾರಿಗಳಾದ ರವೀಂದ್ರನಾಥ ರೆಡ್ಡಿ, ಕೆ.ಟಿ. ಸುರೇಶ, ಬಸವೇಗೌಡ, ಪ್ರೊದಾಸನ್, ಶ್ವೇತಾ ಮತ್ತಿತರರಿದ್ದರು.

ವಿಕಸಿತ ಭಾರತಕ್ಕೆ ಕೊಡುಗೆ ನೀಡಿ..

ಮುಂದಿನ ಪೀಳಿಗೆಗೆ ಅವಶ್ಯವಿರುವ ಪಿಎಂ–ಸೂರ್ಯ ಘರ್ ಯೋಜನೆ ಅನುಷ್ಠಾನದಲ್ಲಿ ಅಧಿಕಾರಿಗಳು ರಾಜಕೀಯ ಮಾಡಬಾರದು. ರಾಜಕಾರಣಿಗಳ ಕೈಗೊಂಬೆಯಾಗದೆ ಜನಪರವಾಗಿ ಕೆಲಸ ಮಾಡಬೇಕು. ಹಾಗೆಯೇ ನಮ್ಮ ಮನೆಯ ಮೇಲೆ ವಿದ್ಯುತ್ ತಯಾರಿಸಿ, ಮಾರಾಟ ಮಾಡುವ ಮೂಲಕ ವಿಕಸಿತ ಭಾರತಕ್ಕೆ ಕೊಡುಗೆ ನೀಡಬೇಕಿದೆ.
– ಯದುವೀರ್, ಸಂಸದ

ಮೈಸೂರಿನ ರಮಾವಿಲಾಸ ರಸ್ತೆಯಲ್ಲಿ ಆಧಾರ್ ಸೇವಾ ಕೇಂದ್ರ ಆರಂಭ

ಮೈಸೂರು, ಜ.9(ಬಿಎಲ್ ಯು)– ಮೈಸೂರಿನ ರಮಾವಿಲಾಸ ರಸ್ತೆಯಲ್ಲಿ ನೂತನ ಆಧಾರ್ ಸೇವಾ ಕೇಂದ್ರ ಇಂದಿನಿಂದ ಆರಂಭವಾಗಿದೆ. ಈ ಸೇವಾ ಕೇಂದ್ರವನ್ನು ಖಾಸಗಿ ಹಾಗೂ ಸರ್ಕಾರದ ಯುಐಎಡಿಐ (Unique Identification Authority of India) ಸಹಯೋಗದೊಂದಿಗೆ ತೆರೆಯಲಾಗಿದೆ.

ಈ ವೇಳೆ ಮಾತನಾಡಿದ ಯುಐಎಡಿಐ ಕರ್ನಾಟಕದ ಪ್ರಾದೇಶಿಕ ಅಧಿಕಾರಿ ಮನೋಜ್ ಕುಮಾರ್, ಮೈಸೂರಿನಂತೆ ಹಾಸನ, ತುಮಕೂರು ಸೇರಿ ಇತರ ಜಿಲ್ಲೆಯಲ್ಲಿಯೂ ನವೀಕೃತ ಆಧಾರ್ ಸೇವಾ ಕೇಂದ್ರ ತೆರೆಯಲಾಗುವುದು ಎಂದು ಮಾಹಿತಿ ನೀಡಿದರು.



ಮೈಸೂರಿನ ರಮಾವಿಲಾಸ ರಸ್ತೆಯಲ್ಲಿ ಶುಕ್ರವಾರ ನೂತನ ಆಧಾರ್ ಸೇವಾ ಕೇಂದ್ರ ಆರಂಭವಾಯಿತು.

ಹೊಸದಾಗಿ ಆಧಾರ್ ಕಾರ್ಡ್ ಮಾಡಿಸುವರಿಗೆ, ಹೆಸರು, ಜನ್ಮ ದಿನಾಂಕ, ಮೊಬೈಲ್ ನಂಬರ್, ವಿಳಾಸ ಬದಲಾವಣೆ ಮಾಡುವವರು ಆಧಾರ್ ಸೇವಾ ಕೇಂದ್ರವನ್ನು ಸಂಪರ್ಕಿಸಬಹುದು. ಸರ್ಕಾರದಿಂದ ಘೋಷಿಸಲ್ಪಟ್ಟ ರಜಾ ದಿನ ಹೊರತುಪಡಿಸಿ ಭಾನುವಾರ ಸೇರಿದಂತೆ ವಾರದ 7 ದಿನಗಳೂ ಆಧಾರ್ ಸೇವಾ ಕೇಂದ್ರ ತೆರೆದಿರುತ್ತದೆ.

ಆಧಾರ್ ಕಾರ್ಡ್ ಇಂದು ಅತ್ಯವಶ್ಯಕವಾದ ಸರ್ಕಾರದ ಪ್ರಮುಖ ದಾಖಲಾತಿಯಾಗಿದೆ. ಆಧಾರ್ ಕಾರ್ಡ್ ಇಲ್ಲದಿದ್ದ ವ್ಯಕ್ತಿ ಸರ್ಕಾರದ ಯಾವುದೇ ಕಾನೂನಾತ್ಮಕ ಕ್ರಿಯೆಯಲ್ಲಿ ಭಾಗಿಯಾಗಲು ಸಾಧ್ಯವಿಲ್ಲ, ಜೊತೆಗೆ ಸರ್ಕಾರದ ಯಾವುದೇ ಸೌಲಭ್ಯವನ್ನು ಕೂಡ ಪಡೆಯಲು ಆಧಾರ್ ಕಾರ್ಡ್ ಬೇಕೇ ಬೇಕು.

ಅಷ್ಟೆ ಅಲ್ಲದೆ ಬ್ಯಾಂಕ್ ಅಕೌಂಟ್ ತೆರೆಯುವುದು, ಆಸ್ತಿ ನೋಂದಣಿ ಮಾಡಿಸುವುದು, ಆದಾಯ ತೆರಿಗೆ ಪಾವತಿ, ಪ್ಯಾನ್ ಕಾರ್ಡ್ ಪಡೆಯುವುದು, ಪಡಿತರ ಚೀಟಿ ಪಡೆಯುವುದು, ವಾಹನ ಖರೀದಿ ಸೇರಿದಂತೆ ಪ್ರತಿಯೊಂದು ವಿಚಾರದಲ್ಲೂ ಆಧಾರ್ ಅತ್ಯವಶ್ಯವಾಗಿದೆ.

ಬಹುತೇಕ ಮಂದಿ ಆಧಾರ್ ಕಾರ್ಡ್ ಪಡೆದಿದ್ದಾರೆ. ಆದರೆ ಮೈಸೂರು ಜಿಲ್ಲೆಯ ಗಿರಿಜನ ಹಾಡಿಗಳಲ್ಲಿ ಇನ್ನು ಕೂಡ ಆಧಾರ್ ಕಾರ್ಡ್ ಪಡೆದಿಲ್ಲ ಎಂದು ಆಧಾರ್ ಸೇವಾ ಕೇಂದ್ರದವರು ಮಾಹಿತಿ ನೀಡಿದರು.

ಈ ವೇಳೆ ಆಧಾರ್ ಸೇವಾ ಕೇಂದ್ರದ ವ್ಯವಸ್ಥಾಪಕ ನಿವೃತ್ತ ಕರ್ನಲ್ ಜಿ.ಕೃಷ್ಣ ಪ್ರಸಾದ್, ಆಪರೇಷನ್ ಮ್ಯಾನೇಜರ್ ಪ್ರವೀಣ್ ಕುಮಾರ್ ಈ ವೇಳೆ ಹಾಜರಿದ್ದರು.

ಸ್ಪ್ಯಾಮ್ ಕರೆ ಬ್ಲಾಕ್ ಮಾಡುವ ಬದಲು ಮಾಹಿತಿ ನೀಡಿ

ಮೈಸೂರು, ಜ.9(ಬಿಎಲ್‌ಯು)– ಸ್ಪ್ಯಾಮ್ ಕರೆಗಳ ಮೂಲಕ ಡಿಜಿಟಲ್ ಅರೆಸ್ಟ್ ಹಾಗೂ ಡಿಜಿಟಲ್ ವಂಚನೆ ಮಾಡುತ್ತಿರುವ ಪ್ರಕರಣಗಳ ಹಿನ್ನೆಲೆಯಲ್ಲಿ ಫೋನಿನ ಕಾಲಿಂಗ್ ಆ್ಯಪ್ ಅನ್ನು ಬ್ಲಾಕ್ ಮಾಡುವುದರ ಬದಲು ಟ್ರ್ಯಾಯ್ ಡಿಎನ್‌ಡಿ ಆ್ಯಪ್ ಅಥವಾ ಸೇವಾ ಪೂರೈಕೆ ಆ್ಯಪ್ ಅಥವಾ 1909ಕ್ಕೆ ಕರೆ ಮಾಡಿ ಎಂದು ಟ್ರ್ಯಾಯ್ ಸಲಹೆ ನೀಡಿದೆ.

ಈ ಸಂಬಂಧ ಮೊಬೈಲ್ ಎಸ್‌ಎಂಎಸ್ ಮೆಸೇಜ್ ಮೂಲಕ ಟ್ರ್ಯಾಯ್ ಜನರಿಗೆ ಮಾಹಿತಿ ನೀಡುತ್ತಿದೆ. ಮೈಸೂರಿನಲ್ಲಿ ಕಳೆದ ವರ್ಷ 40 ಕೋಟಿ ರೂಪಾಯಿಯಷ್ಟು ಡಿಜಿಟಲ್ ವಂಚನೆಯಾಗಿದೆ. ಈ ವರ್ಷ 30 ಕೋಟಿ ರೂಪಾಯಿಗೂ ಮೀರಿ ಡಿಜಿಟಲ್ ವಂಚನೆಯಾಗಿದೆ.

ಈ ಹಿನ್ನೆಲೆಯಲ್ಲಿ ಸ್ಪ್ಯಾಮ್ ಕರೆಗಳನ್ನು ಬ್ಲಾಕ್ ಮಾಡುವ ಬದಲು ಟ್ರ್ಯಾಯ್ ಸೂಚಿಸಿದ ಆ್ಯಪ್ ಹಾಗೂ ಸಂಖ್ಯೆಗೆ ಕರೆ ಮಾಡುವಂತೆ ಸಲಹೆ ನೀಡಿದೆ.

ಡಿಜಿಟಲ್ ವಂಚನೆಗಳ ವಿರುದ್ಧ ಜನರಲ್ಲಿ ಟ್ರ್ಯಾಯ್ ಪರಿಣಾಮಕಾರಿ ಜಾಗೃತಿ ಮೂಡಿಸುತ್ತಿದೆ. ಅಲ್ಲದೆ ಸೆನ್ ಪೊಲೀಸರು ಕೂಡ ಅರಿವು ಮೂಡಿಸುತ್ತಿದ್ದಾರೆ. ಆದರೂ ಕೆಲವರು ಡಿಜಿಟಲ್ ವಂಚನೆಯಿಂದ ಹಣ ಕಳೆದುಕೊಳ್ಳುತ್ತಿದ್ದಾರೆ.

ಅಭಿನಂದನೆ




ಮೈಸೂರು ಗ್ರಾಮಾಂತರ ವಲಯ ಡಿವೈಎಸ್ಪಿಯಾಗಿ ಇತ್ತೀಚಿಗೆ ಅಧಿಕಾರ ವಹಿಸಿಕೊಂಡ ಟಿ.ಬಿ.ರಾಜಣ್ಣ ಅವರನ್ನು ಮೈಸೂರು ಕೆ.ಜಿ.ಕೊಪ್ಪಲ್ ಸುರೇಶ್, ಭರತ್, ಯೋಗೇಶ್, ಹೇಮಂತ್, ಪ್ರಮೋದ್ ಹಾಗೂ ಗಾಂಧಿ ಮತ್ತಿತರರು ಅಭಿನಂದಿಸಿದರು.

ನಾಳೆ ಮೈಸೂರಲ್ಲಿ 'ಫಿಟ್ ಮೈಸೂರು' ಸಾಮೂಹಿಕ ಆರೋಗ್ಯ, ಜಾಗೃತಿ ನಡಿಗೆ

ಮೈಸೂರು, ಜ.9(ಎಂಕೆ)– ಮೈಸೂರು ವಿಶ್ವವಿದ್ಯಾನಿಲಯ, ನಗರಪಾಲಿಕೆ, ಮೈಸೂರು ಜಿಲ್ಲಾ ಪತ್ರಕರ್ತರ ಸಂಘ, ಮೈಸೂರು ಜಿಮ್ ಅಸೋಸಿಯೇಷನ್, ಜಿಎಸ್‌ಎಸ್ ಸಿಎಸ್‌ಆರ್ ಸೇರಿದಂತೆ ವಿವಿಧ ಸಂಸ್ಥೆಗಳ ಸಹಯೋಗದಲ್ಲಿ ಜ.11 ರಂದು 5 ಕಿಲೋ ಮೀಟರ್ ದೂರದ 'ಫಿಟ್ ಮೈಸೂರು' ಸಾಮೂಹಿಕ ಆರೋಗ್ಯ ಮತ್ತು ಜಾಗೃತಿ ನಡಿಗೆ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ತಿಳಿಸಿದರು.

ಮೈಸೂರು ವಿವಿ ಕ್ರಾಫರ್ಡ್ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಮೈಸೂರಿನ ನಾಗರಿಕರಲ್ಲಿ ದೈಹಿಕ ಮತ್ತು ಮಾನಸಿಕ ಆರೋಗ್ಯ, ಪರಿಸರ ಜಾಗೃತಿ ಮತ್ತು ಸಾಮಾಜಿಕ ಹೊಣೆಗಾರಿಕೆ ಕುರಿತು ಅರಿವು ಮೂಡಿಸುವ ನಿಟ್ಟಿನಲ್ಲಿ 'ಫಿಟ್ ಮೈಸೂರು' ಜಾಗೃತಿ ನಡಿಗೆ ಕಾರ್ಯಕ್ರಮ ಆಯೋಜಿಸಲಾಗಿದ್ದು, ಸುಮಾರು 10 ಸಾವಿರಕ್ಕೂ ಹೆಚ್ಚು ಮಂದಿ ಭಾಗವಹಿಸುವ ನಿರೀಕ್ಷೆ ಇದೆ ಎಂದರು.



'ಫಿಟ್ ಮೈಸೂರು' ಸಾಮೂಹಿಕ ಆರೋಗ್ಯ ಮತ್ತು ಜಾಗೃತಿ ನಡಿಗೆಯ ರೂಟ್‌ಮ್ಯಾಪ್ ಪೋಸ್ಟರ್ ಅನ್ನು ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಬಿಡುಗಡೆ ಮಾಡಿದರು. ಕುಲಸಚಿವೆ ಎಂ.ಕೆ.ಸವಿತಾ. ನಗರಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್, ಜಿಎಸ್‌ಎಸ್ ಯೋಗ ಸಂಸ್ಥೆಯ ಶ್ರೀಹರಿ ಮತ್ತಿತರರಿದ್ದರು.

ಅಂದು ಬೆಳಗ್ಗೆ 6.30ಕ್ಕೆ ಮಾನಸಗಂಗೋತ್ರಿಯ ಬಯಲು ರಂಗಮಂದಿರದ ಆವರಣದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಹೆಚ್.ಸಿ.ಮಹದೇವಪ್ಪ ಹಾಗೂ ಪರ್ವತಾರೋಹಿ ಡಾ.ಉಷಾ ಹೆಗ್ಡೆ ಹಸಿರು ನಿಶಾನೆ ತೋರುವ ಮೂಲಕ ಜಾಗೃತಿ ನಡಿಗೆಗೆ ಚಾಲನೆ ನೀಡಲಿದ್ದಾರೆ. ಬೆಳಗ್ಗೆ 5.30ರಿಂದಲೇ ನೋಂದಣಿ ಆರಂಭವಾಗಲಿದ್ದು, ಜುಂಬಾ ವ್ಯಾಯಾಮ ಬಳಿಕ 200 ಗಾಯಕರು ನಾಡಗೀತೆ ಪ್ರಸ್ತುತ ಪಡಿಸಲಿದ್ದಾರೆ ಎಂದು ತಿಳಿಸಿದರು.

ಬಯಲು ರಂಗಮಂದಿರದಿಂದ ಆರಂಭವಾಗುವ 'ಫಿಟ್ ಮೈಸೂರು' ಜಾಗೃತಿ ನಡಿಗೆಯು ಕುಕ್ಕರಹಳ್ಳಿ ಕೆರೆ ರಸ್ತೆ(ಬೋಗಾದಿ ಮುಖ್ಯ ರಸ್ತೆ) ಮೂಲಕ ಸಾಗಿ ಸರಸ್ವತಿಪುರಂ ಅಗ್ನಿಶಾಮಕ ಠಾಣೆ ಎದುರಿಂದ ಎಡಕ್ಕೆ ತಿರುಗಿ, ಮಹಾರಾಜ ಕಾಲೇಜು ಮೈದಾನ ಎದುರಿನ ಕೃಷ್ಣರಾಜ ಬುಲೆವಾರ್ಡ್ ರಸ್ತೆ ಮೂಲಕ ಹುಣಸೂರು ರಸ್ತೆ ಮಾರ್ಗವಾಗಿ ಸಾಗಿ ಪಡುವಾರಹಳ್ಳಿ ಸಿಗ್ನಲ್‌ನಿಂದ ಮಾನಸಗಂಗೋತ್ರಿ ರಸ್ತೆ ಮೂಲಕ ಸೆನೆಟ್ ಭವನದವರೆಗೆ ಸಾಗಲಿದೆ ಎಂದರು.

ಪ್ರತೀ ಕಿಲೋ ಮೀಟರ್‌ಗೂ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗುವುದು. ಮಾರ್ಗದುದ್ದಕ್ಕೂ ವೈದ್ಯಕೀಯ ಹಾಗೂ ಆಂಬುಲೆನ್ಸ್ ವ್ಯವಸ್ಥೆ ಇರಲಿದ್ದು, ಭಾಗವಹಿಸುವವರ ಸುರಕ್ಷತೆಗೆ ಆದ್ಯತೆ ನಿಡಲಾಗುವುದು. ಬೆಳಗಿನ ಉಪಾಹಾರ ಹಾಗೂ ಪ್ರತ್ಯೇಕ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಲಾಗುವುದು ಎಂದು ಮಾಹಿತಿ ನೀಡಿದರು.

ಬಳಿಕ 'ಫಿಟ್ ಮೈಸೂರು' ಜಾಗೃತಿ ನಡಿಗೆಯ ರೂಟ್ ಮ್ಯಾಪ್ ಪೋಸ್ಟರ್ ಅನ್ನು ಬಿಡುಗಡೆ ಮಾಡಲಾಯಿತು. ಮೈಸೂರು ವಿವಿ ಕುಲಸಚಿವೆ ಎಂ.ಕೆ.ಸವಿತಾ, ಮೈಸೂರು ನಗರಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಶಿಫ್, ಜಿಎಸ್‌ಎಸ್ ಯೋಗ ಸಂಸ್ಥೆಯ ಶ್ರೀಹರಿ ಮತ್ತಿತರರು ಉಪಸ್ಥಿತರಿದ್ದರು.

ದೇಶ – ವಿದೇಶ

ಚೀನಾದ ಮೇಲಿನ ನಿರ್ಬಂಧಗಳ ರದ್ದುಪಡಿಸಲು ಭಾರತ ಚಿಂತನೆ

ನವದೆಹಲಿ: ಚೀನಾದೊಂದಿಗಿನ ಗಡಿ ಉದ್ವಿಗ್ನತೆ ಕಡಿಮೆಯಾದ ವಾತಾವರಣದಲ್ಲಿ ವಾಣಿಜ್ಯ ಸಂಬಂಧಗಳನ್ನು ಪುನರುಜ್ಜೀವನಗೊಳಿಸಲು ಭಾರತ ಪ್ರಯತ್ನಿಸುತ್ತಿದ್ದು, ಈ ಹಿನ್ನೆಲೆಯಲ್ಲಿ ಸರ್ಕಾರಿ ಒಪ್ಪಂದಗಳಿಗೆ ಬಿಡ್ ಮಾಡುವ ಚೀನೀ ಸಂಸ್ಥೆಗಳ ಮೇಲಿನ ಐದು ವರ್ಷಗಳ ಹಳೆಯ ನಿರ್ಬಂಧಗಳನ್ನು ರದ್ದುಗೊಳಿಸಲು ಭಾರತದ ಹಣಕಾಸು ಸಚಿವಾಲಯ ಯೋಜಿಸಿದೆ ಎಂದು ಸರ್ಕಾರಿ ಮೂಲಗಳನ್ನು ಉಲ್ಲೇಖಿಸಿ ರಾಯಿಟರ್ಸ್ ತಿಳಿಸಿದೆ.



ಈ ಕ್ರಮದಿಂದ ಚೀನಾ–ಭಾರತ ಆರ್ಥಿಕ ಮತ್ತು ವ್ಯಾಪಾರ ಸಂಬಂಧಗಳಲ್ಲಿ ಮತ್ತಷ್ಟು ಸುಧಾರಣೆಯನ್ನು ಸೂಚಿಸುತ್ತದೆ ಎಂದು ಚೀನಾದ ತಜ್ಞರೊಬ್ಬರು ಅಭಿಪ್ರಾಯಿಸಿದ್ದಾರೆ. 2020ರಲ್ಲಿ ವಿಧಿಸಲಾದ ನಿರ್ಬಂಧಗಳ ಪ್ರಕಾರ ಚೀನಾದ ಬಿಡ್ಡರ್‌ಗಳು ಭಾರತೀಯ ಸರ್ಕಾರಿ ಸಮಿತಿಯಲ್ಲಿ ನೋಂದಾಯಿಸಿಕೊಳ್ಳಬೇಕು ಮತ್ತು ರಾಜಕೀಯ ಮತ್ತು ಭದ್ರತಾ ಅನುಮತಿ ಪಡೆಯಬೇಕು. ಈ ಕ್ರಮಗಳು ಚೀನಾದ ಸಂಸ್ಥೆಗಳು 700 ಬಿಲಿಯನ್ ಡಾಲರ್‌ಗಳಿಂದ 750 ಬಿಲಿಯನ್ ಡಾಲರ್‌ಗಳ ಮೌಲ್ಯದ ಭಾರತೀಯ ಸರ್ಕಾರಿ ಒಪ್ಪಂದಗಳಿಗೆ ಸ್ಪರ್ಧಿಸುವುದನ್ನು ಪರಿಣಾಮಕಾರಿಯಾಗಿ ತಡೆದಿದ್ದವು.

ಭೂಮಿಗಾಗಿ ಉದ್ಯೋಗ: ಲಾಲು ಕುಟುಂಬದ ಮೇಲಿನ ಆರೋಪ ಸಾಬೀತು

ನವದೆಹಲಿ: ರೈಲ್ವೆ ಭೂಮಿಗಾಗಿ ಉದ್ಯೋಗ ಹಗರಣದಲ್ಲಿ ಆರ್‌ಜೆಡಿ ಮುಖ್ಯಸ್ಥ ಲಾಲು ಪ್ರಸಾದ್ ಯಾದವ್, ಪತ್ನಿ ರಾಬ್ರಿ ದೇವಿ, ಮಕ್ಕಳಾದ ತೇಜಸ್ವಿ ಯಾದವ್, ತೇಜ್ ಪ್ರತಾಪ್ ಯಾದವ್, ಮಿಸಾ ಭಾರತಿ ಸೇರಿದಂತೆ ಹಲವರ ವಿರುದ್ಧ ಕ್ರಿಮಿನಲ್ ಆರೋಪಗಳು ಸಾಬೀತಾಗಿವೆ ಎಂದು ದೆಹಲಿ ನ್ಯಾಯಾಲಯ ಹೇಳಿದೆ.



2004ರಿಂದ 2009ರವರೆಗೆ ಲಾಲು ಪ್ರಸಾದ್ ಯಾದವ್ ರೈಲ್ವೆ ಸಚಿವರಾಗಿದ್ದಾಗ, ರೈಲ್ವೆಯಲ್ಲಿ ಗ್ರೂಪ್ ಡಿ ಹುದ್ದೆಗಳನ್ನು ನೀಡಲು, ಅವರ ಕುಟುಂಬ ಸದಸ್ಯರು ಅಥವಾ ಸಂಬಂಧಿತರಿಗೆ ಅಗ್ಗದ ಬೆಲೆಗೆ ಭೂಮಿ ವರ್ಗಾವಣೆ ಮಾಡಿಸಿಕೊಂಡಿದ್ದಾರೆ. ಪಾರದರ್ಶಕ ನೇಮಕಾತಿ ಪ್ರಕ್ರಿಯೆ ನಡೆಸದೆ, ಪರಸ್ಪರ ಲಾಭಕ್ಕಾಗಿ ಭೂಮಿ ವರ್ಗಾವಣೆ ಮಾಡಿರುವುದಾಗಿ ತನಿಖಾಧಿಕಾರಿಗಳು ಹೇಳಿದ್ದಾರೆ.

ನ್ಯಾಯಾಲಯದ ಆದೇಶದ ಪ್ರಕಾರ, ಆಸ್ತಿಗಳನ್ನು ಪಡೆಯಲು ಸಾರ್ವಜನಿಕ ಉದ್ಯೋಗವನ್ನು ದುರುಪಯೋಗಪಡಿಸಿಕೊಳ್ಳಲಾಗಿದ್ದು, ಲಾಲು ಯಾದವ್ ಆಪ್ತ ವಲಯದವರು ಈ ಸಂಚಿನಲ್ಲಿ ಭಾಗಿಯಾಗಿದ್ದರು ಎಂದು ಅಭಿಪ್ರಾಯಿಸಿರುವ ನ್ಯಾಯಾಲಯ, ತಮ್ಮನ್ನು ಪ್ರಕರಣದಿಂದ ಕೈಬಿಡುವಂತೆ ಆರೋಪಿಗಳು ಸಲ್ಲಿಸಿದ್ದ ಅರ್ಜಿಗಳನ್ನು ತಿರಸ್ಕರಿಸಿದೆ.

ವಿರೋಧದ ನಡುವೆಯೂ ಗ್ರೀನ್ ಲ್ಯಾಂಡ್ ಖರೀದಿಗೆ ಟ್ರಂಪ್ ನಿರ್ಧಾರ!

ವಾಷಿಂಗ್ಟನ್: ವೆನೆಜುವೆಲಾದ ಮೇಲಿನ ದಾಳಿ ಬಳಿಕ ಡೆನ್ಮಾರ್ಕ್‌ನ ಸ್ವಾಯತ್ತ ಪ್ರದೇಶವಾಗಿರುವ ಖನಿಜ ನಿಕ್ಷೇಪ ದ್ವೀಪವಾದ ಗ್ರೀನ್ ಲ್ಯಾಂಡ್ ಸ್ವಾಧೀನಪಡಿಸಿಕೊಳ್ಳುವ ಪಣತೊಟ್ಟಿರುವ ಅಮೆರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಅದಕ್ಕಾಗಿ ಸಾಮ–ದಾನ–ಭೇದ ದಂಡೋಪಾಯದ ತಂತ್ರಗಳನ್ನು ಅನುಸರಿಸುತ್ತಿದ್ದಾರೆ.



ಇದಕ್ಕೂ ಮೊದಲು ಗ್ರೀನ್ ಲ್ಯಾಂಡ್ ಅಮೆರಿಕಾದ ರಾಷ್ಟ್ರೀಯ ಭದ್ರತೆಗೆ ಅವಶ್ಯಕವಾಗಿದ್ದು ಹಾಗಾಗಿ ಈ ದ್ವೀಪ ಯುಎಸ್ ವಶದಲ್ಲಿದ್ದರೆ ಉತ್ತಮ ಎಂದು ಹೇಳಿದ್ದರು. ಆದರೆ ಆ ತಂತ್ರ ಕೆಲಸ ಮಾಡದಿದ್ದಾಗ ಮಿಲಿಟರಿ ದಾಳಿಯ ಎಚ್ಚರಿಕೆ ನೀಡಿದ್ದಾರೆ. ಆದರೆ ಡೆನ್ಮಾರ್ಕ್ ಇದಕ್ಕೂ ಜಗ್ಗದಿರುವುದರಿಂದ ಟ್ರಂಪ್ ದಾನ ತಂತ್ರದ ಮೊರೆ ಹೋಗಿದ್ದು, ಗ್ರೀನ್ ಲ್ಯಾಂಡ್ ಪ್ರಜೆಗಳಿಗೆ ಹಣ ನೀಡುವ ಮೂಲಕ ಅದನ್ನು ಕೊಂಡುಕೊಳ್ಳಲು ಮುಂದಾಗಿದ್ದಾರೆ. ಅಲ್ಲಿನ ಜನರಿಗೆ ನೇರವಾಗಿ ಹಣ ನೀಡುವ ಬಗ್ಗೆ ಚರ್ಚಿಸಲಾಗಿದೆ ಎಂದು ರಾಯಿಟರ್ಸ್ ವರದಿ ಮಾಡಿದೆ.

ಈ ವರದಿಯ ಪ್ರಕಾರ, ಅಮೆರಿಕದ ಅಧಿಕಾರಿಗಳು ಸುಮಾರು 57 ಸಾವಿರ ಜನಸಂಖ್ಯೆ ಹೊಂದಿರುವ ಗ್ರೀನ್‌ಲ್ಯಾಂಡ್‌ನ ನಿವಾಸಿಗಳಿಗೆ ತಲಾ $10,000 ನಿಂದ $100,000ವರೆಗೆ ಪಾವತಿಸಬಹುದು ಎಂದು ಅಂದಾಜಿಸಲಾಗಿದೆ.


ಇರಾನ್ ಆರ್ಥಿಕ ಪರಿಸ್ಥಿತಿ ಅಯೋಮಯ; ಬೀದಿಗಿಳಿದು ಜನರ ಆಕ್ರೋಶ

ತೆಹ್ರಾನ್: ಡಾಲರ್ ಎದುರು ಇರಾನ್ ಕರೆನ್ಸಿ ರಿಯಾಲ್ ಪಾತಾಳ ಸೇರಿ, ಹಣದುಬ್ಬರ ಹೆಚ್ಚಾಗಿ ಆರ್ಥಿಕ ಪರಿಸ್ಥಿತಿ ಸಂಪೂರ್ಣವಾಗಿ ಕುಸಿಯುತ್ತಿದೆ. ಪರಿಣಾಮ ಬದುಕು ಸಾಗಿಸುವುದು ಕಷ್ಟಕರವಾಗಿರುವುದರಿಂದ ಇರಾನ್ ಸರ್ಕಾರದ ವಿರುದ್ಧ ಜನಾಕ್ರೋಶ ಭುಗಿಲೆದ್ದಿದೆ. ಸುಮಾರು 13 ದಿನಗಳಿಂದ ಬೀದಿಗಿಳಿದು ಉಗ್ರ ಪ್ರತಿಭಟನೆ ನಡೆಸುತ್ತಿದ್ದು, ಸದ್ಯ ಇರಾನ್ ಸರ್ಕಾರ ದೇಶದಾದ್ಯಂತ ಇಂಟರ್ನೆಟ್ ಸಂಪರ್ಕವನ್ನು ಕಡಿತಗೊಳಿಸುವ ಮೂಲಕ ಪ್ರತಿಭಟನಾಕಾರರನ್ನು ನಿಯಂತ್ರಿಸುವ ಕೆಲಸಕ್ಕೆ ಮುಂದಾಗಿದೆ.

ಆರ್ಥಿಕತೆ ಕುಸಿತದಿಂದಾಗಿ ಡಿ.28ರಂದು ತೆಹ್ರಾನ್‌ನಲ್ಲಿ ಆರಂಭವಾದ ಮುಷ್ಕರ ದಿನೇ ದಿನೆ ತೀವ್ರ ಸ್ವರೂಪ ಪಡೆದುಕೊಂಡು ಕಾಡ್ಗಿಚ್ಚಿನಂತೆ ದೇಶದಾದ್ಯಂತ ವ್ಯಾಪಿಸಿದೆ. ಸರ್ಕಾರದ ವಿರುದ್ಧ ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸುತ್ತಿದ್ದು, ಸರ್ವಾಧಿಕಾರಿಗೆ ಸಾವಾಗಲೀ ಹಾಗೂ ಖಮೇನಿ ನಾಶವಾಗಲೀ ಎಂದು ಘೋಷಣೆ ಮೊಳಗಿಸುತ್ತಿದ್ದಾರೆ. ಪ್ರತಿಭಟನೆ ಹತ್ತಿಕ್ಕಲು ಖಮೇನಿ ಸರ್ಕಾರ ಕೈಗೊಂಡಿರುವ ಕಠಿಣ ಕ್ರಮಗಳಿಂದ ಕಳೆದ 2 ವಾರಗಳಲ್ಲಿ ಸುಮಾರು 21 ಮಂದಿ ಬಲಿಯಾಗಿದ್ದು, ಸುಮಾರು ಸಾವಿರಕ್ಕೂ ಹೆಚ್ಚು ಪ್ರತಿಭಟನಾಕಾರರು ಬಂಧನಕ್ಕೊಳಗಾಗಿದ್ದಾರೆ. ಇದನ್ನು ಮಟ್ಟ ಹಾಕಲು ಸದ್ಯ ಇರಾನ್ ಸರ್ಕಾರ ದೇಶದಾದ್ಯಂತ ಇಂಟರ್ನೆಟ್ ಸಂಪರ್ಕ ಸೇವೆಯನ್ನೇ ಕಡಿತಗೊಳಿಸಿದೆ ಎಂದು ಎಎಫ್‌ಪಿ ವರದಿ ಮಾಡಿದೆ.

ಮೆಕ್ಸಿಕೋ ವಿರುದ್ಧ ಟ್ರಂಪ್ ಸೇನಾ ಕಾರ್ಯಾಚರಣೆ ಹೇಳಿಕೆಗೆ ಖಂಡನೆ

ಅಮೆರಿಕ: ವೆನೆಜುವೆಲಾ ವಿರುದ್ಧದ ದಂಡಾತ್ಮಕ ಕ್ರಮದ ನಂತರ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಶೀಘ್ರದಲ್ಲಿ ಮೆಕ್ಸಿಕೋದ ಡ್ರಗ್ ಕಾರ್ಟೆಲ್‌ಗಳ ವಿರುದ್ಧ ಮಿಲಿಟರಿ ಕಾರ್ಯಾಚರಣೆ ನಡೆಸುವುದಾಗಿ ಹೇಳಿದ್ದಾರೆ.



ಮಾಧ್ಯಮವೊಂದಕ್ಕೆ ಮಾತನಾಡಿದ ಟ್ರಂಪ್, ಮೆಕ್ಸಿಕೋವನ್ನು ನಿಯಂತ್ರಿಸುತ್ತಿರುವ ಡ್ರಗ್ ಕಾರ್ಟೆಲ್‌ಗಳು, ಅಮೆರಿಕದಲ್ಲಿ ಪ್ರತಿ ವರ್ಷ 2.5 ರಿಂದ 3 ಲಕ್ಷ ಜನರ ಸಾವಿಗೆ ಕಾರಣವಾಗಿವೆ. ಸಮುದ್ರದ ಮೂಲಕ ಮಾದಕವಸ್ತು ಕಳ್ಳಸಾಗಣೆ ಶೇಕಡಾ 97 ರಷ್ಟು ಕಡಿಮೆಯಾಗಿದೆ, ಆದರೆ ಸಂಪೂರ್ಣ ನಿರ್ಮೂಲನೆ ನಮ್ಮ ಗುರಿಯಾಗಿದೆ ಎಂದಿದ್ದಾರೆ.

ಇದಕ್ಕೆ ಪ್ರತಿಕ್ರಿಯಿಸಿರುವ ಮೆಕ್ಸಿಕನ್ ಅಧ್ಯಕ್ಷೆ ಕ್ಲೌಡಿಯಾ ಶೀನ್‌ಬಾಮ್, ಮೆಕ್ಸಿಕೋ ಸ್ವತಂತ್ರ ಮತ್ತು ಸಾರ್ವಭೌಮ ದೇಶವಾಗಿದ್ದು, ಯಾವುದೇ ಹಸ್ತಕ್ಷೇಪವನ್ನು ಸಹಿಸುವುದಿಲ್ಲ. ಅಮೆರಿಕಾ ಅಧ್ಯಕ್ಷ ಟ್ರಂಪ್ ಮಾದಕವಸ್ತು ದಂಧೆಕೋರರನ್ನು ನಿರ್ಮೂಲನೆ ಮಾಡಲು ಮೆಕ್ಸಿಕೋಗೆ ಅಮೇರಿಕನ್ ಸೈನ್ಯವನ್ನು ಕಳುಹಿಸುವ ಹೇಳಿಕೆಯನ್ನು ಒಪ್ಪುವುದಿಲ್ಲ. ಮಾದಕವಸ್ತು ಕಳ್ಳಸಾಗಣೆ ನಿಗ್ರಹಿಸಲು ಎರಡೂ ದೇಶಗಳು ಈಗಾಗಲೇ ಒಟ್ಟಾಗಿ ಕೆಲಸ ಮಾಡುತ್ತಿವೆ. ಆದರೆ ಮೆಕ್ಸಿಕೋದಲ್ಲಿ ಯುಎಸ್ ಪಡೆಗಳ ಉಪಸ್ಥಿತಿ ಸ್ವೀಕಾರಾರ್ಹವಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಸಮಾಜದಲ್ಲಿ ಯಾರಿಗೂ ಕೆಡುಕು ಬಯಸದೆ ಸದ್ಗುಣವಂತರಾಗಿ: ಜ್ಞಾನೇಶ್ವರ ಸ್ವಾಮೀಜಿ

ವಿರಾಜಪೇಟೆ, ಜ.9–ಮನುಷ್ಯನಾಗಿ ಹುಟ್ಟಿದ ಮೇಲೆ ಈ ಸಮಾಜದಲ್ಲಿ ಯಾರಿಗೂ ಕೆಡುಕನ್ನು ಬಯಸದೇ ಒಳ್ಳೆಯ ಸದ್ಗುಣವಂತರಾಗಿ ಪರರಿಗೆ ಸಹಾಯ ಮಾಡುವಂತ ಮನೋಭಾವ ವಿರಬೇಕು ಎಂದು ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲೂಕಿನ ಕರ್ಕಿ ಶ್ರೀಕ್ಷೇತ್ರ ದೈವಜ್ಞ ಬ್ರಾಹ್ಮಣ ಮಠದ ಜ್ಞಾನೇಶ್ವರೀ ಪೀಠದ ಶ್ರೀ ಸಚ್ಚಿದಾನಂದ ಜ್ಞಾನೇಶ್ವರ ಭಾರತಿ ಸ್ವಾಮೀಜಿ ಹೇಳಿದ್ದಾರೆ.


ಶ್ರೀಗಳವರನ್ನು ಮಹಿಳಾ ಚಂಡೆ ಮೇಳದೊಂದಿಗೆ ಮೆರವಣಿಗೆಯಲ್ಲಿ ಕರೆತರಲಾಯಿತು.

ಇಲ್ಲಿನ ದೈವಜ್ಞ ಬ್ರಾಹ್ಮಣ ಸಭಾಂಗಣದಲ್ಲಿ ನಡೆದ 'ದೈವಜ್ಞ ದರ್ಶನ' ಕಾರ್ಯಕ್ರಮದಲ್ಲಿ ನೀಡಿದ ಆಶೀರ್ವಚನದಲ್ಲಿ ಮನುಷ್ಯ ಅತೀ ಬುದ್ಧಿವಂತನಾಗಿದ್ದು ಕೋಪದಿಂದ ವರ್ತಿಸದೆ, ಪರರೊಂದಿಗೆ ಶಾಂತಿ ಸಮಾಧಾನದಿಂದ ವರ್ತಿಸಬೇಕು ಎಂದು ನುಡಿದರು.

ಜ್ಞಾನನೇಶ್ವರೀ ಪೀಠದ ಶ್ರೀ ಸುಜ್ಞಾನೇಶ್ವರ ಭಾರತಿ ಸ್ವಾಮಿ ಮಾತನಾಡಿ, ಮನುಷ್ಯರು ಕೊಪಗೊಳಗಾಗದೆ ತಮ್ಮ ಕರ್ತವ್ಯದಲ್ಲಿ ಉತ್ತಮನಾಗಿ ಬೆಳೆಯುವ ಮೂಲಕ ಮತ್ತೊಬ್ಬರನ್ನು ಬೆಳೆಸಬೇಕು ಹಾಗೂ ಸಮಾಜದಲ್ಲಿ ಉತ್ತಮ ವ್ಯಕ್ತಿಯಾಗಿ ಬದುಕಬೇಕು ಎಂದರು. ಕರ್ಕಿ ಕ್ಷೇತ್ರದ ದೈವಜ್ಞ ಬ್ರಾಹ್ಮಣ ಮಠದ ಮುಖ್ಯಸ್ಥ ಯೋಗೇಶ್ ಭಟ್ ಮಾತನಾಡಿ, ತಮ್ಮ ವಿದ್ಯಾಸಂಸ್ಥೆಯಲ್ಲಿ 10ನೇ ತರಗತಿವರೆಗೆ ಉಚಿತ ಶಿಕ್ಷಣ ನೀಡಲಾಗುತ್ತಿದ್ದು, ಮುಂದಿನ ದಿನದಲ್ಲಿ ಕಾಲೇಜು ಪ್ರಾರಂಭಿಸಲಾಗುವುದು ಎಂದರು.

ಸನ್ಮಾನಿತರಾದ ದೈವಜ್ಞ ಬ್ರಾಹ್ಮಣರ ರಾಜ್ಯ ಸಮಿತಿ ಸದಸ್ಯ ಗಣಪತಿ ಶೇಟ್ ಮಾತನಾಡಿ, ಈವರೆಗೆ ರಾಜ್ಯದ ಬೇರೆ ಬೇರೆ ಸ್ಥಳಗಳ ಸುಮಾರು 60 ಕ್ಷೇತ್ರಗಳಲ್ಲಿ ದೈವಜ್ಞ ದರ್ಶನ ನಡೆಸಿದ್ದು, ಮುಂದೆ ಬೆಂಗಳೂರು ಮತ್ತು ಮೈಸೂರುಗಳಲ್ಲಿ ನಡೆಸಲಾಗುವುದು ಎಂದು ತಿಳಿಸಿದರು.

ದೈವಜ್ಞ ಬ್ರಾಹ್ಮಣ ಸಮಾಜದ ಅಧ್ಯಕ್ಷ ಉಲ್ಲಾಸ್ ಶೇಟ್ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಸೌಮ್ಯ ನಾಗೇಶ್ ನಿರೂಪಿಸಿದರೆ, ಬ್ರಾಹ್ಮಣ ಸಮಾಜದ ಕಾರ್ಯದರ್ಶಿ ರಾಜೇಶ್ ಆರ್.ಶೇಟ್ ವಂದಿಸಿದರು. ಮೊದಲಿಗೆ ಪ್ರೇಮಾ ವೆಂಕಟೇಶ್ ತಂಡ ಪ್ರಾರ್ಥಿಸಿದರು.ಇದಕ್ಕೂ ಮೊದಲು ಪೂರ್ಣಕುಂಭದೊಂದಿಗೆ ಸ್ವಾಮೀಜಿಯವರನ್ನು ಬರಮಾಡಿಕೊಳ್ಳಲಾಯಿತು. ಪಟ್ಟಣದ ಚಿತ್ರಕೆರೆ ಬಳಿಯ ಶ್ರೀ ಆಂಜನೇಯ ಸ್ವಾಮಿ ದೇವಾಲಯದಿಂದ ಸಮಾಜದವರೆಗೂ ಮುಖ್ಯ ರಸ್ತೆಯಲ್ಲಿ ಬೈಕ್ ಜಾಥ ನಡೆಸಲಾಯಿತು.

ರಾಜ್ಯ ಸರ್ಕಾರದ ವಜಾಕ್ಕೆ ಆಗ್ರಹಿಸಿ, ಜಿಲ್ಲಾ ಬಿಜೆಪಿ ಪ್ರತಿಭಟನೆ

ಮಡಿಕೇರಿ, ಜ.9–ರಾಜ್ಯದಲ್ಲಿ ಮಹಿಳೆಯರಿಗೆ ರಕ್ಷಣೆ ಇಲ್ಲದಂತಹ ಪರಿಸ್ಥಿತಿ ನಿರ್ಮಾಣ ಮಾಡಿರುವ ರಾಜ್ಯ ಸರ್ಕಾರವನ್ನು ವಜಾಗೊಳಿಸುವಂತೆ ಆಗ್ರಹಿಸಿ, ಜಿಲ್ಲಾ ಬಿಜೆಪಿ ನಗರದ ಜಿಲ್ಲಾಡಳಿತ ಭವನದ ಮುಂಭಾಗ ಪ್ರತಿಭಟನೆ ನಡೆಸಿತು.


ರಾಜ್ಯ ಸರ್ಕಾರದ ವಜಾಕ್ಕೆ ಆಗ್ರಹಿಸಿ, ಜಿಲ್ಲಾ ಬಿಜೆಪಿ ನಗರ ವತಿಯಿಂದ ಜಿಲ್ಲಾಡಳಿತ ಭವನದ ಮುಂಭಾಗ ಪ್ರತಿಭಟನೆ ನಡೆಸಲಾಯಿತು.

ವಿಧಾನಸಭಾ ಮಾಜಿ ಅಧ್ಯಕ್ಷ ಕೆ.ಜಿ. ಬೋಪಯ್ಯ, ಮಾಜಿ ಶಾಸಕ ಸುನಿಲ್ ಸುಬ್ರಮಣಿ, ಜಿಲ್ಲಾ ಬಿಜೆಪಿ ಅಧ್ಯಕ್ಷ ನಾಪಂಡ ರವಿ ಕಾಳಪ್ಪ ನೇತೃತ್ವದಲ್ಲಿ ಜಿಲ್ಲಾಡಳಿತ ಭವನದ ಮುಂಭಾಗ ಪದಾಧಿಕಾರಿಗಳು, ಕಾರ್ಯಕರ್ತರೊಂದಿಗೆ ಸಮಾವೇಶಗೊಂಡು, ರಾಜ್ಯ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುವ ಮೂಲಕ ಆಕ್ರೋಶ ವ್ಯಕ್ತಪಡಿಸಿದರು.

ಜಿಲ್ಲಾ ಬಿಜೆಪಿ ಅಧ್ಯಕ್ಷ ನಾಪಂಡ ರವಿ ಕಾಳಪ್ಪ ಮಾತನಾಡಿ, ಕಾಂಗ್ರೆಸ್ ಸರ್ಕಾರದ ಆಡಳಿತದಲ್ಲಿ ಮಹಿಳೆಯರಿಗೆ ಸೂಕ್ತ ರಕ್ಷಣೆಯೇ ಇಲ್ಲದಂತಾಗಿದೆ. ಸುಳ್ಯ ಶಾಸಕಿ ಭಾಗೀರಥಿ ಮುರುಳ್ಯ ಅವರ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ 'ಶ್ರದ್ಧಾಂಜಲಿ' ಪೋಸ್ಟ್ ಹಾಕಿ ಅವಮಾನಿಸಲಾಗಿದೆ. ಇದೇ ರೀತಿಯಲ್ಲಿ ಹುಬ್ಬಳ್ಳಿಯಲ್ಲಿ ಬಿಜೆಪಿ ಕಾರ್ಯಕರ್ತೆ ಸುಜಾತ ಹಂಡಿ ಅವರನ್ನು ಬಂಧಿಸಿ ವಿವಸ್ತ್ರಗೊಳಿಸಿ ಹಲ್ಲೆ ಮಾಡಲಾಗಿದೆ. ಅಲ್ಲಿನ ಕಾರ್ಪೋರೇಟರ್ ನೀಡಿದ ದೂರನ್ನೇ ಆಧರಿಸಿ ಪೊಲೀಸರು ಮಹಿಳೆಯ ಮೇಲೆ ದರ್ಪ ತೋರಿರುವವರ ವಿರುದ್ಧ ಕಠಿಣ ಕ್ರಮಗಳನ್ನು ಕೈಗೊಳ್ಳಬೇಕೆಂದು ಒತ್ತಾಯಿಸಿದರು. ಈ ರೀತಿಯ ಘಟನೆಗಳಿಗೆ ಕಾಂಗ್ರೆಸ್ ಸರಕಾರದ ದುರಾಡಳಿತ ಕಾರಣವಾಗಿದೆ. ರಾಜ್ಯಪಾಲರು ತಕ್ಷಣವೇ ಸರ್ಕಾರವನ್ನು ವಜಾಗೊಳಿಸಬೇಕೆಂದು ಒತ್ತಾಯಿಸಿದರು.

ವಿಧಾನಸಭಾ ಮಾಜಿ ಅಧ್ಯಕ್ಷ ಕೆ.ಜಿ. ಬೋಪಯ್ಯ ಮಾತನಾಡಿ, ರಾಜ್ಯದಲ್ಲಿ ನಡೆಯುತ್ತಿರುವ ಇಂತಹ ಘಟನೆಗಳು ನಾಗರಿಕ ಸಮಾಜವನ್ನು ತಲೆ ತಗ್ಗಿಸುವಂತೆ ಮಾಡಿದೆ. ಉತ್ತಮ ಆಡಳಿತ, ಉತ್ತಮ ಸಂಸ್ಕಾರವನ್ನು ಇಂದಿನ ಕಾಂಗ್ರೆಸ್ ಸರ್ಕಾರದಿಂದ ನಿರೀಕ್ಷೆ ಮಾಡಲು ಸಾಧ್ಯವಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ರಾಜ್ಯದಲ್ಲಿ ಎರಡೂವರೆ ವರ್ಷಗಳ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ದುರಾಡಳಿತ ಮಿತಿ ಮೀರಿದ್ದು, ಪೊಲೀಸ್ ಠಾಣೆಗಳು ಕಾಂಗ್ರೆಸ್ ಕಚೇರಿಗಳಾಗಿವೆ ಎಂದು ಆರೋಪಿಸಿದರು. ಹುಬ್ಬಳ್ಳಿ ಪ್ರಕರಣದಲ್ಲಿ ದೌರ್ಜನ್ಯಕ್ಕೆ ಒಳಗಾಗಿರುವ ಸುಜಾತಳಿಗೆ ಕನಿಷ್ಠ ನ್ಯಾಯ ದೊರಕಿಸಿಕೊಡುವ ನಿಟ್ಟಿನಲ್ಲಿ ರಾಜ್ಯ ಮಹಿಳಾ ಆಯೋಗ ಏನು ಮಾಡಿದೆ ಎಂದು ಪ್ರಶ್ನಿಸಿದರು.

ಪ್ರತಿಭಟನೆಯಲ್ಲಿ ಪಕ್ಷದ ಪ್ರಮುಖರಾದ ರಾಬಿನ್ ದೇವಯ್ಯ, ಶಾಂತೆಯಂಡ ರವಿ ಕುಶಾಲಪ್ಪ, ವಿ.ಕೆ.ಲೋಕೇಶ್, ಅನಿತಾ ಪೂವಯ್ಯ, ಮಹೇಶ್ ಜೈನಿ, ಕೋಡಿ ಪೊನ್ನಪ್ಪ, ನಾಗೇಶ್ ಕುಂದಲ್ಪಾಡಿ, ಬಿ.ಕೆ. ಅರುಣ್ ಕುಮಾರ್, ಬಿ.ಕೆ.ಜಗದೀಶ್, ಉಮಾ ಪ್ರಭು, ಸವಿತಾ ರಾಕೇಶ್, ಕನ್ನಿಕೆ, ಶ್ವೇತಾ ಪ್ರಶಾಂತ್, ಅರುಣ್ ಶೆಟ್ಟಿ, ಕನ್ನಂಡ ಸಂಪತ್, ಬಿ.ಪಿ.ಡಿಶು, ಬೊಳ್ಳಜಿರ ಅಯ್ಯಪ್ಪ, ನೆಲ್ಲೀರ ಚಲನ್, ಆರ್.ಕೆ. ಚಂದ್ರು ಮತ್ತಿತರರು ಪಾಲ್ಗೊಂಡಿದ್ದರು.


ಒತ್ತಾಯ: ಪ್ರತಿಭಟನಾಕಾರರಿಂದ ಮನವಿ ಸ್ವೀಕರಿಸಲು ಎಡಿಸಿ ಐಶ್ವರ್ಯ ಬಂದಾಗ ಪ್ರತಿಭಟನಾಕಾರರ ಜಿಲ್ಲಾಧಿಕಾರಿಗಳೇ ಬಂದು ಮನವಿ ಸ್ವೀಕರಿಸಲಿ ಎಂದು ಒತ್ತಾಯಿಸಿದರು. ಕೊನೆಗೆ ಜಿಲ್ಲಾಧಿಕಾರಿ ಸೋಮಶೇಖರ್‌ರವರೇ ಬಂದು ಮನವಿ ಸ್ವೀಕರಿಸಿದರು.

ಕೊರಗಜ್ಜ ದೈವಸ್ಥಾನದಲ್ಲಿ 7ನೇ ವರ್ಷದ ಗಗ್ಗರ ಸೇವೆ

ಮಡಿಕೇರಿ: ಸುಂಟಿಕೊಪ್ಪದ ಮಂಜಿಕೆರೆ ಶ್ರೀ ಸ್ವಾಮಿ ಕೊರಗಜ್ಜ ದೈವಸ್ಥಾನದಲ್ಲಿ 7ನೇ ವರ್ಷದ ಗಗ್ಗರ ಸೇವೆ(ಕೋಲ) ಜ.18ರಂದು ಸಂಜೆ 6 ಗಂಟೆಯ ನಂತರ ನಡೆಯಲಿದೆ. ಹೆಚ್ಚಿನ ಮಾಹಿತಿಗೆ ಎಂ.ಎ. ಮಹೇಶ್ ಮೊಬೈಲ್ ಸಂಖ್ಯೆ 87623 04217 ಅನ್ನು ಸಂಪರ್ಕಿಸಬಹುದಾಗಿದೆ.

ರಸ್ತೆಯಲ್ಲೇ ಓಡಾಡಿದ ಕಾಡಾನೆ

ನಾಪೋಕ್ಲು, ಜ.9(ದುಗ್ಗಳ)–ಮಟ ಮಟ ಮಧ್ಯಾಹ್ನದ ಸಮಯದಲ್ಲೇ ಕಾಡಾನೆ ಮುಖ್ಯರಸ್ತೆ, ತೋಟಗಳಲ್ಲಿ ಓಡಾಡಿದ್ದರಿಂದಾಗಿ ಗ್ರಾಮಸ್ಥರು ಆತಂಕಕ್ಕೊಳಗಾದ ಘಟನೆ ಶುಕ್ರವಾರ ಮರ ದೋಡ ಗ್ರಾಮದಲ್ಲಿ ನಡೆದಿದೆ.


ನೀಡುಮಂಡ ಸೇತುವೆಯ ಮೇಲೆ ಓಡಾಡಿದ ಕಾಡಾನೆ.

ಸಮೀಪದ ಕಕ್ಕಬ್ಬೆ ಗ್ರಾಮ ಪಂಚಾಯಿತಿಗೆ ಒಳಪಟ್ಟ ಗ್ರಾಮಗಳಲ್ಲಿ ನಿರಂತರ ಕಾಡಾನೆಗಳ ಹಾವಳಿ ಅಧಿಕವಾಗಿದ್ದು, ಕಾಫಿ ತೋಟ, ಗದ್ದೆಗಳಿಗೆ ರಾತ್ರಿ ವೇಳೆಯಲ್ಲಿ ಲಗ್ಗೆ ಇಟ್ಟ ಕಾಡಾನೆಗಳು ಕೃಷಿ ಗಿಡಗಳು ಹಾಗೂ ಬೆಳೆಗಳನ್ನು ಧ್ವಂಸಗೊಳಿಸಿ ಬಹಳಷ್ಟು ನಷ್ಟ ಮಾಡಿದ್ದು, ಇದರಿಂದ ಗ್ರಾಮಸ್ಥರು ಹೈರಾಣವಾಗಿದ್ದಾರೆ. ಆದರೆ ಇದೀಗ ಮಟ ಮಟ ಮಧ್ಯಾಹ್ನವೇ ಕಾಡಾನೆಯೊಂದು ನಾಪೋಕ್ಲು, ಕಕ್ಕಬ್ಬೆ, ವಿರಾಜಪೇಟೆ ಮುಖ್ಯ ರಸ್ತೆಯ ಮರಂದೋಡ ಗ್ರಾಮದ ನೀಡುಮಂಡ ಸೇತುವೆಯ ಮೇಲೆ ಓಡಾಡುತ್ತಿರುವ ದೃಶ್ಯ ಸಿಸಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಇದರಿಂದ ತೋಟಗಳಲ್ಲಿ ಕಾಫಿ ಕೊಯ್ಲಿನಲ್ಲಿ ತೊಡಗಿದ್ದ ಕಾರ್ಮಿಕರು ಹಾಗೂ ಗ್ರಾಮಸ್ಥರು ಚೆಲ್ಲಾಪಿಲ್ಲಿಯಾಗಿ ಓಡಿ ಜೀವಾಪಾಯದಿಂದ ಪಾರಾಗಿದ್ದಾರೆ. ಇದರಿಂದಾಗಿ ಗ್ರಾಮಸ್ಥರು ಮನೆಯಿಂದ ಹೊರಬರಲು ಭಯಭೀತರಾಗಿದ್ದು, ಕೂಡಲೇ ಅರಣ್ಯ ಇಲಾಖೆ, ಜನಪ್ರತಿನಿಧಿಗಳು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಜ.13 ರಿಂದ ಬೈತೂರು ಉತ್ಸವ

ವಿರಾಜಪೇಟೆ: ಕೇರಳದ ಉಳಿಕಲ್‌ನಲ್ಲಿರುವ ಶ್ರೀ ಆದಿ ಬೈತೂರ್ ಕಾಲಿಯಾರ್ ದೇವಸ್ಥಾನದ ವಾರ್ಷಿಕ ಉತ್ಸವ ಜ.13 ರಿಂದ 26ರವರೆಗೆ ನಡೆಯಲಿದೆ. ಹಬ್ಬಕ್ಕೆ ಬರುವ ಭಕ್ತಾದಿಗಳು ಕೊಡಗಿನ ಸಾಂಪ್ರದಾಯಿಕ ಉಡುಪಿನೊಂದಿಗೆ ಬರಬೇಕೆಂದು ಹೇಳಿದ್ದಾರೆ. ಹಬ್ಬದ ಸಮಯದಲ್ಲಿ ಅನ್ನದಾನಕ್ಕೆ ಭಕ್ತಾದಿಗಳಿಂದ ಅಕ್ಕಿ, ತರಕಾರಿ, ಬೆಲ್ಲ, ತೆಂಗಿನಕಾಯಿ ಮತ್ತಿತರೆ ಸಾಮಾಗ್ರಿಗಳನ್ನು ಜ. 10ರ ನಂತರ ನೀಡಬಹುದು.

ನಾಳೆ ವಿದ್ಯಾ ಇಲಾಖಾ ನೌಕರರ ಪತ್ತಿನ ಸೌಹಾರ್ದ ಸಹಕಾರಿ ಸಂಘದ ಶತಮಾನೋತ್ಸವ

ಮಡಿಕೇರಿ,ಜ.9–ವಿದ್ಯಾ ಇಲಾಖಾ ನೌಕರರ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿಯಮಿತದ ಶತಮಾನೋತ್ಸವ ಸಮಾರಂಭ ಜ.11ರಂದು ನಗರದ ಗೌಡ ಸಮಾಜದಲ್ಲಿ ನಡೆಯಲಿದೆ ಎಂದು ಸಂಘದ ಅಧ್ಯಕ್ಷ ಹೆಚ್.ಎಸ್.ಚೇತನ್ ತಿಳಿಸಿದ್ದಾರೆ.



ವಿದ್ಯಾ ಇಲಾಖಾ ನೌಕರರ ಪತ್ತಿನ ಸೌಹಾರ್ದ ಸಹಕಾರಿ ಸಂಘದ ಅಧ್ಯಕ್ಷ ಹೆಚ್.ಎಸ್.ಚೇತನ್ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದರು.


ಸಹಕಾರಿ ಸಂಘದ ಶತಮಾನೋತ್ಸವವನ್ನು ಬೆಳಿಗ್ಗೆ 10.30 ಗಂಟೆಗೆ ಶಾಸಕ ಎ.ಎಸ್.ಪೊನ್ನಣ್ಣ ಉದ್ಘಾಟಿಸಲಿದ್ದಾರೆ. ಬೆಳಿಗ್ಗೆ 9.30 ಗಂಟೆಗೆ ಗುರುಸದನದಲ್ಲಿ ಶಿಕ್ಷಣ ಸಚಿವ ಮಧು ಬಂಗಾರಪ್ಪ ಶತಸಂಭ್ರಮ ಭವನ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸುವರು. ಉದ್ದೇಶಿತ ಶತಸಂಭ್ರಮ ಕಟ್ಟಡದ ನಕಾಶೆಯನ್ನು ಸಂಸದ ಯದುವೀರ್ ಅನಾವರಣಗೊಳಿಸಲಿದ್ದಾರೆ ಎಂದು ಸುದ್ದಿಗೋಷ್ಠಿಯಲ್ಲಿ ಹೇಳಿದರು.

ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಅಧ್ಯಕ್ಷ ಜಿ.ನಂಜನಗೌಡ ಬೆಳಿಗ್ಗೆ ಧ್ವಜಾರೋಹಣ ಮಾಡಲಿದ್ದಾರೆ. ಶಾಸಕ ಡಾ. ಮಂತರ್‌ಗೌಡ ಸ್ಮರಣ ಸಂಚಿಕೆ ಬಿಡುಗಡೆ, ಕ್ಯಾಲೆಂಡರ್ ಮತ್ತು ಉಡುಗೊರೆ ಅನಾವರಣ ಮಾಡುವರು. ವಿಧಾನಪರಿಷತ್ ಸದಸ್ಯರಾದ ಎಂ.ಪಿ.ಸುಜಾ ಕುಶಾಲಪ್ಪ, ಎಸ್.ಎಲ್. ಭೋಜೇಗೌಡ, ಧನಂಜಯ ಸರ್ಜಿ, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಅಧ್ಯಕ್ಷ ಕೊಡಂದೇರ ಬಾಂಡ್ ಗಣಪತಿ, ಜಿ.ಪಂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಆನಂದ್ ಪ್ರಕಾಶ್ ಮೀನಾ, ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ರಾಜ್ಯಾಧ್ಯಕ್ಷ ಚಂದ್ರಶೇಖರ ನುಗ್ಲಿ, ಗೌರವಾಧ್ಯಕ್ಷ ನಾಗೇಶ್ ಕೆ, ಜಿಲ್ಲಾ ಸಹಕಾರಿ ಸಂಘಗಳ ಉಪನಿಬಂಧಕ ಹೆಚ್.ಡಿ.ರವಿಕುಮಾರ್, ನಿವೃತ್ತ ಪ್ರಾಂಶುಪಾಲ ಪಟ್ಟಡ ಎ.ಪೂವಣ್ಣ ಹಾಗೂ ಮಂಗಳೂರಿನ ಕೆಐಒಸಿಎಲ್ ಲಿಮಿಟೆಡ್‌ನ ಡೆಪ್ಯೂಟಿ ಜನರಲ್ ಮ್ಯಾನೇಜರ್ ತೇಲಪಂಡ ಎಂ.ಕಾರ್ಯಪ್ಪ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ ಎಂದರು.

100 ಸಹಕಾರಿಗಳಿಗೆ ಸನ್ಮಾನ: 100 ಹಿರಿಯ ಸಹಕಾರಿಗಳನ್ನು ಸನ್ಮಾನಿಸಲಾಗುವುದು. ಶತಸಂಭ್ರಮ ಕಾರ್ಯಕ್ರಮದಲ್ಲಿ ಭಾಗವಹಿಸುವ ಎಲ್ಲಾ ಸದಸ್ಯರಿಗೆ ಉಡುಗೊರೆ ನೀಡಲಾಗುವುದು. ಕ್ರೀಡಾ ಮತ್ತು ಸಾಂಸ್ಕೃತಿಕ ಸ್ಪರ್ಧಾ ವಿಜೇತರಿಗೆ ಬಹುಮಾನ ವಿತರಿಸಲಾಗುವುದು. ಸಂಘದ ಸ್ಥಾಪಕ ಕಾರ್ಯದರ್ಶಿ ತೇಲಂಪಡ ಎಂ.ಕಾರ್ಯಪ್ಪ ಹಾಗೂ ಸ್ಥಾಪಕ ಅಧ್ಯಕ್ಷ ಪಟ್ಟಡ ಎಂ.ಉತ್ತಪ್ಪ ಕುಟುಂಬದವರನ್ನು ಸನ್ಮಾನಿಸಲಾಗುವುದು ಎಂದರು

ಪ್ಲೈವುಡ್ ಶೀಟ್‌ಗಳನ್ನು ಸಾಗಿಸುತ್ತಿದ್ದ ಲಾರಿಗೆ ಆಕಸ್ಮಿಕ ಬೆಂಕಿ

ಮಡಿಕೇರಿ,ಜ.9–ಮೈಸೂರಿನಿಂದ–ಮಂಗಳೂರು ಕಡೆಗೆ ಪ್ಲೈವುಡ್ ಶೀಟ್‌ಗಳನ್ನು ಸಾಗಿಸುತ್ತಿದ್ದ ಲಾರಿ ಬೆಂಕಿ ಅವಘಡದಿಂದ ಸಂಪೂರ್ಣ ಸುಟ್ಟು ಕರಕಲಾದ ಘಟನೆ ದೇವರಕೊಲ್ಲಿ ಬಳಿ ಬೆಳಗಿನ ಜಾವ ನಡೆದಿದೆ.



ಲಾರಿ ಮೈಸೂರಿನಿಂದ ಮಡಿಕೇರಿ–ಮಾಣಿ ರಾಷ್ಟ್ರೀಯ ಹೆದ್ದಾರಿ 275ರ ದೇವರಕೊಲ್ಲಿ ಬಳಿ ಬೆಳಗಿನ ಜಾವ ಹೋಗುತ್ತಿದ್ದಾಗ ಇಂಜಿನ್ ಭಾಗದಿಂದ ಹೊಗೆ ಕಂಡು ಬಂದಿದೆ. ಚಾಲಕ ಕೆಳಗಿಳಿದು ಪರಿಶೀಲಿಸುತ್ತಿದ್ದಾಗಲೇ ಬೆಂಕಿ ಕಾಣಿಸಿಕೊಂಡು, ಸಂಪೂರ್ಣ ವ್ಯಾಪಿಸಿ ಲಾರಿ ಯನ್ನು ಆಪೋಷನ ಪಡೆದಿದೆ. ಸ್ಥಳಕ್ಕೆ ಆಗಮಿಸಿದ ಅಗ್ನಿಶಾಮಕ ದಳದ ಸಿಬ್ಬಂದಿಗಳು ಬೆಂಕಿ ನಂದಿಸುವ ಪ್ರಯತ್ನ ನಡೆಸಿದರು. ಪ್ಲೈವುಡ್‌ಗೆ ಬೆಂಕಿ ವ್ಯಾಪಿಸಿದ್ದ ಹಿನ್ನೆಲೆಯಲ್ಲಿ ಜೆಸಿಬಿ ಯಂತ್ರ ಬಳಸಿ ಲಾರಿಯಿಂದ ಪ್ಲೈವುಡ್ ಹೊರ ತೆಗೆದು ಬೆಂಕಿ ನಂದಿಸಿದರು. ಗ್ರಾಮಾಂತರ ಪೊಲೀಸರು ಪ್ರಕರಣ ದಾಖಲಿಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ.

ಕೂಡ್ಲೂರು ಕೆ.ಕೆ.ಮೂರ್ತಿ ನಿಧನ



ಕುಶಾಲನಗರ, ಜ.9–ಸಮೀಪದ ಕೂಡ್ಲೂರು ಗ್ರಾಮದ ನಿವೃತ್ತ ಶಿಕ್ಷಕ ಕೃಷ್ಣೇಗೌಡರ ದ್ವಿತೀಯ ಪುತ್ರ ಕೆ.ಕೆ.ಮೂರ್ತಿ (49) ಶುಕ್ರವಾರ ಅನಾರೋಗ್ಯದಿಂದ ನಿಧನರಾಗಿದ್ದಾರೆ. ಮೃತರು ಪತ್ನಿ ಮತ್ತು ಇಬ್ಬರು ಮಕ್ಕಳು, ಸಹೋದರ ಜಿಲ್ಲಾ ಕಾಂಗ್ರೆಸ್ ಮಾಜಿ ಅಧ್ಯಕ್ಷ ಕೆ. ಕೆ. ಮಂಜುನಾಥ್ ಕುಮಾರ್ ಹಾಗೂ ಅಪಾರ ಬಂಧು ಬಾಂಧವರನ್ನು ಅಗಲಿದ್ದಾರೆ. ಮೃತರ ಅಂತ್ಯ ಸಂಸ್ಕಾರವು ಶುಕ್ರವಾರ ಸಂಜೆ ಕೂಡ್ಲೂರಿನ ಹಳ್ಳಿಮನೆ ಬಳಿಯ ಅವರ ಜಮೀನಿನಲ್ಲಿ ನಡೆಯಿತು.

ಭೋವಿ ನಿಗಮದ ಅಧ್ಯಕ್ಷರಿಂದ ಯೋಜನೆಗಳ ಪ್ರಗತಿ ಪರಿಶೀಲನೆ

ಚಾಮರಾಜನಗರ, ಜ.9– ಕರ್ನಾಟಕ ಭೋವಿ ಅಭಿ ವೃದ್ಧಿ ನಿಗಮದ ಅಧ್ಯಕ್ಷ ಎಂ.ರಾಮಪ್ಪ ಅವರು ಶುಕ್ರವಾರ ನಗರದಲ್ಲಿ ಭೋವಿ ನಿಗಮದ ಮೂಲಕ ಜಾರಿಗೊಳಿಸಿರುವ ವಿವಿಧ ಯೋಜನೆಗಳ ಪ್ರಗತಿ ಪರಿಶೀಲಿಸಿದರು.


ಸಭೆಯಲ್ಲಿ ನಿಗಮದ ಅಧ್ಯಕ್ಷ ಎಂ.ರಾಮಪ್ಪ ಮಾತನಾಡಿದರು.

> “ತಳ ಸಮುದಾಯ ಮೇಲೆತ್ತುವ ಜವಾಬ್ದಾರಿಯನ್ನು ಸರ್ಕಾರವು ನಿಗಮಕ್ಕೆ ನೀಡಿದೆ. ಈ ನಿಟ್ಟಿನಲ್ಲಿ ನಿಗಮದ ಅಧಿಕಾರಿಗಳು ತಮ್ಮ ಚೌಕಟ್ಟಿನೊಳಗೆ ಕಾರ್ಯ ನಿರ್ವಹಿಸಲು ಕಾರ್ಯೋನ್ಮುಖರಾಗಬೇಕು. ಫಲಾನುಭವಿಗಳ ಆಯ್ಕೆಯಲ್ಲಿ ಪಾರದರ್ಶಕತೆ ಕಾಪಾಡಿಕೊಳ್ಳಬೇಕು. ಪ್ರತಿ ಇಲಾಖೆ ಬದಲಿ ಯೋಜನೆಗಳನ್ನು ಹೆಚ್ಚುವರಿಯಾಗಿ ರೂಪಿಸಿಕೊಳ್ಳಬೇಕು. ಮಹಿಳಾ ಸಬಲೀಕರಣಕ್ಕಾಗಿ ಮಹಿಳಾ ಸ್ವಸಹಾಯ ಸಂಘಗಳನ್ನು ನೋಂದಣಿ ಮಾಡಿಸಬೇಕು. ಬ್ಯಾಂಕ್‌ಗಳು ಯಾವುದೇ ದಾಖಲೆ ನೆಪವೊಡ್ಡಿ ಸಾಲ ನೀಡಲು ನಿರ್ಲಕ್ಷ್ಯ ವಹಿಸದೇ ಸಮುದಾಯಕ್ಕೆ ನೆರವಾಗಬೇಕು. ಸಮುದಾಯದ ಆರ್ಥಿಕ ಸದೃಢತೆಗೆ ಯೋಜನೆಗಳ ಸೌಲಭ್ಯಗಳನ್ನು ತಲುಪಿಸಿ.
> – ಎಂ.ರಾಮಪ್ಪ, ಭೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷ

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಜಿಲ್ಲಾಮಟ್ಟದ ಅಧಿಕಾರಿಗಳು ಹಾಗೂ ಸಮುದಾಯದ ಮುಖಂಡರ ಸಮ್ಮುಖದಲ್ಲಿ ನಡೆದ ಸಭೆಯಲ್ಲಿ ಜಿಲ್ಲೆಯಲ್ಲಿ ಭೋವಿ ಸಮುದಾಯದ ಅಭಿವೃದ್ಧಿಗೆ ಅನುಷ್ಠಾನಗೊಳಿಸಿರುವ ವಿವಿಧ ಯೋಜನೆಗಳ ಪ್ರಗತಿ ಪರಿಶೀಲಿಸಿದರು.

ನಿಗಮದ ಅಧ್ಯಕ್ಷ ಎಂ.ರಾಮಪ್ಪ ಮಾತನಾಡಿ, ಭೋವಿಗಳು, ವಡ್ಡರು ಸಮಾಜದಲ್ಲಿ ಆರ್ಥಿಕವಾಗಿ ಸ್ಥಿತಿವಂತರಲ್ಲ. ಸರ್ಕಾರದ ಯೋಜನೆಗಳನ್ನು ಅಧಿಕಾರಿಗಳು ಜವಾಬ್ದಾರಿಯುತವಾಗಿ ತಲುಪಿಸಿದರೆ ಮಾತ್ರ ಸಮುದಾಯ ಬಡತನದಿಂದ ಹೊರಬರಲು ಸಾಧ್ಯವಾಗಲಿದೆ ಎಂದರು.

ಸಿಎಂ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರ ಸಮುದಾಯದ ಅಭಿವೃದ್ಧಿಗಾಗಿ ಸ್ವಯಂ ಉದ್ಯೋಗ ನೇರ ಸಾಲ, ಉದ್ಯಮಶೀಲತಾ ಯೋಜನೆ, ಹೈನುಗಾರಿಕೆ, ಕುರಿ, ಮೇಕೆ ಸಾಕಣೆಗೆ ಸಾಲ, ಸ್ವಾವಲಂಬಿ ಸಾರಥಿ ಗಂಗಾ ಕಲ್ಯಾಣ, ಭೂ ಒಡೆತನ ಸೇರಿದಂತೆ ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸಿದೆ. ಆಯಾ ಜಿಲ್ಲೆಯ ಸಮುದಾಯದ ಜನಸಂಖ್ಯೆಗನುಗುಣವಾಗಿ ಯೋಜನೆಗಳ ಗುರಿಯನ್ನು ಸರ್ಕಾರ ನಿಗದಿಗೊಳಿಸಿದೆ ಯೋಜನೆಗಳನ್ನು ಫಲಾನು ಭವಿಗಳಿಗೆ ಸಮರ್ಪಕವಾಗಿ ತಲುಪಿಸಲು ಮುಂದಾ ಗುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಸಮುದಾಯದ ಜನರು ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಬೇಕು. ಮಕ್ಕಳ ಶಿಕ್ಷಣಕ್ಕೆ ಪೂರಕ ವಾತಾವರಣ ಸರ್ಕಾರ ಕಲ್ಪಿಸಿದೆ ಹಾಸ್ಟಲ್ ವ್ಯವಸ್ಥೆ, ವಸತಿ ಶಾಲೆಗಳು, ವಿದ್ಯಾರ್ಥಿ ವೇತನ ಸೌಲಭ್ಯಗಳನ್ನು ಪಡೆಯುವ ಅವಕಾಶವಿದೆ. ಪ್ರತಿಭೆ ಯಾರ ಸ್ವತ್ತು ಅಲ್ಲ. ಈ ನಿಟ್ಟಿನಲ್ಲಿ ಯಾರು ಸಹ ಮಕ್ಕಳನ್ನು ಶಿಕ್ಷಣದಿಂದ ವಂಚಿತರನ್ನಾಗಿ ಮಾಡಬಾರದು. ಅಂಬೇಡ್ಕರ್ ಹೇಳಿದಂತೆ ಶಿಕ್ಷಣ, ಸಂಘಟನೆ, ಹೋರಾಟ ಗುಣಗಳನ್ನು ಮೈಗೂಡಿಸಿಕೊಳ್ಳಬೇಕು ಎಂದರು.

ನಿಗಮದ ವ್ಯವಸ್ಥಾಪಕ ನಿರ್ದೇಶಕ ಚಂದ್ರಾನಾಯಕ್ ಮಾತನಾಡಿದರು. ಎಡಿಸಿ ಟಿ.ಜವರೇಗೌಡ, ಜಿಪಂ ಉಪಕಾರ್ಯದರ್ಶಿ ಶೃತಿ, ಭೋವಿ ನಿಗಮದ ಜಿಲ್ಲಾ ವ್ಯವಸ್ಥಾಪಕ ರಾಜು, ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕ ಮುನಿರಾಜು, ಡಿಹೆಚ್‌ಓ ಡಾ.ಎಸ್. ಚಿದಂಬರ, ಸಮುದಾಯದ ಮುಖಂಡರು, ಇತರರು ಸಭೆಯಲ್ಲಿ ಉಪಸ್ಥಿತರಿದ್ದರು.

ಸಭೆ ಬಳಿಕ ಸಮುದಾಯದ ಮುಖಂಡರಿಂದ ಸಮಸ್ಯೆ, ಅಹವಾಲುಗಳನ್ನು ನಿಗಮದ ಅಧ್ಯಕ್ಷ ಎಂ.ರಾಮಪ್ಪ ಆಲಿಸಿದರು. ಭೂಮಿ, ಸಮಸ್ಯೆ, ಸ್ಮಶಾನಕ್ಕೆ ಜಾಗ ಮಂಜೂರು, ಬಸ್ ಸೌಲಭ್ಯ ಮತ್ತಿತರೆ ಸಮಸ್ಯೆಗಳು ಮುಖಂಡರಿಂದ ಸಲ್ಲಿಕೆಯಾದವು.

ಬನಶಂಕರ ಆರಾಧ್ಯರಿಗೆ ಮಾಧ್ಯಮ ಅಕಾಡೆಮಿ ಪ್ರಶಸ್ತಿ

ಚಾಮರಾಜನಗರ, ಜ.9– ಜಿಲ್ಲೆಯ ಹಿರಿಯ ವರದಿಗಾರ ಕೆ.ಎಸ್.ಬನಶಂಕರ ಆರಾಧ್ಯ ಅವರು ಕರ್ನಾಟಕ ಮಾಧ್ಯಮ ಅಕಾಡೆಮಿ ಪ್ರಶಸ್ತಿಗೆ ಭಾಜನರಾಗಿದ್ದಾರೆ.


ಬನಶಂಕರ

ಕಳೆದ 30 ವರ್ಷಗಳಿಂದ ನಾನಾ ಪತ್ರಿಕೆ ಹಾಗೂ ಟಿವಿ ಮಾಧ್ಯಮದಲ್ಲಿ ಸೇವೆ ಸಲ್ಲಿಸಿರುವ ಬನಶಂಕರ ಆರಾಧ್ಯರಿಗೆ 2025ನೇ ಸಾಲಿನ ಪ್ರಶಸ್ತಿ ಘೋಷಿಸಲಾಗಿದೆ.

ಕನ್ನಡದಲ್ಲಿ ಸ್ನಾತಕೋತ್ತರ ಪದವೀಧರರಾದ ಅವರು, ಆಂದೋಲನ, ಸೂರ್ಯೋದಯ ಪತ್ರಿಕೆ ಹಾಗೂ ಟಿವಿ 9 ಚಾಮರಾಜನಗರ ಜಿಲ್ಲಾ ವರದಿಗಾರರಾಗಿದ್ದರು. ಇದೀಗ ಕಳೆದ 14 ವರ್ಷಗಳಿಂದ ಉದಯವಾಣಿ ಜಿಲ್ಲಾ ವರದಿಗಾರರಾಗಿದ್ದಾರೆ. ನರಹಂತಕ ವೀರಪ್ಪನ್ ಕಾರ್ಯಾಚರಣೆಯ ಪ್ರಮುಖ ಘಟನೆಗಳ ವರದಿ, ಡಾ.ರಾಜ್ ಹಾಗೂ ಮಾಜಿ ಸಚಿವ ಹೆಚ್.ನಾಗಪ್ಪ ಅಪಹರಣ ಸಂದರ್ಭದಲ್ಲಿನ ವರದಿಗಳನ್ನು ಮಾಡಿದ್ದರು. ಕೋವಿಡ್ ವೇಳೆ ನಗರದಲ್ಲಿ ನಡೆದ ಆಕ್ಸಿಜನ್ ದುರಂತದ ಸುದ್ದಿಗಳನ್ನು ಎಳೆಎಳೆಯಾಗಿ ಕಟ್ಟಿಕೊಟ್ಟಿದ್ದರು.

ಇವರಿಗೆ ಈ ಹಿಂದೆ ಚಾಮರಾಜ ನಗರ ಜಿಲ್ಲಾಡಳಿತದಿಂದ ರಾಜ್ಯೋತ್ಸವ ಪ್ರಶಸ್ತಿ, ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದಿಂದ ಸೇವೆಗಾಗಿ 2014ರಲ್ಲಿ ವಾರ್ಷಿಕ ಪ್ರಶಸ್ತಿ, 2017ರಲ್ಲಿ ಚಾಮರಾಜನಗರ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದಿಂದ ಹಿರಿಯ ಪತ್ರಕರ್ತ ಸತ್ಯ ನಾರಾಯಣ್ ಪ್ರಶಸ್ತಿ, 2023ರಲ್ಲಿ ಚಾಮರಾಜನಗರ ರೋಟರಿ ಸಂಸ್ಥೆ ಪ್ರಶಸ್ತಿ, 2015ರಲ್ಲಿ ಲಯನ್ಸ್ ಸಂಸ್ಥೆ ಪ್ರಶಸ್ತಿ, 2016ರಲ್ಲಿ ಚಾಮರಾಜನಗರ ಕನ್ನಡ ಸಂಘಟನೆಗಳ ಪ್ರಶಸ್ತಿಗಳು ಲಭಿಸಿದ್ದವು.

ಅಭಿನಂದನೆ; ಮಾಧ್ಯಮ ಅಕಾಡೆಮಿ ಪ್ರಶಸ್ತಿಗೆ ಭಾಜನರಾಗಿರುವ ಬನಶಂಕರ ಆರಾಧ್ಯ ಅವರನ್ನು ಪತ್ರಕರ್ತರ ಸಂಘ ಅಭಿನಂದಿಸಿದೆ. ಅಲ್ಲದೇ ಈ ಬಾರಿ ಪ್ರಶಸ್ತಿಗೆ ಜಿಲ್ಲೆಯವರನ್ನು ಪರಿಗಣಿಸಿದ್ದಕ್ಕೆ ರಾಜ್ಯ ಸರ್ಕಾರಕ್ಕೆ ಕೃತಜ್ಞತೆ ಸಲ್ಲಿಸುತ್ತದೆ ಎಂದು ಸಂಘದ ಅಧ್ಯಕ್ಷ ಸಿದ್ದಲಿಂಗ ಸ್ವಾಮಿ, ಪ್ರಧಾನ ಕಾರ್ಯದರ್ಶಿ ಪ್ರಸಾದ್ ತಿಳಿಸಿದ್ದಾರೆ.

ರೈತರ ಸಮಸ್ಯೆ ಬಗೆಹರಿಸಲು ಅಗತ್ಯ ಕ್ರಮ: ಭರವಸೆ


ರೈತ ಮುಖಂಡರು ಸಂಸದ ಸುನೀಲ್ ಬೋಸ್ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದರು.

ಕೊಳ್ಳೇಗಾಲ, ಜ.9– ಪಟ್ಟಣದ ಪ್ರವಾಸಿ ಮಂದಿರದಲ್ಲಿ ರೈತ ಮುಖಂಡರ ಸಂಕಷ್ಟ ಆಲಿಸಿದ ಸಂಸದ ಸುನೀಲ್ ಬೋಸ್ ಅವರು ಸೋಮವಾರ ಅಧಿಕಾರಿಗಳ ಸಭೆ ನಡೆಸಿ ರೈತರ ಸಮಸ್ಯೆ ಬಗೆಹರಿಸಲು ಅಗತ್ಯ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.

ರೈತ ಮುಖಂಡರಾದ ಶ್ರೀಕಂಠಸ್ವಾಮಿ, ಮಧುವನಹಳ್ಳಿ ಬಸವರಾಜು, ಮೋಳೆ ರಾಜು, ಪೆರಿಯನಾಯಗಂ, ಮಣಿ, ಲಾರೆನ್ಸ್, ನಂಜುಂಡಸ್ವಾಮಿ ಇತರರು ಸಂಸದರನ್ನು ಭೇಟಿಯಾಗಿ ವಡಕೆಹಳ್ಳ ಭಾಗದ ಸಮಸ್ಯೆ ಈಡೇರಿಕೆಗಾಗಿ ರೈತರು ಅಹೋರಾತ್ರಿ ಧರಣಿ ನಡೆಸುತ್ತಿರುವ ವಿಚಾರ ಗಮನಕ್ಕೆ ತಂದು ರೈತರ ಸಮಸ್ಯೆ ಬಗೆಹರಿಸುವಂತೆ ಮನವಿ ಮಾಡಿದರು.

ಹನೂರು ತಾಲೂಕಿನ ಮಾರ್ಟಳ್ಳಿ, ಕುರಟ್ಟಿ ಹೊಸೂರು, ಮಲೆ ಮಹದೇಶ್ವರ ಬೆಟ್ಟ, ರಾಮಾಪುರ ಗ್ರಾಪಂ ವ್ಯಾಪ್ತಿಯಲ್ಲಿ ಕಳೆದ 22 ವರ್ಷಗಳಿಂದ ಸಮರ್ಪಕ ಮಳೆಯಾಗದ ಹಿನ್ನೆಲೆಯಲ್ಲಿ ಅಂತರ್ಜಲ ಕುಸಿದಿದ್ದು, ಸಾವಿರಾರು ರೈತರು ವ್ಯವಸಾಯ ಬಿಟ್ಟು ಗುಳೆ ಹೋಗಿದ್ದಾರೆ. ಸರ್ಕಾರ ರೈತರಿಗೆ ಸಾಗುವಳಿ ನೀಡಿ 55 ವರ್ಷ ಕಳೆದರೂ ಇನ್ನು ರೈತರಿಗೆ ಪೋಡಿ ಮಾಡಿಲ್ಲ, ಕಾವೇರಿ ನದಿಯಿಂದ ದಂಟಳ್ಳಿ ಮಾರ್ಗವಾಗಿ ಏತ ನೀರಾವರಿ ಯೋಜನೆ ಕಲ್ಪಿಸಿ ಈ ಭಾಗದ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಬೇಕು ಎಂಬುದು ಸೇರಿದಂತೆ ಇನ್ನಿತರ ಸಮಸ್ಯೆ ಬಗೆಹರಿಸುವಂತೆ ಅನೇಕ ಬಾರಿ ಸಿಎಂ, ಉಸ್ತುವಾರಿ ಸಚಿವರು, ಜಿಲ್ಲಾಡಳಿತ, ಶಾಸಕರ ಗಮನಕ್ಕೆ ತಂದರೂ ಪ್ರಯೋಜನವಾಗಿಲ್ಲ. ಕಳೆದ 73 ದಿನಗಳಿಂದ ಒಡಕೆ ಹಳ್ಳ ಗ್ರಾಮದಲ್ಲಿ ರೈತರು ಅಹೋರಾತ್ರಿ ಧರಣಿ ನಡೆಸುತ್ತಿದ್ದಾರೆ. ಶಾಸಕರು ಹಾಗೂ ಜಿಲ್ಲಾಧಿಕಾರಿಗಳು ಸ್ಥಳಕ್ಕಾಗಮಿಸಿ ಜ.15ರೊಳಗೆ ಡಿಪಿಆರ್ ಮಾಡಿಕೊಡುವುದಾಗಿ ಹೇಳಿ ಹೋದವರು ಇಷ್ಟು ದಿನವಾದರೂ ಸಮಸ್ಯೆ ಆಲಿಸಿಲ್ಲ ಹಾಗೂ ಡಿಪಿಆರ್ ಮಾಡಲು ಯಾವುದೇ ಕ್ರಮ ವಹಿಸಿಲ್ಲ ಎಂದು ತಿಳಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಸಂಸದ ಸುನೀಲ್ ಬೋಸ್ ಜನವರಿ ಅಂತ್ಯದವರೆಗೆ ಅವಕಾಶ ನೀಡಿ. ಈ ಸಂಬಂಧ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಅವರೊಂದಿಗೆ ಚರ್ಚಿಸಲಾಗಿದ್ದು, ಅಧಿಕಾರಿಗಳು ವಾರದೊಳಗೆ ಸಮಸ್ಯೆ ಬಗೆಹರಿಸುವ ಭರವಸೆ ನೀಡಿದ್ದಾರೆ. ಅಲ್ಲದೇ ಸೋಮವಾರ ಅಧಿಕಾರಿಗಳ ಸಭೆ ನಡೆಸಿ ಮುಂದಿನ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

ತಾಲೂಕು ಕಚೇರಿ ಎದುರು ಅಂಬೇಡ್ಕರ್ ಪ್ರತಿಮೆ ನಿರ್ಮಾಣಕ್ಕೆ ಒತ್ತಾಯ

ಗುಂಡ್ಲುಪೇಟೆ, ಜ.9 (ಸೋಮ್.ಜಿ)– ಪಟ್ಟಣದ ತಾಲೂಕು ಕಚೇರಿ ಎದುರು ಅಂಬೇಡ್ಕರ್ ಪ್ರತಿಮೆ ನಿರ್ಮಾಣ ಮಾಡುವಂತೆ ಪ್ರಗತಿಪರ ಸಂಘಟನೆಗಳು ಹಾಗೂ ವಿವಿಧ ಪಕ್ಷಗಳ ಮುಖಂಡರು ಒತ್ತಾಯಿಸಿದರು.


ಗೋಷ್ಠಿಯಲ್ಲಿ ಯುವ ವಿಜ್ಞಾನಿ ಡಾ.ನವೀನ್ ಮೌರ್ಯ ಮಾತನಾಡಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಯುವ ವಿಜ್ಞಾನಿ ಡಾ.ನವೀನ್ ಮೌರ್ಯ, ಪಟ್ಟಣದ ಹೊರವಲಯದ ಅಂಬೇಡ್ಕರ್ ಭವನದ ಮುಂಭಾಗ ರಾಷ್ಟ್ರೀಯ ಹೆದ್ದಾರಿ–67ರಲ್ಲಿ ಜ.10ರಂದು ಸಮಾಜ ಕಲ್ಯಾಣ ಇಲಾಖೆಯಿಂದ ಅಂಬೇಡ್ಕರ್ ಪ್ರತಿಮೆ ಸ್ಥಾಪನೆಗೆ ಸಚಿವ ಹೆಚ್.ಸಿ.ಮಹದೇವಪ್ಪ, ಸಂಸದ ಸುನೀಲ್ ಬೋಸ್, ಶಾಸಕ ಹೆಚ್.ಎಂ.ಗಣೇಶಪ್ರಸಾದ್ ನೇತೃತ್ವದಲ್ಲಿ ಗುದ್ದಲಿ ಪೂಜೆ ನಡೆಸುವ ಬಗ್ಗೆ ಕರಪತ್ರ ಹಂಚಿ ಪ್ರಚಾರ ಮಾಡಲಾಗಿದೆ. ಕೂಡಲೇ ಅಂಬೇಡ್ಕರ್ ಪ್ರತಿಮೆ ನಿರ್ಮಾಣ ಶಂಕುಸ್ಥಾಪನೆ ಕೈಬಿಡಬೇಕು. ಇಲ್ಲದಿದ್ದರೆ ತಡೆಯೊಡ್ಡಲಾಗುವುದು ಎಂದು ಎಚ್ಚರಿಕೆ ನೀಡಿದರು.

ಅಂಬೇಡ್ಕರ್ ಪ್ರತಿಮೆ ನಿರ್ಮಾಣ ಉದ್ದೇಶಿತ ಸ್ಥಳದಲ್ಲಿ ಅಸುರಕ್ಷತೆ, ಸ್ಥಳಾಂತರಿಸಬೇಕಾದ ಸಂದರ್ಭ ಬರುವ ಸಾಧ್ಯತೆ ಹಾಗೂ ಯೋಗ್ಯವಲ್ಲದ ಕಾರಣ ಸ್ಥಾಪಿಸಲು ನಮ್ಮ ವಿರೋಧವಿದೆ. ಅಂಬೇಡ್ಕರ್ ಅಖಂಡ ಭಾರತದ ಸ್ವತ್ತಾಗಿರುವ ಕಾರಣ ಗೌರವ ಸಲ್ಲುವ ಸ್ಥಳದಲ್ಲಿ ಪ್ರತಿಮೆ ಇರಬೇಕು. ಜಿಲ್ಲಾ ಕೇಂದ್ರದಲ್ಲಿ ಆಡಳಿತ ಭವನದ ಮುಂದೆ ಇರುವಂತೆ ನಮ್ಮಲ್ಲೂ ತಾಲೂಕು ಕಚೇರಿ ಮುಂಭಾಗದಲ್ಲಿ ಪ್ರತಿಷ್ಠಾಪಿಸಬೇಕು. ಮೊದಲು ಅಂಬೇಡ್ಕರ್, ನಂತರ ಉಳಿದ ಮಹನೀಯರ ಪ್ರತಿಮೆ ಸ್ಥಾಪನೆ ಮಾಡಿ ಎಂದು ಸಲಹೆ ನೀಡಿದರು.

ಪ್ರಗತಿಪರ ಸಂಘಟನೆಗಳ ಒತ್ತಾಯಕ್ಕೂ ಬೆಲೆ ಕೊಡದೇ ಕಾರ್ಯಕ್ರಮ ಮಾಡಿದಾಗ ಕಾನೂನು ಸುವ್ಯವಸ್ಥೆಗೆ ಭಂಗ ಬಂದರೆ ಅದಕ್ಕೆ ಸಂಬಂಧಪಟ್ಟವರೇ ಹೊಣೆಯಾಗುತ್ತೀರಿ. ಅಲ್ಲದೇ ನಮ್ಮ ಪರ ಎಂಎಲ್‌ಎ, ಎಂಪಿ ಇಲ್ಲ ಅಂತ ಹಗುರವಾಗಿ ಕಾಣಬೇಡಿ ಎಂದು ಎಚ್ಚರಿಸಿದರು.

ಬಿಜೆಪಿ ಮುಖಂಡ ಬಸವರಾಜು ಮಾತನಾಡಿದರು. ಈ ವೇಳೆ ಬಿಜೆಪಿ, ಬಿಎಸ್‌ಪಿ ಮತ್ತು ಪ್ರಗತಿಪರ ಸಂಘಟನೆಗಳ ಮುಖಂಡರಾದ ಬಸವಣ್ಣ, ನಾಗರಾಜ್, ನಾಗಸ್ವಾಮಿ, ಸೋಮು, ರಂಗಯ್ಯ, ಶಿವಕುಮಾರ್, ರವಿ, ಕುಮಾರ್, ರೇವಣ್ಣ, ಮಲ್ಲಿಕಾರ್ಜುನ, ಮಧು, ಮಹೇಶ್ ಕಿರಣ್, ರಾಜೇಂದ್ರ, ಶಿವು, ಸೋಮೇಶ್, ನವೀನ್ ಹಾಜರಿದ್ದರು.

ಬದನಗುಪ್ಪೆ ಸರ್ಕಾರಿ ಶಾಲೆಗೆ ಜಿಲ್ಲಾಧಿಕಾರಿ ಭೇಟಿ


ಚಾಮರಾಜನಗರ ನೂತನ ಜಿಲ್ಲಾಧಿಕಾರಿ ಶ್ರೀರೂಪಾ ಅವರು ಬದನಗುಪ್ಪೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಭೇಟಿ ನೀಡಿ ಪರಿಶೀಲಿಸಿದರು. ಶಾಲಾ ಸಮಿತಿ ಅಧ್ಯಕ್ಷ ಶ್ರೀನಿವಾಸ್, ಸದಸ್ಯರಾದ ದೊರೆಸ್ವಾಮಿ, ಸಮೀವುಲ್ಲಾ, ಗ್ರಾಪಂ ಮಾಜಿ ಅಧ್ಯಕ್ಷ ಅಬ್ದುಲ್ ಗಫೂರ್, ಕುಮಾರ್ ಹಾಗೂ ಶಿಕ್ಷಕರಿದ್ದರು.

ಆಕಸ್ಮಿಕ ಬೆಂಕಿಗೆ 7 ಮಳಿಗೆಗಳು ಭಸ್ಮ


ಆಕಸ್ಮಿಕ ಬೆಂಕಿಗೆ 7 ಮಳಿಗೆಗಳು ಭಸ್ಮವಾಗಿರುವುದು.

ಯಳಂದೂರು, ಜ.9– ಆಕಸ್ಮಿಕ ಬೆಂಕಿಗೆ 7 ಅಂಗಡಿ ಮಳಿಗೆಗಳು ಭಸ್ಮವಾಗಿರುವ ಘಟನೆ ತಾಲೂಕಿನ ಬಿಳಿಗಿರಿರಂಗನಬೆಟ್ಟದಲ್ಲಿ ಶುಕ್ರವಾರ ಮುಂಜಾನೆ ನಡೆದಿದೆ.

ಇಲ್ಲಿನ ನಿವಾಸಿಗಳಾದ ಡಿ.ರಾಜು, ಸುಮ, ಶೇಷಾದ್ರಿ, ಎಲ್.ಸ್ವಾಮಿ, ಆರ್.ನಾಗೇಂದ್ರ, ಜಿ.ಕುಮಾರ್, ಎಲ್.ಗೋವಿಂದ ಎಂಬುವರಿಗೆ ಸೇರಿದ ಅಂಗಡಿಗಳು ಭಸ್ಮವಾಗಿ ಲಕ್ಷಾಂತರ ರೂ. ನಷ್ಟ ಸಂಭವಿಸಿದೆ. ಮುಂಜಾನೆ 3.30ರಲ್ಲಿ ಈ ಘಟನೆ ನಡೆದಿದೆ ಎನ್ನಲಾಗಿದ್ದು, ನಿಖರ ಕಾರಣ ತಿಳಿದು ಬಂದಿಲ್ಲ. ಅಂಗಡಿಗೆ ಬೆಂಕಿ ಹೊತ್ತಿಕೊಂಡಿದ್ದು, ಒಳಗಿದ್ದ ಸಿಲಿಂಡರ್ ಸ್ಫೋಟಗೊಂಡ ಪರಿಣಾಮ ಬೆಂಕಿಯ ತೀವ್ರತೆ ಹೆಚ್ಚಾಗಿ ಒಂದು ಅಂಗಡಿಯಿಂದ ಮತ್ತೊಂದು ಅಂಗಡಿಗೆ ಬೆಂಕಿ ವ್ಯಾಪಿಸಿದೆ. ಅಂಗಡಿಗಳಲ್ಲಿ ಯಾರೂ ಇಲ್ಲದ ಕಾರಣ ಯಾವುದೇ ಪ್ರಾಣಹಾನಿಯಾಗಿಲ್ಲ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿ ನಂದಿಸಿ ಹೆಚ್ಚಿನ ಅನಾಹುತ ತಪ್ಪಿಸಿದ್ದಾರೆ. ಈ ಸಂಬಂಧ ಯಳಂದೂರು ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಸ್ಥಳ ಪರಿಶೀಲಿಸಿ ಮುಂದಿನ ತನಿಖೆ ಕೈಗೊಂಡಿದ್ದಾರೆ.

ಅಧಿಕಾರಿಗಳ ಭೇಟಿ: ಸ್ಥಳಕ್ಕೆ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಬಿಂದ್ಯಾ, ತಹಸೀಲ್ದಾರ್ ನಯನಾ, ತಾಪಂ ಇಓ ಉಮೇಶ್ ಭೇಟಿ ನೀಡಿ ಪರಿಶೀಲಿಸಿದರು. ಬಳಿಕ ಅಂಗಡಿ ಮಾಲೀಕರಿಂದ ಮಾಹಿತಿ ಪಡೆದು ಸೂಕ್ತ ಪರಿಹಾರ ಕೊಡಿಸುವುದಾಗಿ ಭರವಸೆ ನೀಡಿದರು.

ಈ ವೇಳೆ ಜಿಪಂ ಮಾಜಿ ಉಪಾಧ್ಯಕ್ಷ ಜೆ.ಯೋಗೇಶ್, ಬಿಳಿಗಿರಿರಂಗನಾಥಸ್ವಾಮಿ ದೇವಸ್ಥಾನ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಶ್ರೀನಿವಾಸ್, ಸಿಪಿಐ ಧರ್ಮೇಂದ್ರ, ಎಸ್‌ಐ ಆಕಾಶ್, ಗ್ರಾಪಂ ಅಧ್ಯಕ್ಷ ಸಿ.ಡಿ.ಮಹದೇವ, ಆರ್‌ಐ ಯದುಗಿರಿ, ಗ್ರಾಮಸೇವಕ ಮಹದೇವಸ್ವಾಮಿ, ಮುಖಂಡರಾದ ನಾಗರಾಜು, ಶ್ರೀನಿವಾಸ್, ಯರಿಯೂರು ಜಯಣ್ಣ ಸೇರಿದಂತೆ ಇತರರಿದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಮನೆ ಭೋಗ್ಯಕ್ಕೆ
30x50 ವಿಸ್ತೀರ್ಣದ ಮನೆ ಭೋಗ್ಯಕ್ಕೆ ಇದೆ. ವಿಶ್ವವಿದ್ಯಾಲಯದ ಲೇಔಟ್ ಬಳಿ ಡ್ಯೂಪ್ಲೆಕ್ಸ್ 3 ಬಿಎಚ್‌ಕೆ, 26 ಲಕ್ಷ
9886281713

ನಿವೇಶನ ಮಾರಾಟಕ್ಕಿವೆ
ಆರ್‌ಟಿ ನಗರದ 600 ಮೀಟರ್ ಸುತ್ತಮುತ್ತಲಿನ ಲೇಔಟ್, ವಿಶ್ವಪ್ರಜ್ಞ ವಿಶ್ವಜಿತ್ ಬ್ರಾಹ್ಮಣರ ಲೇಔಟ್ ಮತ್ತು ಇತರ ಲೇಔಟ್ ಬಳಿ ನಿವೇಶನಗಳು ಮಾರಾಟಕ್ಕಿವೆ.
9886281713

ಬಾಡಿಗೆಗೆ ದೊರೆಯುತ್ತದೆ
ಶ್ರೀರಂಗಪಟ್ಟಣದ ಬಿ.ಅಗ್ರಹಾರದಲ್ಲಿ ಮೂರೂವರೆ ಎಕರೆ ನೀರಾವರಿ ಜಮೀನಿನಲ್ಲಿ ಕುರಿ / ಮೇಕೆ ಶೆಡ್ 200 ಮರಿಗಳು ಸಾಕುವ ಸ್ಥಳಾವಕಾಶದ "ಹೈಟೆಕ್ ಶೆಡ್" ಬಾಡಿಗೆಗೆ ದೊರೆಯುತ್ತದೆ.
Mob: 9380640361, 6361669828, 9886333891

HOUSE FOR SALE
30x40 North face independent house in J.P. Nagar
Contact - 8296204013

ಬೇಕಾಗಿದ್ದಾರೆ
ಹೋಟೆಲ್‌ನಲ್ಲಿ Cleaning ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ. ಬಲ್ಲಾಳ್ ವೃತ್ತದ ಹತ್ತಿರ ಮೈಸೂರು
9900661620

CHANGE OF NAME
I NAVEENA. N R/a No. 208, Near Rice mill, Darasaguppe, Pandavapura Railway Station Post, K. Shettahalli hobli, Srirangapatna Taluk, Mandya Dist -571435, have changed my Daughter's Name, Bhuvana D. N to Vibha. N on my own free will infront of Notary C. Mangala on 09.01.2026 at Mysore
Sd/- Naveena .N

TV ಕೆಟ್ಟಿದೆಯೇ ?
LED, LCD TV ಗಳನ್ನು ರಿಪೇರಿ ಮಾಡಿಕೊಡಲಾಗುತ್ತದೆ. ನಮ್ಮಲ್ಲಿ Seconds LED TV ಗಳು ದೊರೆಯುತ್ತದೆ.
Teju Electronics, ಅಗ್ರಹಾರ
Mob: 9342114069

URGENT REQUIRED!
Sarojani Funland - Mysuru
Game Zone Attendant (Male) Any Qualification | Freshers, Welcome, Good Pay | Friendly Work, Contact:
6360921458

OLD AGE HOME
ನಮ್ಮಲ್ಲಿ ಎಲ್ಲಾ ತರಹದ ಹಿರಿಯ ನಾಗರಿಕರನ್ನು ಅಥವಾ ವೃದ್ಧರನ್ನು ಮನೆಯ ವಾತಾವರಣದಲ್ಲಿ ಊಟ, ವಸತಿ, ನರ್ಸಿಂಗ್ ಕೇರ್ ಮತ್ತು ವೈದ್ಯರ ಆರೈಕೆಯೊಂದಿಗೆ ನೋಡಿಕೊಳ್ಳುತ್ತೇವೆ. ಹೆಚ್ಚಿನ ಮಾಹಿತಿಗಾಗಿ ಕರೆಮಾಡಿ.
9607172737

ಸೈಟು ಮಾರಾಟಕ್ಕಿದೆ
ಬನ್ನೂರು ರಸ್ತೆಯ ಭುಗತಹಳ್ಳಿ ಸಮೀಪದಲ್ಲಿ ಇರುವ ಮುಡಾ ಅನುಮೋದಿತ ಬಡಾವಣೆಯಲ್ಲಿ 40x60 ಅಳತೆಯ ಪಶ್ಚಿಮ ದಿಕ್ಕನ್ನು ಹೊಂದಿರುವ ಸೈಟು ಮಾರಾಟಕ್ಕಿದೆ. ಸಂಪರ್ಕಿಸಿ:
Mob: 9606981204

R.S. CONSTRUCTION
Engineers & Contractors
ನಿಮ್ಮ ಕನಸಿನ ಮನೆಯನ್ನು ಉತ್ಕೃಷ್ಟ ಗುಣಮಟ್ಟದಲ್ಲಿ ಅತ್ಯಂತ ಕಡಿಮೆ ಬೆಲೆಯಲ್ಲಿ ನಾವೇ ನಿರ್ಮಿಸಿಕೊಡುತ್ತೇವೆ. ದರ 1,85,000/– ಪ್ರತಿ ಚದರ. ಉಚಿತ ಪ್ಲಾನ್ ಕೂಡ ಮಾಡಿಕೊಡಲಾಗುತ್ತದೆ. ಇಂದೇ ಸಂಪರ್ಕಿಸಿ:
9538575009, 7019151884

ಸೈಟು ಮಾರಾಟಕ್ಕಿದೆ
ಬನ್ನೂರು ರಸ್ತೆಯ ಆರ್.ಆರ್. ವೆಡ್ಡಿಂಗ್ ಬೆಲ್ಸ್ ಕನ್ವೆನ್ಷನ್ ಹಾಲ್ ಮುಂಭಾಗದಲ್ಲಿ 40x60 ಅಳತೆಯ ಪಶ್ಚಿಮ ದಿಕ್ಕನ್ನು ಹೊಂದಿರುವ ಕಮರ್ಷಿಯಲ್ ಸೈಟು ಮಾರಾಟಕ್ಕಿದೆ. ಸಂಪರ್ಕಿಸಿ:
Mob: 6360633036

ತಕ್ಷಣ ಬೇಕಾಗಿದ್ದಾರೆ
ನೇರ ಆಯ್ಕೆ ಕಂಪನಿಗಳಿಗೆ, ಆಫೀಸ್ ವರ್ಕ್‌ಗಳಿಗೆ 7th, 10th, PUC, ITI, Diploma, BE, BA, B.Com., Degree (ಪಾಸ್ / ಫೇಲ್) ಆದಂತ ನಗರ ಗ್ರಾಮೀಣ ಹಳ್ಳಿಗಳ ಯುವಕರಿಗೆ, ಯುವತಿಯರಿಗೆ ವಸತಿಯೂಟವಿರುತ್ತದೆ. ಸಂಬಳ + ಓಟಿ ರೂ. 18000 – 35000.
Mob: 9916788422

SLEEPWAVE MATTRESS PVT. LTD.
Sales Executive 1 or 2 year experience. **Marketing executive** 1 or 2 year experience. **Accountant** (tally experience) - Male. **Tailoring** 1 or 2 year experience. Salary 15k to 35 k. Contact:
Mob: 9036824741

WANTED CAR DRIVER
ಅನುಭವಿ ಕಾರು ಚಾಲಕ ಬೇಕಾಗಿದ್ದಾರೆ. ಅನುಭವ : 5 ವರ್ಷಗಳು ಸ್ಥಳ : ಮೈಸೂರು
7022033176

ಹೆಸರು ಬದಲಾವಣೆ
ಬೆಂಗಳೂರು ಸಿಟಿ, ಬೀಣ್ಯಾ 2ನೇ ಹಂತ, ತಿಗಳರ ಪಾಳ್ಯ, ಬಾಲಾಜಿ ನಗರ, 7ನೇ ತಿರುವು, ಮನೆ ನಂ.34 ರಲ್ಲಿ ವಾಸವಾಗಿರುವ ಪ್ರಕಾಶ್ ರವರ ಮಗಳು ಪ್ರಿಯಾ.ಪಿ ಆದ ನಾನು ಈ ಮೂಲಕ ತಿಳಿಸುವುದೇನೆಂದರೆ, ನನ್ನ ತಂದೆ ಪ್ರಕಾಶ್ ರವರು ಚಾಮರಾಜನಗರ ತಾಲ್ಲೂಕು, ಆಲೂರು ಶಾಖೆಯ ಬ್ಯಾಂಕ್ ಆಫ್ ಬರೋಡದಲ್ಲಿ ನನ್ನ ಹೆಸರಿನಲ್ಲಿ ನಿಗಧಿತ ಠೇವಣಿ ಇಟ್ಟಿದ್ದು, ಅದರಲ್ಲಿ ನನ್ನ ಹೆಸರು ಪೂಜಾ ಎಂದು ನೀಡಿರುತ್ತಾರೆ. ನಂತರ ನನ್ನನ್ನು ಶಾಲೆಗೆ ದಾಖಲಿಸುವಾಗ ನನ್ನ ಹೆಸರನ್ನು ಪ್ರಿಯಾ.ಪಿ ಎಂದು ಹೆಸರನ್ನು ನೀಡಿದಾಖಲಿಸಿರುತ್ತಾರೆ. ನನ್ನ ಆಧಾರ್ ಕಾರ್ಡ್ ಹಾಗೂ ನನ್ನ ಶಾಲಾ ದಾಖಲಾತಿಗಳಲ್ಲಿ ನನ್ನ ಹೆಸರು ಪ್ರಿಯಾ.ಪಿ ಎಂದು ನಮೂದಾಗಿರುತ್ತದೆ. ಆದರಿಂದ ಪ್ರಿಯಾ.ಪಿ ಹಾಗೂ ಪೂಜಾ ಎಂಬ ಎರಡು ಹೆಸರುಗಳು ನನ್ನ ಹೆಸರೇ ಆಗಿರುತ್ತದೆ ಎಂದು ನೋಟರಿ ಬಾಲು ಎನ್.ಎಂ ಅವರ ಮುಂದೆ ಪ್ರಮಾಣೀಕರಿಸಿರುತ್ತೇನೆ.
ದಿನಾಂಕ : 09–01–2026, ಸ್ಥಳ : ಚಾಮರಾಜನಗರ. ಸಹಿ/– (ಪ್ರಿಯಾ.ಪಿ)

ನೇರ ನೇಮಕಾತಿ
"Impulse Opp" @ Mysore
10th, PUC, Any Degree. "No Fee"
Earn (10,000 to 20,500) PM.
Call: Kavya.
Free register your name
9342827788 / 9342238667
Only limited

ಮೈಸೂರಿನಲ್ಲಿ DTCP Approved ಬಡಾವಣೆಗಳಲ್ಲಿ ನಿವೇಶನಗಳು ದೊರೆಯುತ್ತವೆ
1) ಟಿ.ನರಸೀಪುರ ಮುಖ್ಯ ರಸ್ತೆ.
2) ಹೆಚ್.ಡಿ. ಕೋಟೆ ಮುಖ್ಯ ರಸ್ತೆ
3) ಕೆಲ್ಲಹಳ್ಳಿ ಪೆರಿಫೆರಲ್ ರಿಂಗ್ ರಸ್ತೆ.
ಬ್ಯಾಂಕ್ ಸಾಲ ಸೌಲಭ್ಯ ದೊರೆಯುತ್ತದೆ.
ಶ್ರೀ ರಮಣಶ್ರೀ ಡೆವಲಪರ್ಸ್
Mob: 7411914135

RAI ESTATES
RERA APPROVED — MUDA APPROVED — E-KHATA
ಮೈಸೂರಿನ ಸುತ್ತ ರೈ ಎಸ್ಟೇಟ್ ನಿರ್ಮಿಸಿರುವ ಲೇಔಟ್‌ಗಳಲ್ಲಿ ಸೈಟ್ ಕೊಳ್ಳಲು ಸಂಪರ್ಕಿಸಿ
- King City
- Golden Palms
- Green Park
- Vardaman Nagar
- Paradise Enclave
- Green Acres
- Spring Meadows
- Dream City
- Dream Valley
- Eastern Hills

9448181488, 9945061604
#10, 1st Floor, New Sayyaji Rao Road, Bamboo Bazar, Mysuru - 570 001

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್ ಹಾಗೂ ಸೋಲಾರ್ ಸರ್ವೀಸ್‌ಗಾಗಿ ಸಂಪರ್ಕಿಸಿ
Mob: 9964733988

ಉಚಿತ ಬ್ಯೂಟಿಷಿಯನ್ ತರಬೇತಿ
ಸಮೃದ್ಧಿ ಸೇವಾ ಸಮಿತಿ ಟ್ರಸ್ಟ್ ವತಿಯಿಂದ ಉಚಿತವಾಗಿ 25 ತರಹದ ವಿವಿಧ ತರಬೇತಿಯನ್ನು ಹೇಳಿಕೊಡಲಾಗುತ್ತದೆ. ತರಬೇತಿಯನ್ನು ಪಡೆಯಲು ಇಚ್ಛಿಸುವವರು ಕೆಳಕಂಡ ವಿಳಾಸ ಮತ್ತು ದೂರವಾಣಿ ಕರೆಗೆ ಸಂಪರ್ಕಿಸಿ: ಶಾರದಾದೇವಿನಗರ
Mob: 9964874954

ಬೇಕಾಗಿದ್ದಾರೆ
ಮೆನ್ಸ್ ಪಾರ್ಲರ್ /ಕಟಿಂಗ್ ಶಾಪ್‌ನಲ್ಲಿ ಕೆಲಸ ಮಾಡಲು ಯುವಕರು ಬೇಕಾಗಿದ್ದಾರೆ ಸಂಬಳ: 20000 to 30000 ಸ್ಥಳ: ಸಾತಗಳ್ಳಿ
98443 41652

ಬಾಡಿಗೆಗೆ ಇದೆ
ಕಚೇರಿ ತೆರೆಯಲು ಸೂಕ್ತ ಸ್ಥಳ : ಅಗ್ರಹಾರ, ತ್ಯಾಗರಾಜ ರಸ್ತೆಯಲ್ಲಿ ಬಾಡಿಗೆಗೆ ಇದೆ. ಸಂಪರ್ಕಿಸಿ
9343441210

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 91080 48064

ಮನೆಯಿಂದಲೇ ಕೆಲಸ
ಗೃಹಿಣಿಯರು, ವಿದ್ಯಾರ್ಥಿಗಳು, ವಯಸ್ಕರು, ವಯಸ್ಸಿನ ಮಿತಿ ಇಲ್ಲ, ನಿಮ್ಮ ಬಿಡುವಿನ ವೇಳೆಯಲ್ಲಿ ಕುಳಿತು ಬುಕ್ ರೈಟಿಂಗ್, ವಾಟ್ಸಾಪ್, ಟೈಪಿಂಗ್, ಪಾನ್ ಫಿಲ್ಲಿಂಗ್, ಡೇಟಾ ಎಂಟ್ರಿ, ಪೆನ್ಸಿಲ್ ಪ್ಯಾಕಿಂಗ್ ಕವರ್ ಪ್ಯಾಕಿಂಗ್ ಇನ್ನಿತರ ಕರಕುಶಲ ವಸ್ತುಗಳ ಪ್ಯಾಕಿಂಗ್ ಕೆಲಸಗಳು ಲಭ್ಯ, ನಿಮ್ಮ ಬಿಡುವಿನ ವೇಳೆಯಲ್ಲಿ ಕುಳಿತು ಗಳಿಸಿ 25000 ರಿಂದ 45000 ದವರೆಗೆ.
Mob: 97421 33993

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9535175624

100% ಕೆಲಸ ಖಾಲಿ ಇದೆ
ಮೈಸೂರಿನ ಅತ್ಯಂತ ವರ್ಕ್ ಫ್ರಮ್ ಮನೆಯಿಂದಲೇ ಕೆಲಸ ವಿದ್ಯಾರ್ಥಿಗಳಿಗೆ, ಮಹಿಳೆಯರಿಗೆ ಹಾಗೂ ಪುರುಷರಿಗೆ ವಯಸ್ಸು 18 ರಿಂದ 65 ವರೆಗೆ 7th, Any Degree ಪಾಸ್ / ಫೇಲ್ ಮೊದಲ ಕರೆ ಮಾಡಿ. 22000 ರಿಂದ 35000 ಸಂಪಾದಿಸಿ.
Mob: 7996021216

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9535361279

WANTED
For Wholesale Pharma distribution, Male Staff - 3 (Collection, Delivery & Office work) Driver -1 (Driving Cum office work) Female Staff -3 (Computer billing cum office assistance) SSLC, PUC, DEGREE Pass/Fail with or without experience
9986108208 / 9739377827

ವಧು ಬೇಕಾಗಿದೆ
ಎಸ್.ಸಿ. ಸಮುದಾಯದ ಸರಕಾರಿ ಕೆಲಸ ಇರುವ 48 ವರ್ಷದ ವಿಧುರ ವರನಿಗೆ ವಧು ಬೇಕಾಗಿದೆ. ವಿಧವೆ ವಿಚ್ಛೇದಿತರೂ ಸಂಪರ್ಕಿಸಬಹುದು.
8867929744

ಬೇಕಾಗಿದ್ದಾರೆ
ಮೈಸೂರು ಮತ್ತು ಮಂಡ್ಯದಲ್ಲಿ ಕಾರ್ಯ ನಿರ್ವಹಿಸಲು ಅನುಭವವುಳ್ಳ ಸೆಕ್ಯೂರಿಟಿ ಫೀಲ್ಡ್ ಆಫೀಸರ್ಸ್‌ಗಳು ಕೂಡಲೇ ಬೇಕಾಗಿದ್ದಾರೆ. ಸ್ಥಳೀಯರಿಗೆ ಮತ್ತು ದ್ವಿಚಕ್ರ ಹೊಂದಿರುವವರಿಗೆ ಮೊದಲ ಆದ್ಯತೆ ನೀಡಲಾಗುವುದು.
ssrsmysore0512@gmail.com
72593 89106

LAND FOR SALE
Mysore Bangalore Highway Near toll plaza Total 28 Guntas General property 18 kms from Manipal Hospital Contact:
7899871415

SITE FOR SALE
MUDA Approved
Bogadi Main Road, Jattihundi
30x40, 20x40, 20x30
80% Bank Loan
Mob: 9738884777

ಸಂಪು ಮತ್ತು ಟ್ಯಾಂಕ್ ಸೋಲಾರ್ ಸರ್ವೀಸ್
8197383645, 9008711654

WANTED
Experienced Store Manager
Age: 40-50 years (local resident). Exp: Handling store operations. Language: Kannada, English, Hindi. Time: 10 am to 9 pm. Salary: Rs. 18,000. Knowledge: Billing, Handling Customers proficiently.
Mob: 9500415544

ಚ.ಅ. ರೂ. 1ಕ್ಕೆ ಜಮೀನು ಬಾಡಿಗೆಗಿದೆ
ಮೈಸೂರು ಗದ್ದಿಗೆ ರಸ್ತೆ ಮಹಲಿಂಗೇಶ್ವರ ದೇವಸ್ಥಾನದ ಪಕ್ಕ, ಅಲಿನೇಶನ್ ಆಗಿರುವ 56990 ಚ.ಅ (1 1/4 ಎಕರೆ ಎಲ್ಲಾ ಸೌಕರ್ಯವಿರುವ ಜಮೀನು ಚದರಡಿಗೆ ರೂ. 1/– ಒಂದು ರೂಪಾಯಿ ಬಾಡಿಗೆಗೆ ದೊರೆಯುತ್ತದೆ ಎಲ್ಲಾ ಉದ್ದೇಶಕ್ಕೆ ಬಳಸಬಹುದು.
8197609290

ವಾಣಿಜ್ಯ ಕಟ್ಟಡ ಮಾರಾಟಕ್ಕಿದೆ
ಮೈಸೂರು ಕುವೆಂಪುನಗರ ಅಪೋಲೋ ಆಸ್ಪತ್ರೆ ಮುಖ್ಯರಸ್ತೆಯಲ್ಲಿ 1590 ಚ.ಅ. ಜಾಗದಲ್ಲಿ 4800 ಚ.ಅ. ವಾಣಿಜ್ಯ ಕಟ್ಟಡ ತಿಂಗಳಿಗೆ 90 ಸಾವಿರ ಬಾಡಿಗೆ ಬರುತ್ತಿರುವುದು– ಮಾರಾಟಕ್ಕಿದೆ ಎಲ್ಲಾ ಸೌಕರ್ಯವಿದೆ.
8197609290

ಕೆಲಸಕ್ಕೆ ಬೇಕಾಗಿದ್ದಾರೆ
- * ಕ್ಯಾಷಿಯರ್ (ಮಹಿಳೆ) (1)
- * ದೋಸೆ ಭಟ್ಟರು (1)
- * ಸೌತ್ ಇಂಡಿಯನ್ ಕುಕ್ (1)
- * ಟೀ ಮೇಕರ್ (1)
- * ಚೈನೀಸ್ (1)

9743344045

HOUSE FOR SALE
As per your requirement Architect designed near Vajamangala, Bannur Road
20x30 - 27.5 Lakhs
20x40 - 31 Lakhs
30x40 - 51 Lakhs
Near St. Joseph School
20x40 - 39.6 Lakhs
30x50 - 75.5 Lakhs
8123387555, 7259348777

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

FOR SALE
30x40|30x50 Sites, Near RT Ngr, Brahmins Lyt, HD Kote Rd.
20x30, 30x40 MUDA Approved Sites Near Rainbow School Bogadi
40x60 Site@ Shardha Lyt,JP Ngr
30x45 Corner Site@ Srirampura
2-3 BHK Apartments @RK Ngr
Commercial Properties Also Available
PRAKRUTHI PROPERTIES
95386 90359, 90359 90359



Solar Water Heater SALES & SERVICE
SUNZONE SOLAR SYSTEM
VM Double Road, Kuvempunagar, Mysuru
9845175443

ಕಮರ್ಷಿಯಲ್ ಸೈಟ್ ಮಾರಾಟಕ್ಕೆ
ಉತ್ತರ ಪೂರ್ವ ಕಾರ್ನರ್ 40 ಫೀಟ್ ರೋಡ್ 3510 Sq ಫೀಟ್ ಕಮರ್ಷಿಯಲ್ ಸೈಟ್ ಫಾರ್ ಸೇಲ್ ಇನ್ ಸಪ್ತಮಾತೃಕ ಲೇಔಟ್
9448601655

CHANGE OF NAME
I MONORONJON MONDAL residing at # 128 RMP Layout, Vijayanagar 4th Stage, Mysore-570032, have changed my name from MONORONJAN MONDAL TO MANORAJAN MANDAL on my own free will sworn in before Notary L.N. RAJENDRAN MYSURU Vide affidavit dated 07-01-2026
Sd/- MANORANJAN MANDAL

SPACE FOR RENT
30,000 Sqft Space for rent with Borewell Facility. in Hootagally Industrial area, Near BEML Quarters, Mysore. Contact : Shivanna
9900113609

WANTED
For M.N.C. Company As "Customer Consultant" Part time / Full time Free Joining, No Investment, No Target For more details Contact:
8197945400

LOOKING FOR CHANGE
EXISTING IRON OR WOODEN WINDOWS TO SLIDING UPVC OR ALUMINIUM WINDOWS (with mosquito mess protection) CONTACT
9845748562/ 9986889541

ಜನರೇಟರ್ ಮಾರಾಟಕ್ಕಿದೆ
32 ಕೆ.ವಿ. ಜನರೇಟರ್ ಮಾರಾಟಕ್ಕಿದೆ. ಕರೆ ಮಾಡಿ
9448609092 9886481396

ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ
ಮೈಸೂರಿನ ಬನ್ನಿಮಂಟಪದಲ್ಲಿರುವ ಆಸ್ಪತ್ರೆಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ. ಕೆಲಸದ ಸಮಯ – 12 ಗಂಟೆ, ಸಂಬಳ – 13000 ವಿದ್ಯಾಭ್ಯಾಸದ ಅವಶ್ಯಕತೆ ಇಲ್ಲ. ವಯಸ್ಸು –60 ರವರ ಒಳಗೆ ಸಂಪರ್ಕಿಸಿ.
9606075588

ಸೈಟ್ ಮಾರಾಟಕ್ಕಿದೆ
(Muda approved) EAST FACING 30X40 ಗುರುಕುಲ ಬಡಾವಣೆ ಜೆ.ಪಿ.ನಗರ, ಮೈಸೂರು
9845035818

SITE FOR SALE
40x60 Site at Gokulam, R.K. Nagar, Saraswathipuram, Dattagalli, 30x40 at R.K. Nagar, Dattagalli & Gaddige Road, 30x50 at Railway Layout. Call
7353430309

ತಕ್ಷಣ ಬೇಕಾಗಿದ್ದಾರೆ
1) ಸೆಕ್ಯೂರಿಟಿ ಗಾರ್ಡ್ – (ವಿಜಯನಗರ, ಒಂಟಿಕೊಪ್ಪಲ್, ಹಿನಕಲ್) 2) ಸೆಕ್ಯೂರಿಟಿ ಗಾರ್ಡ್ಸ್– (ಕೊಳ್ಳೇಗಾಲ) 3) ಹೌಸ್‌ಕೀಪಿಂಗ್– (ಹುಡುಗರು/ಮಹಿಳೆಯರು)
9731663856 / 7795162227

SITE FOR SALE
40X60 EAST FACING 60 FEET ROAD, 40X60 NORTH FACING 40 FEET, SARASWATHIPURAM, MYSORE, BUY AND SALE CONTACT
8904812796

ಹೊಸ ಮನೆ ಮಾರಾಟಕ್ಕಿದೆ
20x30, ಲಾಲ್ ಬಹದೂರ್ ಶಾಸ್ತ್ರಿ ನಗರ, 56 lks
30x40, ಪೊಲೀಸ್ ಲೇಔಟ್, g/f f/f s/f, ಮೈಸೂರು 1.77 cr. ಬಾಲಕೃಷ್ಣ–
9071 33 9155

ಉದ್ಯೋಗವಕಾಶ
ಯಾವುದೇ ವಿದ್ಯಾಭ್ಯಾಸ ವಾಗಿದ್ದರು ಪಾಸ್/ಫೇಲ್ ಆಗಿರುವ ಮಹಿಳೆಯರು, ಯುವತಿಯರು, ಹಾಗೂ ಯುವಕರು ನಮ್ಮ ಸಂಸ್ಥೆಯಲ್ಲಿ ಹೋಂ ನರ್ಸಿಂಗ್ ಕೆಲಸ ಮಾಡಲು ಬೇಕಾಗಿದ್ದಾರೆ, ಉಚಿತ ಊಟ ಮತ್ತು ವಸತಿಯೊಂದಿಗೆ ಆಕರ್ಷಕ ಸಂಬಳ 15000 ರಿಂದ 25000 ಮೊದಲು ಬಂದವರಿಗೆ ಆದ್ಯತೆ
9513203333 9739292222

ಬೇಕಾಗಿದ್ದಾರೆ
ಮೈಸೂರಿನ ಕಾಳಿದಾಸ ರಸ್ತೆಯಲ್ಲಿ ಇರುವ ಸುವ್ಯವಸ್ಥಿತ ಶುದ್ಧ ಸಸ್ಯಾಹಾರಿ ಹೋಟೆಲ್‌ಗೆ ಅಡುಗೆ ಭಟ್ರು ಮತ್ತು ಸಹಾಯಕ ಕೌಂಟರ್ / ಫುಡ್ ಪ್ಯಾಕಿಂಗ್, ಸೌತ್ ಅಸಿಸ್ಟೆಂಟ್, ಕ್ಲೀನಿಂಗ್ / ವಾಷಿಂಗ್, ಸಂಪರ್ಕಿಸಿ
8884066266

ವೀಕೆಂಡ್ ಪ್ರವಾಸ
ಎರಡು ದಿನಗಳು, ವೀಕ್ಷಿಸುವ ಸ್ಥಳಗಳು, ನಿರ್ವಾಣ ಬೀಚ್ ಪ್ಯಾರಡೈಸ್ ಬೀಚ್ ಟ್ರಕ್ಕಿಂಗ್, ಮಿರ್ಜನ್ ಪೋರ್ಟ್ ಮುರುಡೇಶ್ವರ ಯಾಣ ಗುಹೆಗಳು, ನೀಲಗೋಡು ಚೌಡೇಶ್ವರಿ ದೇವಸ್ಥಾನ ಮ್ಯೂಸಿಕ್ ಮತ್ತು ಕ್ಯಾಂಪ್‌ಫೈರ್ ಇರುತ್ತದೆ. ಊಟ, ತಿಂಡಿ ವ್ಯವಸ್ಥೆ ಇರುತ್ತದೆ. ಪ್ರತ್ಯೇಕ ರೂಂಗಳ ವ್ಯವಸ್ಥೆ ಇರುತ್ತದೆ. ಎಲ್ಲ ಸೌಲಭ್ಯಗಳು ಸೇರಿ ಒಬ್ಬರಿಗೆ ರೂ. 6000 ಮಾತ್ರ. ಪ್ರವಾಸದ ದಿನಾಂಕ ಫೆಬ್ರುವರಿ 13 ಮತ್ತು 14.
Mob: 70222 71023

ಹೆಸರು ಬದಲಾವಣೆ
ವಿಜಯ ಕೆ.ಎಸ್. W/o ಎಸ್.ಕೆ. ಮೋಹನ್ ಕುಮಾರ್, ಮಂಡ್ಯ ಜಿಲ್ಲೆ, ಪಾಂಡವಪುರ ತಾಲ್ಲೂಕು, ಮೇಲುಕೋಟೆ, ಹೋಬಳಿ, ಮಾಣಿಕ್ಯನ ಹಳ್ಳಿ, ಎಂ. ಶೆಟ್ಟಳ್ಳಿ ಗ್ರಾಮದಲ್ಲಿ ವಾಸವಿದ್ದು, ನನ್ನ ಮಗನ ಹೆಸರನ್ನು ಯಶಸ್ ಎಸ್.ಎಂ. ನಿಂದ ಎಸ್.ಎಂ. ಅಥರ್ವ ಎಂದು ಬದಲಾಯಿಸಿ ಕೊಂಡಿರುತ್ತೇನೆ ಎಂದು ನೋಟರಿ ಸುಮಿತ್ರ ರವರ ಸಮ್ಮುಖದಲ್ಲಿ ಪ್ರಮಾಣೀಕರಿಸಿರುತ್ತೇನೆ.
ಸಹಿ/– ವಿಜಯ ಕೆ.ಎಸ್.

ಮನೆ ಮಾರಾಟಕ್ಕಿದೆ
New 40x63 GF, 3 BHK, Teak & Granite, parking, Harividyalaya-Christ School Road, Bogadi, Mysore.
Mob: 9482883566

SITE FOR SALE
ಜ್ಞಾನಭಾರತಿ ಬಡಾವಣೆ 2nd Phase, ಸೈಟ್ ನಂ. 363, 36x40 East Face, ರಾಷ್ಟ್ರೋತ್ಥಾನ ಶಾಲೆ ಹತ್ತಿರ, ದಡದಹಳ್ಳಿ, Direct Owner
Contact **9663402349**

Site for Sale
30x40 E/F, K.B.L. Gardenia, Vijayanagar 4th Stage, near Rashtrothana School.
Mob: 9845809369

NEW CORNER HOUSE FOR SALE
Semi furnished duplex building, 3 bedrooms, car parking, roof garden (Opp. R.T. Nagar Entrance, Ring Road) 40x25 N/F. Contact:
Mob: 9880218671

ಬೇಕಾಗಿದ್ದಾರೆ
ಬೇಕಾಗಿದ್ದಾರೆ ಹೋಂ ನರ್ಸಿಂಗ್, ಮನೆ ಕೆಲಸ ಹಾಗೂ ಅಡುಗೆ ಕೆಲಸಕ್ಕೆ (ಬ್ರಾಹ್ಮಣ ಮಹಿಳೆಯರು) ಹಾಗೂ ಇತರರು ಬೇಕಾಗಿದ್ದಾರೆ ಮಹಿಳೆಯರು, ಪುರುಷರು ಬೇಕಾಗಿದ್ದಾರೆ 24 ಗಂಟೆ ಹಾಗೂ 8 ಗಂಟೆಗಳಿಗೆ. ಆಸಕ್ತಿಯುಳ್ಳವರು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
Mob: 8152983530

ವಧು–ವರಾನ್ವೇಷಣೆ
ಒಕ್ಕಲಿಗ/ಕುರುಬ/ಲಿಂಗಾಯತ ನಾಯಕ/ SC & ಎಲ್ಲಾ ಜಾತಿಯ ವಧು–ವರರಿಗಾಗಿ ಕೂಡಲೇ ಸಂಪರ್ಕಿಸಿ (II Marriages Also)
9343175000

ಬೇಕಾಗಿದ್ದಾರೆ
ಮೈಸೂರು ಜಿಲ್ಲೆಯಲ್ಲಿ ನೂತನವಾಗಿ ಪ್ರಾರಂಭವಾಗಿರುವ ಕಾರ್ ಷೋರೂಮ್ ಹಾಗೂ ಬೈಕ್ ಷೋರೂಮ್‌ಗಳಿಗೆ, CASHIER, RECEPTIONIST, HR, ADMIN, ACCOUNT, ಕೆಲಸಕ್ಕೆ, ತಕ್ಷಣ ಯುವಕ, ಯುವತಿಯರು ಬೇಕಾಗಿದ್ದಾರೆ, (18k -38k), SSLC, PUC, DEGREE
Contact: 6366718368 9739121355, 7899627704

ಬೇಕಾಗಿದ್ದಾರೆ
ಮೈಸೂರು ನಗರದ ಸುತ್ತಮುತ್ತ ಕಂಪನಿಗಳಲ್ಲಿ, ಕಾರ್ಖಾನೆಗಳಲ್ಲಿ, ಹಾಸ್ಪಿಟಲ್‌ಗಳಲ್ಲಿ ಕೆಲಸ ಮಾಡಲು (ಹೆಲ್ಪರ್)ಗಳು ಹಾಗೂ ನಿವೇದಿತಾ ನಗರ, ಶಾರದದೇವಿ ನಗರ, ವಿಜಯನಗರ, ಶ್ರೀರಾಮನಗರ, ಹಾಸ್ಪಿಟಲ್‌ನಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಸೂಪರ್‌ವೈಸರ್‌ಗಳು, ಹೌಸ್‌ಕೀಪಿಂಗ್ ಗಳು ತಕ್ಷಣ ಕೆಲಸಕ್ಕೆ ಬೇಕಾಗಿದ್ದಾರೆ. ESI, PF ಸೌಲಭ್ಯವಿದೆ.
7795367205, 9611208553, 9036461347

ಮನೆ ಸಾಲ
ಜನಮಿತ್ರ ಫಿನ್ ಸರ್ವ್ ಪ್ರೈ.ಲಿ. 2921/A, ಸರಸ್ವತಿಪುರಂ, ಮೈಸೂರು.
ನಾವು ನ್ಯಾಷನಲೈಸ್ಡ್ ಮತ್ತು ಎನ್.ಬಿ.ಎಫ್.ಸಿ ಬ್ಯಾಂಕ್‌ಗಳೊಂದಿಗೆ ಸಹಭಾಗಿತ್ವದಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಯಾರಿಗಾದರು ಮನೆ ಸಾಲ ಸೌಲಭ್ಯ ಕೊಡಿಸಲಾಗುತ್ತದೆ. ಸಿಬಿಲ್ ತೊಂದರೆ ಇದ್ದರು 11B, 9 & 11A, ಮುಡಾ ಮತ್ತು ಕಾರ್ಪೋರೇಷನ್ ಮತ್ತು ರೆವಿನ್ಯೂ ಖಾತೆಗಳಿಗೆ ಲೋನ್ ಮಾಡಿಸಿ ಕೊಡಲಾಗುವುದು.
8088647887

ಸೈಟು ಬೇಕಾಗಿದೆ
ಚಿಕ್ಕಹಳ್ಳಿ / ವಾಜಮಂಗಲ / ವರುಣ ಕ್ಯಾಲಿಬರ್ / ಜೆಎಸ್‌ಎಸ್ 3ನೇ ಹಂತ / ವರುಣ ಬಸವೇಶ್ವರ / ನಿರ್ಮಾಣ್‌ನಗರ / ಲಲಿತಾದ್ರಿನಗರ / ಪೊಲೀಸ್ ಲೇಔಟ್ ಹಾಗೂ ಅಕ್ಕಪಕ್ಕದ ಬಡಾವಣೆಗಳಲ್ಲಿ, ಟಿ.ನರಸೀಪುರ ರಸ್ತೆ / ಬನ್ನೂರು ರಸ್ತೆ.
9686071750

ತಕ್ಷಣ ಬೇಕಾಗಿದ್ದಾರೆ
* ಕಛೇರಿ ಸಹಾಯಕ ಮತ್ತು ಕಾರ್ ಚಾಲಕ
* ಸೇಲ್ಸ್ ಎಕ್ಸಿಕ್ಯೂಟಿವ್

PH: 9632806699

SITE FOR SALE
30x40 & 40x60 Sunciti homes Nagawala 40x60 S/F Bhairava Enclave, Attached to Vijay Nagara 4th stage 30x40 W/F, RAI Estate Bannur road. Contact -
9632030718 / 6362999147

AVAILABLE ROOMS
WITH TOILET & BATH FACILITY ONLY FOR MALE STUDENT/ RETIRED (LOCATION : VISHVESHWAR NAGAR) CONTACT WITH TOMORROW
9449923880 / 9632435922

ಶ್ರೀ ಸಂಜೀವಿನಿ ಗೋಲ್ಡ್ ಕಂಪನಿ
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನವನ್ನು ನಾವೇ ಬಿಡಿಸಿ ಉಳಿದ ಹಣವನ್ನು ಚಿನ್ನದ ಗುಣಮಟ್ಟದ ಆಧಾರದ ಮೇಲೆ ನಿಮ್ಮ ಸ್ಥಳದಲ್ಲೇ ನೀಡಲಾಗುತ್ತದೆ. ಒಂದು ಗ್ರಾಂ ಚಿನ್ನಕ್ಕೆ 12600(24CT)
9108146123

Asian Tours & Travels
ಶ್ರೀ ಲಕ್ಷ್ಮೀ ವೆಂಕಟೇಶ್ವರ ಪ್ರಸನ್ನ
ದಿನಾಂಕ 11/02/2026 (9 ದಿನಗಳು) ಕಾಶಿ, ಗಯಾ, ಅಲಹಾಬಾದ್, ವೈದ್ಯನಾಥ್ ಜ್ಯೋತಿರ್ಲಿಂಗ. ದಿನಾಂಕ 11/03/2026 (3 ದಿನಗಳು) ಕೋನಾರ್ಕ್, ಭುವನೇಶ್ವರ್, ಪುರಿ, ಶಕ್ತಿಪೀಠ, ಬೇಡಿ ಹನುಮಾನ್, ಲಿಂಗರಾಜ್ ದೇವಸ್ಥಾನ. ದಿನಾಂಕ 27/03/2026 (12 ದಿನಗಳು) ಕಲುಮನಾಲಿ, ಜ್ವಾಲಾಮುಖಿ, ಚಾಮುಂಡ, ವೈಷ್ಣೋದೇವಿ.
9342287551 / 9482239855

ಕಳೆದಿದೆ
ಶ್ರೀಮತಿ ರಾಜೇಶ್ವರಿ ಕೋಂ ಲೇಟ್ ಎಂ.ಎಲ್. ಚೆನ್ನಕೇಶವ ರವರು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಪಡೆದಿದ್ದ ಮೈಸೂರು, ಲಲಿತಾದ್ರಿನಗರ ನಿವೇಶನ ಸಂಖ್ಯೆ 35ರ ಗುತ್ತಿಗೆ ಸಹಿತ ಒಪ್ಪಂದದ ಕರಾರು ಪತ್ರ ಕಳೆದಿದೆ. ಸಿಕ್ಕವರು ಸಂಪರ್ಕಿಸಿ : ದಿವ್ಯಾ. ಸಿ
9606232923

ಬೇಕಾಗಿದ್ದಾರೆ
ಜೆ.ಆರ್.ಎಸ್ ಹತ್ತಿರ ಇರುವ ಭಾರತ್ ಪೆಟ್ರೋಲಿಯಂ ಪಂಪಿಗೆ. ಕ್ಯಾಷಿಯರ್ ಮತ್ತು ಹೆಲ್ಪರ್ ಕೆಲಸಕ್ಕೆ ಪುರುಷರು ಹಾಗೂ ಮಹಿಳೆಯರು ಬೇಕಾಗಿದ್ದಾರೆ. ಊಟ ಹಾಗೂ ವಸತಿ ವ್ಯವಸ್ಥೆ ಇರುತ್ತದೆ. ಸಂಪರ್ಕಿಸಿ
7026480147/ 7259947988

ಮೈಸೂರು ಮಿತ್ರ 46 — ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಸೋಮವಾರ ಗುರುವಾರ ಶನಿವಾರ
ಪ್ರತಿ ಜಾಹೀರಾತಿಗೆ ರೂ. 630 ಮಾತ್ರ

ಮೈಸೂರು ಮಿತ್ರ

ಅಪರಾಧ ಪ್ರಕರಣ ತಡೆಯಿರಿ ಇಲ್ಲವೆ ಶಿಸ್ತು ಕ್ರಮಕ್ಕೆ ಸಿಎಂಗೆ ಶಿಫಾರಸ್ಸು

ಪೊಲೀಸ್ ಅಧಿಕಾರಿಗಳ ಸಭೆಯಲ್ಲಿ ಶಾಸಕ ದರ್ಶನ್ ಧ್ರುವನಾರಾಯಣ್ ಎಚ್ಚರಿಕೆ

ನಂಜನಗೂಡು: ನಗರದಲ್ಲಿ ಹೆಚ್ಚುತ್ತಿರುವ ಸರಣಿ ಕಳ್ಳತನ, ದರೋಡೆ, ಕೊಲೆ, ಸುಲಿಗೆಗಳಂತಹ ಅಪರಾಧ ಪ್ರಕರಣಗಳಿಂದ ಸಾರ್ವಜನಿಕರು ಬೆಚ್ಚಿ ಬಿದ್ದಿದ್ದಾರೆ. ಪೊಲೀಸ್ ಅಧಿಕಾರಿಗಳು ಅಪರಾಧ ಪ್ರಕರಣಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಕ್ರಮ ಜರುಗಿಸಬೇಕು. ಇಲ್ಲವಾದಲ್ಲಿ ಮುಖ್ಯಮಂತ್ರಿಗಳು ಮತ್ತು ಗೃಹ ಸಚಿವರನ್ನು ಭೇಟಿಯಾಗಿ ಪೊಲೀಸ್ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮಕ್ಕೆ ಶಿಫಾರಸ್ಸು ಮಾಡಲಾಗುವುದು ಎಂದು ಶಾಸಕ ದರ್ಶನ್ ಧ್ರುವನಾರಾಯಣ ಎಚ್ಚರಿಕೆ ನೀಡಿದ್ದಾರೆ.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ್ ಬಾಲದಂಡಿ ಹಾಗೂ ಪೊಲೀಸ್ ಅಧಿಕಾರಿಗಳ ಜೊತೆ ನಗರದ ತಾಲೂಕು ಕಚೇರಿ ಸಭಾಂಗಣದಲ್ಲಿ ಸಭೆ ನಡೆಸಿ ಮಾತನಾಡಿದರು. ನಗರದಲ್ಲಿ ಅಕ್ರಮ ಮದ್ಯ ಮಾರಾಟ, ಗಾಂಜಾ, ಡ್ರಗ್ಸ್ ಸರಬರಾಜು ಮಾಡುತ್ತಿರುವ ಸಮಾಜಘಾತಕ ವ್ಯಕ್ತಿಗಳೊಂದಿಗೆ ಸ್ಥಳೀಯ ಪೊಲೀಸರು ಕೈಜೋಡಿಸಿದ್ದಾರೆ ಎಂಬ ಬಗ್ಗೆ ವ್ಯಾಪಕ ದೂರುಗಳು ಕೇಳಿ ಬರುತ್ತಿವೆ. ನಗರದಲ್ಲಿ ಸರಣಿ ಕಳ್ಳತನ ನಡೆಯುತ್ತಿದ್ದರೂ, ಯಾವುದೇ ಪ್ರಕರಣವನ್ನು ಪೊಲೀಸರು ಪತ್ತೆ ಮಾಡಿಲ್ಲ. ನಾಗರಿಕರು ತಮ್ಮ ರಕ್ಷಣೆಯ ಬಗ್ಗೆ ಚಿಂತಿಸಬೇಕಾದ ಪರಿಸ್ಥಿತಿ ಇದೆ. ನಗರ ಪೊಲೀಸ್ ಠಾಣೆಗೆ ಹೆಚ್ಚಿನ ಸಿಬ್ಬಂದಿ ನೇಮಿಸಿ, ರಾತ್ರಿ ಗಸ್ತು ಹೆಚ್ಚಿಸಿ, ಅಗತ್ಯ ಕ್ರಮ ವಹಿಸಬೇಕು ಎಂದು ಅವರು ಸೂಚಿಸಿದರು.

ರಾತ್ರಿ ಗಸ್ತು ಹೆಚ್ಚಿಸಲು ಪೊಲೀಸ್ ಸಿಬ್ಬಂದಿಗಳ ಕೊರತೆ ಇದ್ದರೆ ನಗರದ ನೂರಕ್ಕೂ ಹೆಚ್ಚು ಯುವಕರು ಪೊಲೀಸರೊಂದಿಗೆ ತಂಡ ಕಟ್ಟಿಕೊಂಡು ರಾತ್ರಿ ಗಸ್ತು ತಿರುಗಲು ಸಿದ್ದರಿದ್ದಾರೆ. ಯುವಕರನ್ನು ಬಳಸಿಕೊಳ್ಳಿ, ನಗರದ ಇತಿಹಾಸದಲ್ಲಿ ಈ ರೀತಿ ಸರಣಿ ಕಳ್ಳತನ ನಡೆದಿರಲಿಲ್ಲ. ಕಳ್ಳರನ್ನು ಪತ್ತೆ ಹಚ್ಚಿ, ರಕ್ಷಣೆ ನೀಡಿ. –ಸ್ಥಳೀಯ ನಿವಾಸಿಗಳು



ಶಾಸಕ ದರ್ಶನ್ ಧ್ರುವನಾರಾಯಣ್ ಶುಕ್ರವಾರ ನಂಜನಗೂಡಿನಲ್ಲಿ ಪೊಲೀಸ್ ಅಧಿಕಾರಿಗಳ ಸಭೆ ನಡೆಸಿದರು.

ನಂಜನಗೂಡು ತಾಲೂಕು ಮುಖ್ಯಮಂತ್ರಿಗಳ ಸ್ವಕ್ಷೇತ್ರಕ್ಕೂ ಒಳಪಡುವ ಕಾರಣ, ಇನ್ನು ಮುಂದೆ ಯಾವುದೇ ಅಪರಾಧ ಪ್ರಕರಣಗಳು ನಡೆಯದಂತೆ ಎಚ್ಚರಿಕೆ ವಹಿಸಿ ಕೆಲಸ ನಿರ್ವಹಿಸಬೇಕು. ಅಲ್ಲದೆ ಅಪರಾಧ ಪ್ರಕರಣಗಳಲ್ಲಿ ತೊಡಗಿರುವವರ ಮೇಲೆ ಕಠಿಣ ಕಾನೂನು ಕ್ರಮ ಜರುಗಿಸಿ ಅಪರಾಧ ಪ್ರಕರಣಗಳನ್ನು ತಡೆಗಟ್ಟಲು ಮುಂದಾಗಬೇಕು. ಇಲ್ಲವಾದಲ್ಲಿ ಮುಖ್ಯಮಂತ್ರಿ ಮತ್ತು ಗೃಹ ಸಚಿವರನ್ನು ಭೇಟಿಯಾಗಿ ಪೊಲೀಸ್ ಅಧಿಕಾರಿಗಳ ಮೇಲೆ ಕಠಿಣ ಕ್ರಮ ಜರುಗಿಸಲು ಶಿಫಾರಸ್ಸು ಮಾಡಲಾಗುವುದು ಎಂದು ತಾಕೀತು ಮಾಡಿದರು.

ಸಭೆಯಲ್ಲಿ ತಹಸೀಲ್ದಾರ್ ಶಿವಕುಮಾರ್ ಕಾಸ್ನೂರ್, ಎ.ಎಸ್.ಪಿ.ಮಲ್ಲಿಕ್, ಡಿವೈಎಸ್‌ಪಿ ರಘು, ಸಿಪಿಐಗಳಾದ ಸಿ.ಎಂ.ರವೀಂದ್ರ, ಚಂದ್ರಶೇಖರ್, ಎಸ್‌ಐಗಳಾದ ಕೃಷ್ಣಕಾಂತ್ ಕೋಳಿ, ಚೇತನ್ ಕುಮಾರ್ ಉಪಸ್ಥಿತರಿದ್ದರು.

"ಸರಣಿ ಕಳ್ಳತನ ಪ್ರಕರಣಗಳ ಬಗ್ಗೆ ವ್ಯಾಪಕ ದೂರುಗಳು ಕೇಳಿ ಬಂದಿವೆ. ಸ್ಥಳೀಯ ಶಾಸಕರು ಸಹ ಸಭೆ ನಡೆಸಿ ಅಧಿಕಾರಿಗಳಿಗೆ ಚುರುಕು ಮುಟ್ಟಿಸುವಂತೆ ತಿಳಿಸಿದ್ದರಿಂದಾಗಿ ತಾಲೂಕು ಕಚೇರಿಯಲ್ಲಿ ಸಭೆ ನಡೆಸಿ ಕಳೆದ ಕೆಲ ವರ್ಷಗಳ ಅಪರಾಧ ಪ್ರಕರಣಗಳ ಅಂಕಿ ಅಂಶಗಳನ್ನು ಪರಿಶೀಲಿಸಲಾಗಿದೆ. ಕೆಲ ಪ್ರಕರಣಗಳಲ್ಲಿ ಪೊಲೀಸರು ಸಹ ಸಾಥ್ ನೀಡುತ್ತಿದ್ದಾರೆ ಎಂಬ ಬಗ್ಗೆ ವ್ಯಾಪಕ ದೂರು ಕೇಳಿ ಬರುತ್ತಿದೆ. ಆದ್ದರಿಂದ ಅಪರಾಧ ಪ್ರಕರಣಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ನಗರ ಪೊಲೀಸ್ ಠಾಣೆಗೆ ಹೆಚ್ಚಿನ ಪೊಲೀಸ್ ಸಿಬ್ಬಂದಿ ನೇಮಿಸಿ ರಾತ್ರಿ ಗಸ್ತು ಹೆಚ್ಚಿಸಲಾಗುವುದು. ಅಲ್ಲದೆ ನಗರ ಪ್ರದೇಶದಲ್ಲಿ ನಾಕಬಂದಿ ರಚಿಸಿ ವಾಹನಗಳ ತಪಾಸಣೆ ನಡೆಸಿ ನಿಗಾ ವಹಿಸಲಾಗುವುದು. ಅಲ್ಲದೆ ಕೆಲವೆಡೆ ಸಿಸಿಟಿವಿ ಅಳವಡಿಸಲು ಕ್ರಮವಹಿಸಲಾಗುವುದು.

– ಮಲ್ಲಿಕಾರ್ಜುನ್ ಬಾಲದಂಡಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ.

ಮರದ ಪಟ್ಟಿಯಿಂದ ಹೊಡೆದು ಪತ್ನಿ ಕೊಂದ ಪತಿ

ಹಿಂಸೆ ತಾಳಲಾರದೆ ತವರು ಮನೆಯಲ್ಲಿದ್ದರೂ ಬಿಡದ ಪಾಪಿ

ನಂಜನಗೂಡು, ಜ.9– ಪತಿಯಿಂದ ದೂರಾಗಿ ತವರು ಮನೆಯಲ್ಲಿ ತನ್ನ ಮಕ್ಕಳೊಂದಿಗೆ ವಾಸಿಸುತ್ತಿದ್ದ ಪತ್ನಿಯನ್ನು ಪತಿಯೇ ಮರದ ಪಟ್ಟಿಯಿಂದ ತಲೆಗೆ ಹೊಡೆದು ಭರ್ಬರವಾಗಿ ಹಲ್ಲೆ ಮಾಡಿ ಕೊಲೆ ಮಾಡಿರುವ ಅಮಾನುಷ ಘಟನೆ ತಾಲೂಕಿನ ಕಳಲೆ ಗ್ರಾಮದಲ್ಲಿ ಸಂಭವಿಸಿದೆ.

ಕಳಲೆ ಗ್ರಾಮದ ದೊಡ್ಡ ಬೀದಿ ನಿವಾಸಿ ಸುಧಾ(35) ಕೊಲೆಯಾದ ಮಹಿಳೆ. ಮೈಸೂರು ತಾಲೂಕು ಜಯಪುರದ ಬಳಿಯ ಕಳವಾಡಿ ನಿವಾಸಿ ಮಹೇಶ್ ಎಂಬಾತನೇ ಪತ್ನಿಯನ್ನು ಕೊಂದ ಆರೋಪಿ.

10 ವರ್ಷಗಳ ಹಿಂದೆ ಸುಧಾ ಮೈಸೂರು ತಾಲೂಕಿನ ಕಳವಾಡಿಯಲ್ಲಿ ವಾಸವಿದ್ದ ಮಹೇಶ್ ಎಂಬಾತನೊಂದಿಗೆ ವಿವಾಹವಾಗಿದ್ದರು. ದಂಪತಿಗೆ ಇಬ್ಬರು ಮಕ್ಕಳಿದ್ದರು. ಆಗಾಗ ದಂಪತಿ ನಡುವೆ ಜಗಳ ಉಂಟಾಗುತ್ತಿದ್ದುದರಿಂದ 2 ವರ್ಷದ ಹಿಂದೆ ಗೃಹಿಣಿ ಸುಧಾ ಓರ್ವ ಪುತ್ರ ಹಾಗೂ ಪುತ್ರಿಯೊಡನೆ ಪತಿಯನ್ನು ತೊರೆದು ತವರು ಮನೆಯಲ್ಲಿ ತನ್ನ ತಾಯಿಯೊಂದಿಗೆ ವಾಸಿಸುತ್ತಿದ್ದರು. ಆಗಾಗ ಮಕ್ಕಳನ್ನು ನೋಡಲೆಂದು ಬರುತ್ತಿದ್ದ ಪತಿ ಮಹೇಶ್ ಪತ್ನಿ ಜೊತೆ ಜಗಳವಾಡುತ್ತಿದ್ದ ಎನ್ನಲಾಗಿದೆ.



ಮಹೇಶ್



ಸುಧಾ

ಶುಕ್ರವಾರ ಸಹ ಕಳಲೆಗೆ ಆಗಮಿಸಿ ಪತ್ನಿಯೊಡನೆ ತಗಾದೆ ತೆಗೆದು ಜಗಳ ಆರಂಭಿಸಿದ ಮಹೇಶ್ ಮರದ ಪಟ್ಟಿಯಿಂದ ಪತ್ನಿಯ ತಲೆಗೆ ಬಲವಾಗಿ ಹೊಡೆದಿದ್ದಾನೆ. ಇದರಿಂದಾಗಿ ತೀವ್ರ ರಕ್ತಸ್ರಾವಗೊಂಡು ಸುಧಾ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಮಾಹಿತಿ ತಿಳಿದು ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ, ಎಎಸ್ಪಿ ಮಲ್ಲೀಕ್, ಡಿವೈಎಸ್ಪಿ ರಘು ಹಾಗೂ ವೃತ್ತ ನಿರೀಕ್ಷಕ ಆನಂದ್ ಭೇಟಿ ನೀಡಿ ಪರಿಶೀಲನೆ ನಡೆಸಿ ಶವವನ್ನು ಮರಣೋತ್ತರ ಪರೀಕ್ಷೆಗೆ ಒಳಪಡಿಸಿ ವಾರಸುದಾರರಿಗೆ ಹಸ್ತಾಂತರಿಸಿದರು.

ಈ ಸಂಬಂಧ ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿಕೊಂಡಿರುವ ಪೊಲೀಸರು ಪತಿ ಮಹೇಶ್‌ನನ್ನು ವಶಕ್ಕೆ ಪಡೆದು ತನಿಖೆ ನಡೆಸುತ್ತಿದ್ದಾರೆ.

ತಟ್ಟೆಕೆರೆ ಶಾಲೆಗೆ ವಾಟರ್ ಫಿಲ್ಟರ್ ಕೊಡುಗೆ

ಹುಣಸೂರು, ಜ.9– ತಾಲೂಕಿನ ತಟ್ಟೆಕೆರೆ ಗ್ರಾಮದ ಸರ್ಕಾರಿ ಅನುದಾನಿತ ಶಾಲೆಗೆ ಹುಣಸೂರು ರೋಟರಿ ಕ್ಲಬ್ ವತಿಯಿಂದ ಶುದ್ಧ ವಾಟರ್ ಫಿಲ್ಟರ್ ನೀಡಲಾಯಿತು.

ಈ ವೇಳೆ ವಾಟರ್ ಫಿಲ್ಟರ್ ದಾನಿ ವಲಯ ಸೇನಾನಿ ಕೆ.ರಮೇಶ್ ಮಾತನಾಡಿ, ಇರುವವರ ನಡುವೆ ಇಲ್ಲದವರ ಬದುಕಿಗೆ, ನೆರವು ನೀಡಿ ಬೆಳಕಾಗುವುದೆ ಜೀವನ. ಅಂತ ಕೆಲಸವನ್ನು ರೋಟರಿ ಸಂಸ್ಥೆ ನಿರಂತರವಾಗಿ ಮಾಡಿಕೊಂಡು ಬರುತ್ತಿದೆ ಎಂದು ಮೆಚ್ಚುಗೆ ವ್ಯಕಪಡಿಸಿದರು.

3181 ಸಹಾಯಕ ಗೌವರ್ನರ್ ತಿರುಮಲಪುರ ರಾಜೇಗೌಡ. ಜೀವ ಚಿಕ್ಕದು, ಆದರೆ ಜೀವನ ದೊಡ್ಡದಿದ್ದು, ಇರುವ ನಡುವೆ ಸ್ನೇಹ, ಸಹಾಯ ಹಸ್ತ ನಮ್ಮದಾಗಬೇಕು. ಆಗ ಮಾತ್ರ ನಮ್ಮ ಬದುಕು ಸಾರ್ವಜನಿಕ ಸಾರ್ಥಕತೆ ಪಡೆದುಕೊಳ್ಳಲಿದೆ ಎಂದರು.

ಸಿದ್ದರಾಮಯ್ಯ ದಾಖಲೆ ಮುಖ್ಯಮಂತ್ರಿ ಹಿನ್ನೆಲೆಯಲ್ಲಿ

ದಿನವಿಡೀ ಆಟೋ ಚಾಲಕನಿಂದ ಉಚಿತ ಪ್ರಯಾಣ ಸೇವೆ

ತಿ.ನರಸೀಪುರ, ಜ.9– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಧೀರ್ಘಾವಧಿಯನ್ನು ಪೂರೈಸಿದ ಹಿನ್ನೆಲೆಯಲ್ಲಿ ಪಟ್ಟಣದಲ್ಲಿ ಅಭಿಮಾನಿ ಆಟೋ ಚಾಲಕರೊಬ್ಬರು ಪ್ರಯಾಣಿಕರಿಗೆ ದಿನವಿಡಿ ಉಚಿತ ಪ್ರಯಾಣ ಸೇವೆ ಒದಗಿಸಿದ್ದಾರೆ.

ಆಟೋಗೆ 'ಅಹಿಂದ ನಾಯಕ ಸಿದ್ದರಾಮಯ್ಯ ದೀರ್ಘಾವಧಿ ಸಿಎಂ ದಾಖಲೆ ಮಾಡಿದ್ದರಿಂದ ಪ್ರಯಾಣಿಕರಿಗೆ ಉಚಿತ' ಎಂಬ ಫಲಕವನ್ನು ಹಾಕಿಕೊಂಡು ಉಚಿತ ಪ್ರಯಾಣ ಸೇವೆಯನ್ನು ಕಲ್ಪಿಸಿ, ಸಾರ್ವಜನಿಕರ ಗಮನ ಸೆಳೆದಿದ್ದಾರೆ.

ಜೀವನ ನಿರ್ವಹಣೆಗೆ ಆಟೋ ಚಾಲನೆ ವೃತ್ತಿಯನ್ನು ಮಾಡಿಕೊಂಡಿರುವ ತಾಲೂಕಿನ ಕರೋಹಟ್ಟಿ ಗ್ರಾಮದ ಚಾಲಕ ಪ್ರವೀಣ್ ಅವರು ನಿತ್ಯವೂ ಖಾಸಗಿ ಬಸ್ ನಿಲ್ದಾಣದಿಂದ ಆಲಗೂಡು ಮಾರ್ಗವಾಗಿ ಕರೋಹಟ್ಟಿ ಗ್ರಾಮದಲ್ಲಿ ರಿಯಾಯ್ತಿ ದರದಲ್ಲಿ ಪ್ರಯಾಣಿಕರನ್ನು ಕರೆದೊಯ್ಯುವುದು ಮಾಮೂಲಿ. ಆದರೆ ಶುಕ್ರವಾರ ಒಂದು ದಿನ ಮಾತ್ರ ಡಿ.ದೇವರಾಜ ಅರಸು ಅವರ ನಂತರ ಸಿದ್ದರಾಮಯ್ಯ ಅವರು ಹೆಚ್ಚಿನ ಕಾಲ ಸಿಎಂ ಆಗಿ ಆಡಳಿತ ನಡೆಸಿದ ಖುಷಿಗೆ ದಿನವೀಡಿ ಪ್ರಯಾಣಿಕರಿಂದ ಯಾವುದೇ ಹಣವನ್ನು ಪಡೆಯದೆ ಉಚಿತ ಪ್ರಯಾಣವನ್ನು ಕಲ್ಪಿಸಿಕೊಟ್ಟರು.



ಬಳಿಕ ಮಾತನಾಡಿದ ಕರೋಹಟ್ಟಿ ಪ್ರವೀಣ್ ಮಾತನಾಡಿ, ನಮ್ಮ ಜಿಲ್ಲೆಯವರೇ ಆಗಿದ್ದ ಡಿ.ದೇವರಾಜ ಅರಸು ಅವರು ಹೆಚ್ಚಿನ ಕಾಲ ಸಿಎಂ ಆಗಿ ಆಡಳಿತದಲ್ಲಿ ಸುಧಾರಣೆ ಕಂಡು, ಬಡವರ ಬದುಕನ್ನು ಹಸನುಗೊಳಿಸಿದರು. ಅವರ ಬಳಿಕ ಸಿದ್ದರಾಮಯ್ಯ ಅವರು ಸಿಎಂ ಆಗಿ ದೀರ್ಘಾವಧಿಗೆ ಆಡಳಿತವನ್ನು ನಡೆಸಿ, ಬಡವರ ಪರವಾದ ಯೋಜನೆಗಳನ್ನು ಜಾರಿಗೆ ತಂದಿದ್ದಾರೆ. ಎಲ್ಲೆಡೆ ಸಂಭ್ರಮವನ್ನು ಆಚರಿಸುತ್ತಿರುವ ಹಿನ್ನೆಲೆಯಲ್ಲಿ ಅವರ ಅಭಿಮಾನಿಯಾಗಿ ಇಂದು ಪ್ರಯಾಣಿಕರಿಗೆ ಉಚಿತ ಆಟೋ ಪ್ರಯಾಣ ಸೇವೆಯನ್ನು ಖುಷಿಯಿಂದಲೇ ನೀಡುತ್ತಿದ್ದೇನೆ ಎಂದು ತಿಳಿಸಿದರು.

ನೂರಲಕುಪ್ಪೆಯಲ್ಲಿ ಒತ್ತುವರಿ ಓಣಿ ತೆರವು



ಹೆಚ್.ಡಿ.ಕೋಟೆ, ಜ.9–ಕಳೆದ 20 ವರ್ಷಗಳಿಂದ ಒತ್ತುವರಿಯಾಗಿದ್ದ ತಾಲೂಕಿನ ನೂರಲಕುಪ್ಪೆ ಗ್ರಾಮ ಓಣಿಯನ್ನು ಇಂದು ತೆರವುಗೊಳಿಸಲಾಯಿತು.


ಓಣಿ ಒತ್ತುವರಿಯಾಗಿದ್ದರಿಂದ ಗ್ರಾಮದ ಚರಂಡಿ ನೀರು ಸಂಪೂರ್ಣವಾಗಿ ಶೇಖರಣೆಗೊಂಡು 20 ವರ್ಷಗಳಿಂದ ನರಕಯಾತನೆ ಪಡುತ್ತಿದ್ದ ಗ್ರಾಮದ ನಿವಾಸಿಗಳಿಗೆ ತಹಸೀಲ್ದಾರ್ ನೇತೃತ್ವದಲ್ಲಿ ಓಣಿಯನ್ನು ತೆರವುಗೊಳಿಸಿ ಅನುಕೂಲ ಮಾಡಿಕೊಡಲಾಗಿದೆ.

ಗ್ರಾಮದ ಸರ್ವೆ ನಂ.65ರಲ್ಲಿ ಸಮೀಪದಲ್ಲಿ ಗ್ರಾಮಸ್ಥರು ಓಡಾಡಲು ಇದ್ದ ಓಣಿಯನ್ನು ಅಕ್ಕಪಕ್ಕದ ಕೆಲ ಜಮೀನಿನವರು ಒತ್ತುವರಿ ಮಾಡಿಕೊಂಡು ಓಣಿಯನ್ನು ಮುಚ್ಚಿದ್ದರು ಇದರಿಂದ ಸುಮಾರು 20 ವರ್ಷಗಳಿಂದ ಗ್ರಾಮದ ಚರಂಡಿ ನೀರು ತುಂಬಿ ರೈತರು ಓಣಿಯಲ್ಲಿ ಓಡಾಡಲು ಸಮಸ್ಯೆ ಎದುರಾಗಿತ್ತು ಈ ಕುರಿತು ಅಧಿಕಾರಿಗಳಿಗೆ, ಜನಪ್ರತಿನಿಧಿಗೆ ಗ್ರಾಮಸ್ಥರು ಮನವಿ ಸಲ್ಲಿಸಿದ್ದರೂ ಪ್ರಯೋಜನವಾಗಿರಲಿಲ್ಲ.

ತಹಸೀಲ್ದಾರ್ ಶ್ರೀನಿವಾಸ್ ನೇತೃತ್ವದಲ್ಲಿ ಪೊಲೀಸ್ ಇಲಾಖೆ, ಸರ್ವೆ ಇಲಾಖೆ, ಗ್ರಾಮ ಪಂಚಾಯಿತಿ ಅಧಿಕಾರಿಗಳು ಭೇಟಿ ನೀಡಿ ಕೊನೆಗೂ ಒತ್ತುವರಿಯಾಗಿದ್ದ ಓಣಿ ರಸ್ತೆಯನ್ನು ಬಿಡಿಸಿ ಚರಂಡಿ ನೀರು ಹೋಗುವ ನಿಟ್ಟಿನಲ್ಲಿ ಕ್ರಮಕೈಗೊಂಡಿದ್ದಾರೆ.

ಇದೇ ಸಂದರ್ಭದಲ್ಲಿ ಎಡಿಎಲ್‌ಆರ್ ಬಸವರಾಜು, ಎಸ್‌ಐ ಚಂದ್ರಹಾಸ್, ಪಿಡಿಒ ಪುರುಷೋತ್ತಮ್, ಅಂತರಸಂತೆ ಪುಟ್ಟರಾಜು, ಇನ್ನು ಮುಂತಾದವರು ಹಾಜರಿದ್ದರು.

ಬೆಳ್ಳಂಬೆಳಗೆ ಕಾಡಾನೆಗಳ ದಾಳಿ: ರೈತರಲ್ಲಿ ಆತಂಕ



ಮಲ್ಕುಂಡಿ: ಸಮೀಪದ ಬಳ್ಳೂರಹುಂಡಿ ಗ್ರಾಮದಲ್ಲಿ ಬೆಳ್ಳಂಬೆಳ್ಳಗೆ ಕಾಡಾನೆಗಳು ದಾಳಿ ನಡೆಸಿ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ರೈತರನ್ನು ಅಟ್ಟಾಡಿಸಿದೆ. ಇದರಿಂದ ರೈತರು ಅಂತಕಕ್ಕೆ ಒಳಗಾಗಿದ್ದಾರೆ.


ಕಳೆದ 4 ದಿನಗಳಿಂದ ಕಾಡಾನೆಗಳ ಹಾವಳಿ ಹೆಚ್ಚಾಗಿ ಗ್ರಾಮದ ಹಲವು ರೈತರ ಫಸಲುಗಳನ್ನು ನಾಶ ಮಾಡಿವೆ. ಇದರ ಬಗ್ಗೆ ಅರಣ್ಯ ಇಲಾಖೆಗೆ ವಿಚಾರ ತಿಳಿಸಿದರೂ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ರೈತ ಮುಖಂಡ ಕೆಂಪಣ್ಣ ಆರೋಪಿಸಿದ್ದಾರೆ.

ಅರಣ್ಯ ಇಲಾಖೆಯ ಬೇಜವಾಬ್ದಾರಿಯಿಂದ ಗುರುವಾರ ರಾತ್ರಿ 5 ಕಾಡಾನೆಗಳು ರೈತರ ಜಮೀನಿಗೆ ಲಗ್ಗೆಯಿಟ್ಟು ರೈತರ ಜಮೀನುಗಳಲ್ಲಿ ಬೀಡು ಬಿಟ್ಟಿದ್ದರಿಂದ ರೈತರು ತಮ್ಮ ಜಮೀನುಗಳಿಗೆ ಹೋಗಿ ಕೆಲಸ ಮಾಡಲು ಭಯಭೀತರಾದರು. ಬಳ್ಳೂರಹುಂಡಿ ಗ್ರಾಮದಿಂದ ಬಂದ 5 ಆನೆಗಳು ದೇವರಾಯಶೆಟ್ಟಿಪುರ ಗ್ರಾಮದ ಕಡೆ ಸಾಗಿವೆ.

ಗ್ರಾಮದ ರೈತ ಮಾದಪ್ಪ ಎಂಬುವವರು ತಮ್ಮ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ವೇಳೆ ಅವರು ಕಾಡಾನೆಗಳು ಕಂಡು ಗಾಬರಿಗೊಂಡು ಓಡುವ ಸಮಯದಲ್ಲಿ ಅಯ ತಪ್ಪಿ ಕೆಳಗೆ ಬಿದ್ದು ಸಣ್ಣಪುಟ್ಟ ಗಾಯಾಗಳಾಗಿವೆ. ಅರಣ್ಯ ಅಧಿಕಾರಿಗಳು ರಾತ್ರಿ ವೇಳೆ ಕಾಡಾಂಚಿನ ಪ್ರದೇಶದ ಗೇಟ್‌ಗಳನ್ನು ಮುಚ್ಚುವುದಿಲ್ಲ. ಆದ್ದರಿಂದ ಆನೆಗಳು ಸರಾಗವಾಗಿ ಕಾಡಿನಿಂದ ನಾಡಿನತ್ತ ಬರುತ್ತಿವೆ ಎಂದು ಗ್ರಾಮಸ್ಥರು ದೂರಿದರು.

ಈಗಾಗಲೇ ರೈತರು ಬೆಳೆದ ಫಸಲುಗಳು ಕಟಾವಿಗೆ ಬಂದು ಒಕ್ಕಣೆ ಮಾಡುವ ಹಂತದಲ್ಲಿದ್ದಾರೆ. ಅದರೆ ಹಾಡಹಗಲೆ ಆನೆಗಳ ಅಟ್ಟಹಾಸದಿಂದ ರೈತರು ತಮ್ಮ ಜಮೀನಿಗೆ ತೆರಳಿ ಫಸಲುಗಳನ್ನು ಕೈಗೆ ಸೇರಿಸಿಕೊಳ್ಳಲು ಭಯಬೀತರಾಗಿದ್ದಾರೆ. ಆದ್ದರಿಂದ ಅರಣ್ಯ ಅಧಿಕಾರಿಗಳು ತಕ್ಷಣವೇ ಗಾಯಾಳು ಮಾದಪ್ಪ ಅವರಿಗೆ ಪರಿಹಾರ ನೀಡಬೇಕು ಮತ್ತು ಕಾಡಾನೆಗಳ ಹಾವಳಿಯನ್ನು ತಪ್ಪಿಸಲು ಮುಂದಾಗಬೇಕು. ಮುಂದಿನ ದಿನಗಳಲ್ಲಿ ಕರ್ನಾಟಕ ರಾಜ್ಯ ಕಬ್ಬು ಬೆಳೆಗರಾರ ರೈತ ಸಂಘದ ವತಿಯಿಂದ ಅರಣ್ಯ ಕಛೇರಿಗೆ ಮುತ್ತಿಗೆ ಹಾಕಲಾಗುವುದು ಎಂದು ಎಚ್ಚರಿಕೆ ನೀಡಿದರು.

ವಿಜಯೇಂದ್ರಗೆ ಸನ್ಮಾನ




ಮೈಸೂರು ಜಿಲ್ಲಾ ಬಿಜೆಪಿ ಗ್ರಾಮಾಂತರ ಪ್ರಧಾನ ಕಾರ್ಯದರ್ಶಿಯಾಗಿ ನೇಮಕಗೊಂಡ ವಿನಯ್ ಕುಮಾರ್, ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಅವರನ್ನು ಬೆಂಗಳೂರಿನ ನಿವಾಸದಲ್ಲಿ ಅಭಿನಂದಿಸಿದರು. ಚಿತ್ರದಲ್ಲಿ ಮೈಸೂರು ಗ್ರಾಮಾಂತರ ಜಿಲ್ಲಾಧ್ಯಕ್ಷ ಕುಂಬರಳ್ಳಿ ಸುಬ್ಬಣ್ಣ, ಎನ್.ವಿ.ಫಣೀಶ್, ಎಸ್.ಮಹದೇವಯ್ಯ, ರಾಮಚಂದ್ರ, ಮಂಗಳ ಸೋಮಶೇಖರ್, ಡಾ.ಶಿವರಾಮು, ಅರುಣ್ ಗೌಡ, ಪರಿಕ್ಷಿತ್ ರಾಜ್ ಉಪಸ್ಥಿತರಿದ್ದರು.

ಬಿಳಿಕೆರೆ ವ್ಯಾಪ್ತಿಯಲ್ಲಿ ಕೋಪ್ಟಾ ದಾಳಿ

ಹುಣಸೂರು, ಜ.9– ಹುಣಸೂರು ತಾಲೂಕು ಬಿಳಿಕೆರೆ ವ್ಯಾಪ್ತಿಯಲ್ಲಿ ಕೋಪ್ಟಾ ಕಾಯ್ದೆಯಡಿ ದಾಳಿ ನಡೆಸಲಾಯಿತು. ದಾಳಿಯಲ್ಲಿ ಇತರೆ ಇಲಾಖೆ ಸಹಕಾರದೊಂದಿಗೆ ಹೋಟೆಲ್, ಬಾರ್& ರೆಸ್ಟೋರೆಂಟ್, ಕಿರಾಣಿ ಅಂಗಡಿ, ಬೇಕರಿ, ಟೀ ಸ್ಟಾಲ್ ಪೆಟ್ಟಿಗೆ ಅಂಗಡಿ ಹಾಗೂ ಸಗಟು ಮಾರಾಟ ಅಂಗಡಿಗಳ ಮೇಲೆ ತನಿಖಾ ದಾಳಿ ನಡೆಸಿ ಕಾಯ್ದೆ ಉಲ್ಲಂಘನೆ ಪ್ರಕರಣಗಳಿಗೆ ಸ್ಥಳದಲ್ಲಿಯೇ ದಂಡ ವಿಧಿಸಲಾಯಿತು. ನಿಯಮ ಉಲ್ಲಂಘಿಸಿದಂತೆ ಹಾಗೂ ತಂಬಾಕು ಸೇವನೆಯ ದುಷ್ಪರಿಣಾಮ ಕುರಿತು ಅರಿವು ಆರೋಗ್ಯ ಶಿಕ್ಷಣ ನೀಡಲಾಯಿತು.

ಮೂಗೂರು ಜಾತ್ರೆ ಯಶಸ್ವಿ: ಸಿ.ಎಸ್.ಪುಟ್ಟರಾಜು ಅವರಿಗೆ ಸನ್ಮಾನ



ಮೂಗೂರಿನ ಶ್ರೀ ತ್ರಿಪುರ ಸುಂದರಿ ಅಮ್ಮನವರ ಜಾತ್ರಾ ಮಹೋತ್ಸವದ ಯಶಸ್ಸಿಗೆ ಸಹಭಾಗಿತ್ವ ವಹಿಸಿದ್ದ ಮಾಜಿ ಸಚಿವರಾದ ಸಿ.ಎಸ್.ಪುಟ್ಟರಾಜು ಅವರನ್ನು ಗ್ರಾಮದ ಪ್ರಮುಖರು ಮೂಗೂರಿನ ಅಮ್ಮ ನವರ ಸೇವಾ ಸಮಿತಿ ಕಚೇರಿಯಲ್ಲಿ ಗೌರವಿಸಿದರು. ಈ ಸಂದರ್ಭದಲ್ಲಿ ಗ್ರಾಪಂ ಅಧ್ಯಕ್ಷ ಎಂ.ಡಿ.ಲೋಕೇಶ್, ಮುಖಂಡರಾದ ಎಂ.ಪಿ.ಮರಿಸ್ವಾಮಿ, ಚಂದ್ರಪ್ಪ, ಮಾದೇಶ್, ಬಾಲ ಶಂಕರ್, ಮಲ್ಲಿಕಾರ್ಜುನ, ಶಾಂತ ನಾಗರಾಜು, ಇತರರು ಉಪಸ್ಥಿತರಿದ್ದರು.

ಮೊಬೈಲ್‌ನಿಂದ ಮಕ್ಕಳನ್ನು ದೂರವಿಡಲು ಕರೆ

ತಿ.ನರಸೀಪುರ, ಜ.9– ಮೊಬೈಲ್ ಮೋಹ ಮಕ್ಕಳನ್ನು ಆಕರ್ಷಿಸಿ, ಹಾಳು ಮಾಡುತ್ತಿರುವುದರಿಂದ ಪೋಷಕರು ಸಾಧ್ಯವಾದಷ್ಟು ಮಕ್ಕಳನ್ನು ಮೊಬೈಲ್‌ನಿಂದ ದೂರವಿಡಬೇಕು ಎಂದು ಕೆನರಾ ಬ್ಯಾಂಕ್ ಅಮುಲ್ಯ ಕೇಂದ್ರದ ಆರ್ಥಿಕ ಸಾಕ್ಷರತಾ ಅಧಿಕಾರಿ ಎಸ್.ವಿ.ರಮೇಶ್ ರಾವ್ ಸಲಹೆ ನೀಡಿದ್ದಾರೆ.

ತಾಲೂಕಿನ ಯರಗನಹಳ್ಳಿ ಗ್ರಾಮದಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಗ್ರಾಮೀಣ ಫೌಂಡೇಶನ್ ಆಫ್ ಕರ್ನಾಟಕ ಟ್ರಸ್ಟ್‌ನ ವತಿಯಿಂದ ಆಯೋಜಿಸಿದ್ದ ಶಾಲಾ ಮಕ್ಕಳಿಗೆ ಉಚಿತ ನೋಟ್ ಪುಸ್ತಕ, ಲೇಖನಿ ಸಾಮಗ್ರಿಗಳ ವಿತರಣೆ ಹಾಗೂ ಸಾಧಕರ ಸನ್ಮಾನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ಅತಿಯಾದ ಮೊಬೈಲ್ ಬಳಕೆಯಿಂದ ಮಕ್ಕಳಲ್ಲಿ ದೃಷ್ಟಿ ದೋಷ, ಶ್ರವಣದ ಸಾಮರ್ಥ್ಯ ಕುಗ್ಗುವಿಕೆ ಹಾಗೂ ಮಾನಸಿಕ ಖಿನ್ನತೆ ಹೆಚ್ಚುತ್ತಿರುವುದರಿಂದ ಮಕ್ಕಳು ಕೂಡ ಮೊಬೈಲ್ ಬಳಕೆ ಕ್ರಮೇಣವಾಗಿ ಕೈ ಬಿಡಬೇಕು ಎಂದರು.



ನೋಟ್ ಪುಸ್ತಕ, ಲೇಖನಿ ಸಾಮಗ್ರಿಗಳ ವಿತರಣೆ ಕಾರ್ಯಕ್ರಮದಲ್ಲಿ ಸಾಧಕರನ್ನು ಸನ್ಮಾನಿಸಲಾಯಿತು.

ಗ್ರಾಮೀಣ ಫೌಂಡೇಶನ್ ಆಫ್ ಕರ್ನಾಟಕ ಟ್ರಸ್ಟ್‌ನ ಅಧ್ಯಕ್ಷ ಶಂಭುದೇವನಪುರ ಎನ್.ಮರಿಸ್ವಾಮಿ ಮಾತನಾಡಿದರು.

ಇದೇ ವೇಳೆ ಎಸ್.ವಿ.ರಮೇಶ್ ರಾವ್ ಸೇರಿದಂತೆ ಉದ್ಭವ್ ಶೈಕ್ಷಣಿಕ ಮತ್ತು ಗ್ರಾಮೀಣ ಅಭಿವೃದ್ಧಿ ಸಂಸ್ಥೆಯ ಶಿವಾನಂದ, ಪತ್ರಿಕಾ ಪ್ರಸರಂಗ ಜಿಲ್ಲಾ ವ್ಯವಸ್ಥಾಪಕ ಶ್ರೀಧರ್ ಹಾಗೂ ಉದ್ಯಮಿ ಸತೀಶ್ ಅವರನ್ನು ಸನ್ಮಾನಿಸಲಾಯಿತು. ಟ್ರಸ್ಟ್‌ನ ನೂತನ ವರ್ಷದ ಬಿಡುಗಡೆ ಮಾಡಿದ ಬಳಿಕ ಶಾಲಾ ಮಕ್ಕಳಿಗೆ ಮಧ್ಯಾಹ್ನದ ಬಿಸಿ ಊಟದ ಸಮಯಕ್ಕೆ ಸಿಹಿ ಭೋಜನವನ್ನು ಬಡಿಸಲಾಯಿತು.

ನರಗ್ಯಾತನಹಳ್ಳಿ ಮಠದ ಶ್ರೀ ಶಿವಕುಮಾರ ಸ್ವಾಮೀಜಿ, ಹೊಸೂರುಹುಂಡಿ ಮಠದ ಶ್ರೀ ರಾಜಶೇಖರ ಸ್ವಾಮೀಜಿ, ಗ್ರಾಮೀಣ ಫೌಂಡೇಶನ್ ಆಫ್ ಕರ್ನಾಟಕ ಟ್ರಸ್ಟ್ ಅಧ್ಯಕ್ಷ ಎನ್.ಮರಿಸ್ವಾಮಿ, ಖಜಾಂಚಿ ಪೂಜಿತ್ ಮೆಡಿಕಲ್ಸ್ ಕುಮಾರ್, ನಿರ್ದೇಶಕರಾದ ಶಿವಣ್ಣ, ಬಿ.ನಿಂಗರಾಜು ಸಿ.ಬಿ ಹುಂಡಿ, ಸಿದ್ದರಾಜು ಪಿ.ಹೊಸಪುರ ಇದ್ದರು.

ಹನಗೋಡು ಬಳಿ ಹಾಡಹಗಲೇ ಹಸು ಮೇಲೆ ಹುಲಿ ದಾಳಿ

ಆಕ್ರೋಶಗೊಂಡ ಗ್ರಾಮಸ್ಥರಿಂದ ಗಾಯಗೊಂಡ ಹಸುವನ್ನಿಟ್ಟುಕೊಂಡು ರಸ್ತೆ ತಡೆ

ಹನಗೋಡು, ಜ.9– ಹನಗೋಡು ಹೋಬಳಿಯ ಗುರುಪುರ ಟಿಬೆಟ್ ಕ್ಯಾಂಪ್‌ನ ಬಳಿಯ ಜಮೀನಿನಲ್ಲಿ ಹಾಡ ಹಗಲೇ ಹುಲಿಯೊಂದು ದಾಳಿ ನಡೆಸಿ ಹಸುವನ್ನು ತೀವ್ರ ಗಾಯಗೊಳಿಸಿದ್ದು, ಆಕ್ರೋಶಗೊಂಡ ಗ್ರಾಮಸ್ಥರು ಹುಣಸೂರು–ಹೆಚ್.ಡಿ.ಕೋಟೆ ರಸ್ತೆಯ ಹೊಸೂರು ಗೇಟ್‌ನಲ್ಲಿ ಹಸುವನ್ನಿಟ್ಟುಕೊಂಡು ರಸ್ತೆ ತಡೆ ನಡೆಸಿದರು.

ತಾಲೂಕಿನ ಹೊಸೂರು ಗೇಟ್‌ನ ಚೆಲುವಯ್ಯನವರಿಗೆ ಸೇರಿದ ಹಸು ಇದಾಗಿದ್ದು, ಹಸುವಿನ ನರಳಾಟ ಕಂಡು ಗ್ರಾಮಸ್ಥರು ಆಕ್ರೋಶಗೊಂಡಿದ್ದಾರೆ. ಗುರುಪುರದ ಟಿಬೆಟ್ ಚೋಟಾ ಲಾಮಾ ಕ್ಯಾಂಪ್‌ನ ಜಮೀನಿನಲ್ಲಿ ಹೊಸೂರು ಗೇಟ್‌ನ ಚೆಲುವಯ್ಯನವರ ಪುತ್ರ ರವಿ, ಮತ್ತಿತರರು ಹಸುಗಳನ್ನು ಒಟ್ಟಿಗೆ ಮೇಯಿಸುತ್ತಿದ್ದರು. ಮದ್ಯಾಹ್ನ 2.30ರ ವೇಳೆ ಹುಲಿಯು ಹಸುವಿನ ಮೇಲೆ ದಾಳಿ ನಡೆಸಿದ್ದನ್ನು ಕಂಡ ದನಗಾಹಿಗಳು ಜೋರಾಗಿ ಕೂಗಿಕೊಂಡರು. ಬೆದರಿದ ಹುಲಿ ಪಕ್ಕದ ಅರಣ್ಯದೊಳಕ್ಕೆ ಓಡಿ ಹೋಗಿದೆ. ತಕ್ಷಣ ರೈತರು ಹುಲಿ ದಾಳಿ ವಿಚಾರವನ್ನು ಗ್ರಾಮಸ್ಥರಿಗೆ ತಿಳಿಸಿದರು. ಗ್ರಾಮಸ್ಥರು ಸ್ಥಳಕ್ಕೆ ಆಗಮಿಸಿ ಗಾಯಗೊಂಡ ಹಸುವನ್ನು ಟ್ರಾಕ್ಟರ್ ಮೂಲಕ ಊರಿಗೆ ತಂದರು.

ಗಾಯಗೊಂಡ ಹಸುವಿಟ್ಟು ಪ್ರತಿಭಟನೆ: ಹುಲಿ ದಾಳಿ ಬಗ್ಗೆ ಅರಣ್ಯ ಇಲಾಖೆಗೆ ಸುದ್ದಿ ಮುಟ್ಟಿಸಿದರೂ ಸಂಜೆಯಾದರೂ ಯಾರೂ ಬಾರದಿದ್ದರಿಂದ ಕುಪಿತಗೊಂಡ ಸುತ್ತ ಮುತ್ತಲ ಗ್ರಾಮಸ್ಥರು ಹೊಸೂರು ಗೇಟ್‌ನಲ್ಲಿ ಗಾಯಗೊಂಡ ಹಸುವನ್ನು ಟ್ರ್ಯಾಕ್ಟರ್‌ನಲ್ಲಿ ಇರಿಸಿ, ಟಯರ್‌ಗೆ ಬೆಂಕಿ ಹಚ್ಚಿ ರಸ್ತೆ ತಡೆ ನಡೆಸಿದರು. ಎರಡೂ ಕಡೆ ನೂರಾರು ವಾಹನಗಳು ಸಾಲುಗಟ್ಟಿ ನಿಂತಿದ್ದವು.



ಹುಲಿ ದಾಳಿಯಿಂದ ಗಾಯಗೊಂಡ ಹಸುವನ್ನು ಇಟ್ಟುಕೊಂಡು ಗ್ರಾಮಸ್ಥರು ಟೈರ್‌ಗೆ ಬೆಂಕಿ ಹಚ್ಚಿ ರಸ್ತೆ ತಡೆ ನಡೆಸುವ ಮೂಲಕ ಅರಣ್ಯ ಇಲಾಖೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.



ವಿಷಯ ತಿಳಿದು ಗ್ರಾಮಾಂತರ ಠಾಣೆ ಸಬ್ ಇನ್ಸ್‌ಪೆಕ್ಟರ್‌ಗಳಾದ ರಾಧಾ, ರಾಮು, ಎಎಸ್‌ಐ ಮಹೇಶ್ ಡಿಎಆರ್ ಪೊಲೀಸರೊಂದಿಗೆ ಸ್ಥಳಕ್ಕಾಗಮಿಸಿ ಪ್ರತಿಭಟನಾಕಾರರೊಂದಿಗೆ ಚರ್ಚಿಸಿ, ರಸ್ತೆ ತಡೆ ತೆರವುಗೊಳಿಸುವಂತೆ ಮನವಿ ಮಾಡಿದರು.

ಆಕ್ರೋಶಗೊಂಡ ಗ್ರಾಮಸ್ಥರು ಸ್ಥಳಕ್ಕೆ ಸಂಜೆಯಾದರೂ ಅರಣ್ಯ ಇಲಾಖೆ ಯಾವೊಬ್ಬ ಅಧಿಕಾರಿಯೂ ಬಂದಿಲ್ಲ. ಸ್ಥಳಕ್ಕೆ ಬರುವವರೆಗೂ ರಸ್ತೆ ತಡೆ ಹಿಂಪಡೆಯಲ್ಲವೆಂದು ಪಟ್ಟು ಹಿಡಿದರು. ಕೊನೆಗೆ ಪೊಲೀಸರು ಅರಣ್ಯಾಧಿಕಾರಿಗಳನ್ನು ಕರೆಸುವ ಭರವಸೆ ಮೇರೆಗೆ ರಾತ್ರಿ ವೇಳೆಗೆ ವಾಹನಗಳ ಓಡಾಟಕ್ಕೆ ಅವಕಾಶ ಮಾಡಿಕೊಟ್ಟರು.

ಹುಲಿ ಸೆರೆ ಹಿಡಿಯಿರಿ: ಸಂಜೆ ವೇಳೆಗೆ ವೀರನಹೊಸಳ್ಳಿ ವಲಯದ ಆರ್‌ಎಫ್‌ಓ ವಿನೋದ್‌ಗೌಡ ಬಂದ ವೇಳೆ ತಡವಾಗಿ ಬಂದಿದ್ದಕ್ಕೆ ಆಕ್ರೋಶ ವ್ಯಕ್ತಪಡಿಸಿದ ಗ್ರಾಮಸ್ಥರು ಹುಲಿ ಸೆರೆ ಹಿಡಿಯಲು ತಕ್ಷಣವೇ ಕೂಂಬಿಂಗ್ ಕಾರ್ಯಾಚರಣೆ ಆರಂಭಿಸುವಂತೆ ಒತ್ತಾಯಿಸಿದರು. ಇದೀಗ ಮುತ್ತುರಾಯನಹೊಸಹಳ್ಳಿ ಕಡೆ ಕೂಂಬಿಂಗ್ ನಡೆಯುತ್ತಿದೆ. ಅಲ್ಲದೆ ಸಿಬ್ಬಂದಿಗಳು ಹುಲಿ ಗಣತಿ ಕಾರ್ಯದಲ್ಲಿ ತೊಡಗಿದ್ದು, ಶನಿವಾರದಿಂದ ಹುಲಿ ಪತ್ತೆಗೆ ಕೂಂಬಿಂಗ್ ಕಾರ್ಯಾಚರಣೆ ನಡೆಸುವುದಾಗಿ ಭರವಸೆ ಇತ್ತು. ಪರಿಹಾರಕ್ಕಾಗಿ ಅರ್ಜಿ ಸಲ್ಲಿಸಿದಲ್ಲಿ ಕೊಡಿಸುವುದಾಗಿ ತಿಳಿಸಿದ ಮೇರೆಗೆ ರಾತ್ರಿ ವೇಳೆಗೆ ಪ್ರತಿಭಟನೆ ಹಿಂಪಡೆದರು.

ಪ್ರತಿಭಟನೆಯಲ್ಲಿ ಗುರುಪುರ ಗ್ರಾ.ಪಂ. ಉಪಾಧ್ಯಕ್ಷ ನಟೇಶ್, ಯ.ರವಿ, ಖಾಲಿದ್, ಸಣ್ಣಶೆಟ್ಟಿ ಇ.ರಾಜು, ಚೆಲುವಯ್ಯ, ಮಹದೇವ್, ಮಂಜು, ಸೇರಿದಂತೆ ಸುತ್ತ ಮುತ್ತಲ ನೂರಾರು ಗ್ರಾಮಸ್ಥರು ಭಾಗವಹಿಸಿದ್ದರು.

ಹರಕೆ ಗೂಳಿ ಸೇರಿ 5 ಹಸುಗಳ ಕಳವು

ನಂಜನಗೂಡು: ಶ್ರೀಕಂಠೇಶ್ವರಸ್ವಾಮಿ ದೇವಾಲಯದ ಹರಕೆ ಗೂಳಿ ಸೇರಿದಂತೆ ನಗರದ ಒಕ್ಕಲಗೇರಿ ಸಮೀಪದ ನಿವಾಸಿಗಳಿಗೆ ಸೇರಿದ 5 ಜಾನುವಾರುಗಳನ್ನು ಕಳ್ಳರು ಕದ್ದೊಯ್ದಿದ್ದು ಈ ಕುರಿತು ಸ್ಥಳೀಯರು ಪಟ್ಟಣ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ದೇವಸ್ಥಾನಕ್ಕೆ ಭಕ್ತರು ಹರಕೆ ರೂಪದಲ್ಲಿ ಬಿಟ್ಟಿದ್ದ ಕಪ್ಪು ಬಣ್ಣದ ಗೂಳಿ ಸೇರಿದಂತೆ ಒಕ್ಕಲಗೇರಿ ನಿವಾಸಿ ಎನ್.ಶಿವಕುಮಾರ್ ಅವರ 1 ವರ್ಷದ ಗಂಡು ಕರು, ಗೋಪಾಲ ಎಂಬುವರಿಗೆ ಸೇರಿದ 4 ವರ್ಷದ ತೆನೆ ಹಸು, ಅಪ್ಪು ಎಂಬುವರಿಗೆ ಸೇರಿದ 1 ವರ್ಷದ ಗಂಡು ಕರು, ಲತಾ ಎಂಬುವರಿಗೆ ಸೇರಿದ 1 ವರ್ಷದ ಹೆಣ್ಣು ಕರು ಸೇರಿದಂತೆ 5 ರಾಸುಗಳನ್ನು ಅಪರಿಚಿತ ಕಳ್ಳರು ಕದ್ದು ವಾಹನದಲ್ಲಿ ತುಂಬಿಕೊಂಡು ಪರಾರಿಯಾಗಿದ್ದಾರೆ. ಈ ಸಂಬಂಧ ಎನ್.ಶಿವಕುಮಾರ್ ಪೊಲೀಸರಿಗೆ ದೂರು ನೀಡಿದ್ದಾರೆ. ಎಫ್‌ಐಆರ್ ದಾಖಲಿಸಿಕೊಂಡು ಪೊಲೀಸರು ತನಿಖೆ ಕೈಗೊಂಡಿದ್ದಾರೆ. ಇನ್ನು ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನಕ್ಕೆ ಭಕ್ತರು ಹರಕೆ ರೂಪದಲ್ಲಿ ಗೋವುಗಳನ್ನು ಬಿಡುವುದು ವಾಡಿಕೆಯಾಗಿದ್ದು ಹೀಗೆ ಬಿಡುವ ಗೋವುಗಳ ನಿರ್ವಹಣೆಗೆ ಯಾವುದೇ ಸೌಕರ್ಯವಿಲ್ಲದಿರುವುದರಿಂದ ಆಗಾಗ ಆಗಂತುಕ ಕಳ್ಳರು ಕಳೆದ ಎರಡು ಮೂರು ವರ್ಷಗಳಿಂದ ರಾತ್ರಿ ಸಮಯದಲ್ಲಿ ದೇವಸ್ಥಾನದ ಹರಕೆ ಗೋವುಗಳನ್ನು ಕದ್ದೊಯ್ಯುತ್ತಿದ್ದರು ಆದರೆ ಇದೀಗ ಸ್ಥಳೀಯ ನಿವಾಸಿಗಳ ರಾಸುಗಳನ್ನೂ ಕಳ್ಳರು ಹೊತ್ತೊಯ್ದಿರುವುದು ಸ್ಥಳೀಯ ನಿವಾಸಿಗಳನ್ನು ಆತಂಕಕ್ಕೊಳಪಡಿಸಿದೆ.

ಕ್ಯಾಲೆಂಡರ್ ಬಿಡುಗಡೆ



ನಂಜನಗೂಡು ತಾಲೂಕಿನ ಹದಿನಾರು ಗ್ರಾಮ ಪಂಚಾಯತಿಯಲ್ಲಿ ನೂತನ ವರ್ಷದ ಪಂಚಾಯಿತಿಯ ಮಾಹಿತಿ ಕ್ಯಾಲೆಂಡರ್ ಅನ್ನು ಪಂಚಾಯತಿ ಅಧ್ಯಕ್ಷರಾದ ಸಣ್ಣ ತಾಯಮ್ಮ ಶಿವಯ್ಯ ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು. ಪಂಚಾಯತಿ ಎಲ್ಲ ಸದಸ್ಯರು ಹಾಜರಿದ್ದರು.

ಮೈಸೂರು ಮಿತ್ರ

ಮೈಸೂರಲ್ಲಿ 50 ಹೊಸ ಸಿಗ್ನಲ್ ಲೈಟ್ ಅಳವಡಿಕೆ

ಅಪಘಾತ, ನಿಯಮ ಉಲ್ಲಂಘನೆ ತಡೆಗೆ ನಗರ ಪೊಲೀಸ್ ಕ್ರಮ



ನಂಜುಮಳಿಗೆ ಫೈವ್ ಲೈಟ್ ಸರ್ಕಲ್‌ನಲ್ಲಿ ಸಿಗ್ನಲ್ ಅಳವಡಿಸಿರುವುದು.



ಆರ್‌ಟಿಓ ಸರ್ಕಲ್‌ನಲ್ಲಿ ಸಿಗ್ನಲ್ ಅಳವಡಿಸಿರುವುದು.

ಮೈಸೂರು, ಜ.9(ವಿವಿಹೆಚ್)– ಮೈಸೂರು ನಗರ ಪೊಲೀಸರು ನಗರದಾದ್ಯಂತ 50 ಹೆಚ್ಚುವರಿ ಸಿಗ್ನಲ್ ಲೈಟ್‌ಗಳ ಅಳವಡಿಕೆ ಮಾಡಿದ್ದಾರೆ. ಆ ಮೂಲಕ ನಗರದಲ್ಲಿ ಹೆಚ್ಚಾಗುತ್ತಿರುವ ಅಪಘಾತ, ಸಂಚಾರ ನಿಯಮ ಉಲ್ಲಂಘನೆಗೆ ಕಡಿವಾಣ ಹಾಕಲು ಮುಂದಾಗಿದ್ದಾರೆ.

ಮೈಸೂರು ನಗರದಲ್ಲಿ ಅಪಘಾತ ಬ್ಲ್ಯಾಕ್ ಸ್ಪಾಟ್‌ಗಳಾಗಿ ಗುರುತಿಸಲ್ಪಟ್ಟಿರುವ ಸ್ಥಳಗಳು ಸೇರಿದಂತೆ 50 ಹೊಸ ಸಿಗ್ನಲ್ ಲೈಟ್ ಅಳವಡಿಕೆ ಮಾಡಲಾಗಿದೆ. ನಂಜುಮಳಿಗೆ ಬಳಿಯ ಫೈವ್ ಲೈಟ್ ಸರ್ಕಲ್ ಸೇರಿದಂತೆ ಹಲವು ಕಡೆಗಳಲ್ಲಿ ತಾತ್ಕಾಲಿಕವಾಗಿ ಸಿಗ್ನಲ್ ಚಾಲನೆ ಮಾಡಲಾಗುತ್ತಿದ್ದು, ಶೀಘ್ರದಲ್ಲಿಯೇ ಎಲ್ಲಾ 50 ಸಿಗ್ನಲ್‌ಗಳು ಕಾರ್ಯಾರಂಭಿಸಲಿವೆ. ಇದರಿಂದ ಅಪಘಾತಗಳ ಸಂಖ್ಯೆ ಹಾಗೂ ಟ್ರಾಫಿಕ್ ಜಾಮ್ ಕಡಿಮೆಯಾಗಲಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಈ ಬಗ್ಗೆ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಸಂಚಾರ ವಿಭಾಗದ ಎಸಿಪಿ ಶಿವಶಂಕರ್, ತಜ್ಞರ ಅಭಿಪ್ರಾಯದ ಮೇರೆಗೆ ಕೆಲವು ಸ್ಥಳಗಳನ್ನು ಗುರುತಿಸಿ ಸಿಗ್ನಲ್ ಅಳವಡಿಸಲಾಗಿದೆ. ಇದರಿಂದ ಇಂದು ತೊಂದರೆ ಎನಿಸಿದರೂ ಮುಂದಿನ ದಿನಗಳಲ್ಲಿ ಇದರ ಉಪಯೋಗದ ಬಗ್ಗೆ ತಿಳಿಯುತ್ತದೆ. ರಸ್ತೆ ಅಪಘಾತದಿಂದ ಪ್ರತಿದಿನ ಸಾವುನೋವುಗಳು ಸಂಭವಿಸುತ್ತಿವೆ. ಅಪಘಾತ ತಪ್ಪಿಸುವುದರ ಜೊತೆಗೆ ಸಂಚಾರ ನಿಯಮ ಉಲ್ಲಂಘನೆ ತಡೆಯುವ ನಿಟ್ಟಿನಲ್ಲಿ ಸಿಗ್ನಲ್ ಅಳವಡಿಸಲಾಗಿದೆ. ಕಳೆದ 3 ತಿಂಗಳುಗಳಿಂದ ಮೈಸೂರು ನಗರದಲ್ಲಿ ಟ್ರಾಫಿಕ್ ಉಲ್ಲಂಘನೆ ಹೆಚ್ಚಾಗಿದೆ. ನಿಗದಿತ ಸಮಯದಲ್ಲಿ ಹಲವು ರಸ್ತೆಗಳಲ್ಲಿ ತೀವ್ರ ಸಂಚಾರ ಅಸ್ತವ್ಯಸ್ತ ಆಗುತ್ತದೆ. ಹಿರಿಯ ನಾಗರಿಕರು, ಮಹಿಳೆಯರ ಸಂಚಾರಕ್ಕೆ ತೊಡಕಾಗುತ್ತಿದೆ. ಇದನ್ನರಿತು ಸೂಕ್ಷ್ಮ ಪ್ರದೇಶಗಳನ್ನು ಗುರುತಿಸಿ ಸಿಗ್ನಲ್ ಹಾಕಲಾಗಿದೆ ಎಂದು ತಿಳಿಸಿದರು.




> ಸಾಂಸ್ಕೃತಿಕ ನಗರಿ ಮೈಸೂರು ಸದಾ ಪ್ರವಾಸೋದ್ಯಮ, ಶಿಕ್ಷಣ, ವ್ಯಾಪಾರ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಂದ ಕೂಡಿರುತ್ತದೆ. ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಜನಸಂಖ್ಯೆ ಹಾಗೂ ವಾಹನಗಳ ದಟ್ಟಣೆಯಿಂದ ಸಂಚಾರ ನಿಯಂತ್ರಣ, ಅಪಘಾತಗಳನ್ನು ತಡೆಯುವುದು ಮಹತ್ವದ ವಿಷಯವಾಗಿದೆ. ಈ ಸಮಸ್ಯೆಯನ್ನು ಸಮರ್ಪಕವಾಗಿ ನಿರ್ವಹಿಸಲು ಸಂಚಾರ ಸಿಗ್ನಲ್‌ಗಳು ಅತ್ಯಂತ ಪ್ರಮುಖ ಪಾತ್ರವಹಿಸುತ್ತವೆ. ಹೀಗಾಗಿ ಮೈಸೂರಿನಲ್ಲಿ ಹೆಚ್ಚುವರಿ ಸಿಗ್ನಲ್ ಅಳವಡಿಸಲಾಗಿದೆ.
> - **ಶಿವಶಂಕರ್**, ಎಸಿಪಿ, ಸಂಚಾರ ವಿಭಾಗ

ಹಲವಾರು ಸಾವು–ನೋವುಗಳು ಸಂಭವಿಸುತ್ತಿದ್ದರೂ ಹೆಲ್ಮೆಟ್ ಹಾಕಲು ನೆಪ ಹೇಳುತ್ತಾರೆ. ಪ್ರಾಣದ ಹಂಗು ತೊರೆದು ಕೆಲಸ ಮಾಡುವ ಪೊಲೀಸರಿಗೆ ಸಾರ್ವಜನಿಕರು ಸಹಕಾರ ನೀಡಬೇಕು. ನಗರದ ಎಲ್ಲ ಕಡೆಗಳಲ್ಲಿಯೂ ಸಿಗ್ನಲ್ ಜಂಪ್ ಆಗುತ್ತಿವೆ. ಇದರಿಂದ ಅಪಘಾತಗಳು ಹೆಚ್ಚಾಗುತ್ತಿವೆ. ಇದನ್ನು ತಡೆಯುವ ನಿಟ್ಟಿನಲ್ಲಿ ನಾಲ್ಕು ರಸ್ತೆಗಳು ಕೂಡುವ ಕಡೆಗಳಲ್ಲಿ ಮಾತ್ರ ಸಿಗ್ನಲ್ಸ್ ಅಳವಡಿಸಲಾಗುತ್ತಿದೆ ಎಂದರು.

ಕೊಲೆ, ದರೋಡೆ ಮಾತ್ರ ಅಪರಾಧಗಳಲ್ಲ. ಸಂಚಾರ ನಿಯಮ ಉಲ್ಲಂಘನೆಯೂ ಕೂಡಾ ಒಂದು ಬಗೆಯ ಅಪರಾಧವಾಗಿದೆ. 100 ರೂ., 200, 500 ರೂ., ಫೈನ್‌ಗಳನ್ನು ಲಘುವಾಗಿ ಪರಿಗಣಿಸಲಾಗುತ್ತಿದೆ. ಇದರಿಂದ ಮತ್ತೊಬ್ಬರ ಪ್ರಾಣಕ್ಕೆ ಕುತ್ತಾಗಬಹುದು. ಇದರ ಬಗ್ಗೆ ಅರಿವು ಮೂಡಿಸುವ ಕೆಲಸ ಮಾಡಲಾಗುತ್ತಿದೆ. ಸ್ವಯಂ ಪ್ರೇರಿತವಾಗಿ ಟ್ರಾಫಿಕ್ ನಿಯಮಗಳನ್ನು ಸಾರ್ವಜನಿಕರು ಪಾಲಿಸಬೇಕು. ಪ್ರತಿಯೊಬ್ಬರು ಪೊಲೀಸರೊಂದಿಗೆ ಸಹಕಾರ ನೀಡಬೇಕು ಎಂದು ಎಸಿಪಿ ಶಿವಶಂಕರ್ ಮನವಿ ಮಾಡಿದರು.

ಅಪಘಾತಗಳ ಹಾಟ್‌ಸ್ಪಾಟ್: ಮೈಸೂರಿನ ನಂಜುಮಳಿಗೆ ಸಮೀಪದ ಮಾನಂದವಾಡಿ ರಸ್ತೆ ಹಾಗೂ ಜೆಎಲ್‌ಬಿ ರಸ್ತೆ ಜಂಕ್ಷನ್ ಅಪಘಾತಗಳ ಹಾಟ್ ಸ್ಪಾಟ್ ಎಂದು ಗುರುತಿಸಲಾಗಿದೆ. ಇದರೊಂದಿಗೆ ಜನದಟ್ಟಣೆ ನಿರ್ವಹಿಸುವ ನಿಟ್ಟಿನಲ್ಲಿ ಏಕಲವ್ಯ ವೃತ್ತ, ಅಭಿಷೇಕ್ ವೃತ್ತ, ಹೈ ಟೆನ್ಷನ್ ಡಬಲ್ ರೋಡ್, ಬಿ.ಎಂ. ಹ್ಯಾಬಿಟೇಟ್ ಮಾಲ್ ಮುಂಭಾಗದ ಹುಣಸೂರು ಮೈಸೂರು ರಸ್ತೆ ಸೇರಿದಂತೆ 50 ಕಡೆಗಳಲ್ಲಿ ಸಿಗ್ನಲ್ ಅಳವಡಿಸಲಾಗಿದೆ.



> ಎಲ್ಲಿ ಅವಶ್ಯಕತೆಯಿದೆಯೋ ಅಲ್ಲಿ ಮಾತ್ರ ಸಿಗ್ನಲ್‌ಗಳ ಅಳವಡಿಕೆ ಮಾಡಬೇಕು. ಮೈಸೂರಿಗೆ ಇವತ್ತಿಗೆ ಆ ಮಟ್ಟದ ಸಿಗ್ನಲ್ ಅಳವಡಿಕೆ ಅವಶ್ಯಕತೆಯಿರಲಿಲ್ಲ. ಮೈಸೂರು ನಗರ ಹೊರಭಾಗದಲ್ಲಿ ಅಳವಡಿಸಲಾಗಿರುವ ಸಿಗ್ನಲ್‌ಗಳು ಅನಗತ್ಯವಾಗಿವೆ.
> - **ಶಿವಕುಮಾರ್**, ಮಾಜಿ ಮೇಯರ್

ವಾಹನ ದಟ್ಟಣೆ ನಿಯಂತ್ರಣಕ್ಕೆ ಕ್ರಮ: ಪ್ರವಾಸಿ ತಾಣ ಮೈಸೂರಿಗೆ ವಿವಿಧ ಜಿಲ್ಲೆ, ನೆರೆಯ ರಾಜ್ಯ ಹಾಗೂ ವಿದೇಶಗಳಿಂದ ಜನರು ಆಗಮಿಸುತ್ತಾರೆ. ಕೇವಲ ದಸರಾ ಸಂದರ್ಭದಲ್ಲಿ ಮಾತ್ರವಲ್ಲದೇ ವಾರಾಂತ್ಯದಲ್ಲಿ ಜನದಟ್ಟಣೆ ಹೆಚ್ಚಾಗುತ್ತಿದೆ. ಜೊತೆಗೆ ಸ್ಥಳೀಯ ಹಾಗೂ ಅಂತರರಾಜ್ಯ ಬಸ್‌ಗಳು, ಪಡಿತರ ಲಾರಿಗಳು, ಕಾರುಗಳು, ದ್ವಿಚಕ್ರ ವಾಹನಗಳು ಸೇರಿದಂತೆ ಪ್ರತಿದಿನ ಸಾವಿರಾರು ವಾಹನಗಳು ಸಂಚಾರ ನಡೆಸುತ್ತಿವೆ. ಸ್ಥಳೀಯರ ಸುಗಮ ಸಂಚಾರಕ್ಕಾಗಿ ವಾಹನ ದಟ್ಟಣೆ ನಿಯಂತ್ರಿಸಲು ಸಿಗ್ನಲ್ ಅಳವಡಿಸಲಾಗಿದೆ.

ಸ್ಮಾರ್ಟ್ ಸಿಗ್ನಲ್: ಮೈಸೂರು ನಗರದಲ್ಲಿ ಸ್ಮಾರ್ಟ್ ಸಂಚಾರ ಸಿಗ್ನಲ್ ವ್ಯವಸ್ಥೆಯನ್ನು ಅಳವಡಿಸಲಾಗುತ್ತಿದೆ. ಪಾದಚಾರಿಗಳ ಸುರಕ್ಷತೆ, ಶಾಲಾ–ಕಾಲೇಜುಗಳು, ಆಸ್ಪತ್ರೆಗಳು ಮತ್ತು ಮಾರುಕಟ್ಟೆ ಪ್ರದೇಶಗಳ ಬಳಿ ಪಾದಚಾರಿಗಳಿಗೆ ಅನುಕೂಲ ಮಾಡಿಕೊಡಲು, ಸಂಚಾರ ನಿಯಮ ಉಲ್ಲಂಘನೆ ಮಾಡುವವರನ್ನು ನಿಯಂತ್ರಿಸಲು ಈ ವ್ಯವಸ್ಥೆ ಮಾಡಲಾಗಿದೆ.

ಮಿಶ್ರಪ್ರತಿಕ್ರಿಯೆ: ಈ ಹೆಚ್ಚುವರಿ ಸಿಗ್ನಲ್‌ಗಳ ಬಗ್ಗೆ ಸಾರ್ವಜನಿಕ ವಲಯದಲ್ಲಿ ಮಿಶ್ರ ಅಭಿಪ್ರಾಯ ವ್ಯಕ್ತವಾಗಿದೆ. ಜನದಟ್ಟಣೆ ಕಡಿಮೆ ಇರುವ ಮೈಸೂರಿಗೆ ಅಷ್ಟೊಂದು ಸಿಗ್ನಲ್‌ಗಳು ಬೇಕಾಗಿರಲಿಲ್ಲ. ಇದರಿಂದ ಸುಗಮ ಸಂಚಾರಕ್ಕೆ ತೊಡಕಾಗಿದೆ ಎಂದು ಕೆಲವರು ಅಭಿಪ್ರಾಯಪಟ್ಟರೆ, ಮತ್ತೆ ಕೆಲವರು ಮುಂದಿನ ದಿನಗಳಲ್ಲಿ ವಾಹನ ದಟ್ಟಣೆ ಹೆಚ್ಚಾಗಲಿದ್ದು, ಪೊಲೀಸ್ ಇಲಾಖೆ ಸೂಕ್ತ ಕ್ರಮ ಕೈಗೊಂಡಿದೆ ಎಂದು ಅಭಿಪ್ರಾಯಿಸಿದ್ದಾರೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಪರಾಶಕ್ತಿ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
45 ಫೇಸ್ ದಿ ಇಯರ್ (ಕ)	3 ಪ್ರದರ್ಶನಗಳು
ಬಾಲಾಜಿ	(ದೂ: 2497199)
ತೇರಾ ಇಸ್ಕ್ ಮೈನ್ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
45 ಫೇಸ್ ದಿ ಇಯರ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ರಾಜಾ ಸಾಬ್ (ಕ)	2 ಪ್ರದರ್ಶನಗಳು
ರಾಜಕಮಲ್	
ಧುರಂದರ್ (ಹಿ)	4 ಪ್ರದರ್ಶನಗಳು
ಸಂಗಂ	
ಮಾರ್ಕ್ (ಕ)	4 ಪ್ರದರ್ಶನಗಳು
ಲಿಡೋ	
ಡೆವಿಲ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ರಾಜಾ ಸಾಬ್ (ಹಿಂ)	4 ಪ್ರದರ್ಶನಗಳು

ರೈಲ್ವೆ ನಿಲ್ದಾಣದ ಒಂದು ಕಿ.ಮೀ ಅಂತರ

ರೈಲು ಹಳಿಯ ಎರಡೂ ಬದಿಯಲ್ಲಿ ಸುರಕ್ಷತೆಗಾಗಿ ತಂತಿ ಬೇಲಿ ಅಳವಡಿಕೆ

ಮೈಸೂರು, ಜ. 9 (ಆರ್‌ಕೆ)– ನೈರುತ್ಯ ರೈಲ್ವೆಯು ಮೈಸೂರು ವಿಭಾಗ ವ್ಯಾಪ್ತಿಯಲ್ಲಿ ಬರುವ ಎಲ್ಲಾ ರೈಲು ಮಾರ್ಗಗಳ ಹಳಿಯ ಇಕ್ಕೆಲಗಳಲ್ಲಿ ತಂತಿ ಬೇಲಿ ಮತ್ತು ಬ್ಯಾರಿಕೇಡ್ ಅಳವಡಿಸುವ ಮೂಲಕ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳುತ್ತಿದೆ.

ಈಗ ಬಹುತೇಕ ಎಲ್ಲಾ ರೈಲುಗಳೂ ಗಂಟೆಗೆ 100 ಕಿಲೋ ಮೀಟರ್ ವೇಗದಲ್ಲಿ ಸಂಚರಿಸುತ್ತಿರುವುದರಿಂದ ಹಳಿ ಅಕ್ಕ–ಪಕ್ಕದಲ್ಲಿ ನಾನಾ ರೀತಿಯ ಜಾನುವಾರುಗಳು ಹಾಗೂ ಮನುಷ್ಯರು ನುಸುಳುವುದ ತಡೆಯಲು ತಂತಿ ಬೇಲಿ ಅಳವಡಿಸುವ ಕೆಲಸ ಕಳೆದ ಒಂದು ವಾರದಿಂದ ಮೈಸೂರು–ಬೆಂಗಳೂರು, ಮೈಸೂರು–ಚಾಮರಾಜನಗರ ಹಾಗೂ ಮೈಸೂರು–ಅರಸೀಕೆರೆ ಮಾರ್ಗಗಳಲ್ಲಿ ಆರಂಭವಾಗಿದೆ ಎಂದು ರೈಲ್ವೆ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ದೇವರಾಜೇಗೌಡ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ವೇಗವಾಗಿ ಚಲಿಸುವ ರೈಲುಗಳಿಗೆ ಹಠಾತ್ತನೆ ನಿಯಂತ್ರಿಸಲು ಈ ಕ್ರಮ. ಪ್ರಯಾಣಿಕರ ಸುರಕ್ಷತೆ ದೃಷ್ಟಿಯಿಂದಲೂ ಪ್ರಾಣಿಗಳು ಮತ್ತು ಮನುಷ್ಯರು ನುಸುಳಬಹುದಾದ ಸಾಧ್ಯತೆ ಇರುವೆಡೆ ಮೊದಲ ಹಂತದಲ್ಲಿ ಬ್ಯಾರಿಕೇಡ್ ಮತ್ತು ತಂತಿ ಬೇಲಿಯನ್ನು ಅಳವಡಿಸಲಾಗುತ್ತಿದೆ. ರೈಲ್ವೆ ನಿಲ್ದಾಣಗಳ ಸುಮಾರು 1 ಕಿ.ಮೀ. ಅಂತರದಲ್ಲಿ ಇಂತಹ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದರು.

ಮುಂದಿನ ದಿನಗಳಲ್ಲಿ ಅಗತ್ಯಕ್ಕೆ ತಕ್ಕಂತೆ ಮಾರ್ಗಗಳ ಇತರೆಡೆಯೂ ತಂತಿ ಬೇಲಿ ಅಳವಡಿಸಲು ಕ್ರಮಕೈಗೊಳ್ಳಲಾಗುವುದು. ಇದರಿಂದ ರೈಲು ನಿಲ್ದಾಣಗಳ ಬಳಿ ಎಲ್ಲೆಂದರಲ್ಲಿ ಹಳಿಗಳನ್ನು ದಾಟಿಕೊಂಡು ಫ್ಲಾಟ್ ಫಾರ್ಮ್‌ನತ್ತ ಬರುವ ಪ್ರಯಾಣಿಕರನ್ನು ಅಪಾಯದಿಂದ ಪಾರು ಮಾಡಬಹುದಾಗಿದೆ ಎಂದೂ ದೇವರಾಜೇಗೌಡ ತಿಳಿಸಿದರು.

ವಿವಿಧ ಮಹನೀಯರ ಜಯಂತಿ ಅರ್ಥಪೂರ್ಣ ಆಚರಣೆಗೆ ಎಡಿಸಿ ಸಲಹೆ

ಮೈಸೂರು, ಜ.9(ಎಂಕೆ)– ಶಿವಯೋಗಿ ಸಿದ್ದರಾಮ, ಮಹಾಯೋಗಿ ವೇಮನ, ಅಂಬಿಗರ ಚೌಡಯ್ಯ ಹಾಗೂ ಸವಿತಾ ಮಹರ್ಷಿ ಜಯಂತಿಗಳನ್ನು ಅರ್ಥಪೂರ್ಣವಾಗಿ ಆಚರಿಸುವ ಮೂಲಕ ಮಹನೀಯರ ಸಂದೇಶಗಳನ್ನು ಸಮಾಜಕ್ಕೆ ತಿಳಿಸುವಂತೆ ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ತಿಳಿಸಿದರು.

ಮೈಸೂರು ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ವಿವಿಧ ಮಹನೀಯರ ಜಯಂತಿ ಆಚರಣೆಯ ಪೂರ್ವಭಾವಿ ಸಭೆ ನಡೆಸಿದ ಅವರು, ಮೈಸೂರು ಕಲಾಮಂದಿರದ ಕಿರುರಂಗಮಂದಿರದಲ್ಲಿ ಜ.21 ರಂದು ಬೆಳಗ್ಗೆ 11 ಗಂಟೆಗೆ ಅಂಬಿಗರ ಚೌಡಯ್ಯ ಜಯಂತಿ, ಜ.31 ರಂದು ಬೆಳಗ್ಗೆ 11 ಗಂಟೆಗೆ ಮಹಾಯೋಗಿ ವೇಮನ ಹಾಗೂ ಫೆ.13 ರಂದು ಸವಿತಾ ಮಹರ್ಷಿ ಜಯಂತಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ತಿಳಿಸಿದರು.



ವಿವಿಧ ಮಹನೀಯರ ಜಯಂತಿ ಪೂರ್ವಭಾವಿ ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ಮಾತನಾಡಿದರು.

ಜಯಂತಿಯ ವೇದಿಕೆ ಕಾರ್ಯಕ್ರಮಕ್ಕೂ ಮುನ್ನ ಗೀತಗಾಯನ ಏರ್ಪಡಿಸುವುದು ಹಾಗೂ ಆಯಾ ಸಮುದಾಯದ ಮುಖಂಡರ ಸಲಹೆಯಂತೆ ದಿವ್ಯ ಸಾನಿಧ್ಯ ಹಾಗೂ ವಿಶೇಷ ಉಪನ್ಯಾಸ ನೀಡಲು ಸಂಪನ್ಮೂಲ ವ್ಯಕ್ತಿಗಳನ್ನು ಆಹ್ವಾನಿಸಬೇಕು. ಮಹನೀಯರನ್ನು ಕೇವಲ ಒಂದು ಸಮುದಾಯಕ್ಕೆ ಮೀಸಲಾಗಿಸದೆ ಎಲ್ಲಾ ಸಮುದಾಯದವರು ಸೇರಿ ಆಚರಿಸುವ ಮೂಲಕ ಮಹನೀಯರ ಸಂದೇಶಗಳನ್ನು ತಿಳಿಸುವ ಕೆಲಸವಾಗಬೇಕು ಎಂದರು.

ಗಣ್ಯರಿಗೆ ಮಹನೀಯರ ಜೀವನ ಚರಿತ್ರೆಯುಳ್ಳ ಪುಸ್ತಕಗಳನ್ನು ನೀಡುವ ಮೂಲಕ ಸ್ವಾಗತಿಸುವುದು, ಸ್ವಚ್ಛತೆ, ಕುಡಿಯುವ ನೀರು, ಶಾಮಿಯಾನ ಸೇರಿದಂತೆ ಇನ್ನಿತರ ವ್ಯವಸ್ಥೆಗಳು ಅಚ್ಚುಕಟ್ಟಾಗಿರಬೇಕು. ಯಾವುದೇ ಗೊಂದಲಗಳಿಗೆ ಅವಕಾಶ ನೀಡಬಾರದು. ಹಾಗೆಯೇ ಸಂಘಟಕರು ಶಾಲಾ–ಕಾಲೇಜು ಮಕ್ಕಳಿಗೆ ನೋಟ್ ಪುಸ್ತಕಗಳನ್ನು ನೀಡುವ ಮೂಲಕ ಪ್ರೋತ್ಸಾಹಿಸಬಹುದಾಗಿದೆ ಎಂದು ತಿಳಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ಮುಖಂಡರಾದ ವಿಜಯ್ ಕುಮಾರ್, ಪ್ರಶಾಂತ್, ವಾಮದೇವ, ಮಹೇಂದ್ರ ರೆಡ್ಡಿ, ಆರ್.ರವಿ, ಎಸ್.ಮಹದೇವಪ್ಪ, ಮಹಾಂತೇಶ್, ನಾಗೇಶ್, ಮಹೇಶ್ ಮತ್ತಿತರರಿದ್ದರು.

ಪರೀಕ್ಷಾ ಸಮಯ–2026 : ರೇಡಿಯೋ ಸರಣಿ ನೇರ ಫೋನ್–ಇನ್ ಕಾರ್ಯಕ್ರಮ

ಮೈಸೂರು, ಜ. 9– 2026ನೇ ಸಾಲಿನ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳ ಪರೀಕ್ಷಾ ಪೂರ್ವಸಿದ್ಧತೆ ಹಾಗೂ ಪರೀಕ್ಷೆ ಬರೆಯುವ ವಿಧಾನ ಕುರಿತು 'ಪರೀಕ್ಷಾ ಸಮಯ' ಶೀರ್ಷಿಕೆಯಡಿ ಜೆಎಸ್‌ಎಸ್ ರೇಡಿಯೋ 91.2ಎಫ್.ಎಂ. ಸಮುದಾಯ ಬಾನುಲಿ ಕೇಂದ್ರವು ಮೈಸೂರು ಜಿಲ್ಲೆಯ ಸಾರ್ವಜನಿಕ ಶಿಕ್ಷಣ ಇಲಾಖೆಯ ಸಹಭಾಗಿತ್ವದೊಂದಿಗೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಪೂರ್ವಸಿದ್ಧತೆ ಕುರಿತು ರೇಡಿಯೋ ಸರಣಿ ಕಾರ್ಯಕ್ರಮವನ್ನು ಆಯೋಜಿಸಿದೆ. ಅದರಂತೆ, ಈ ವರ್ಷವೂ ಆರು ವಿಷಯಗಳ ಕುರಿತು ಜ. 16 ರಿಂದ 20ರ ವರೆಗೆ ಪ್ರತಿ ಶುಕ್ರವಾರ ಬೆಳಗ್ಗೆ 11:30 ರಿಂದ 12:30ರವರೆಗೆ ತಜ್ಞ ಸಂಪನ್ಮೂಲ ವ್ಯಕ್ತಿಗಳ ಜೊತೆ ನೇರ ಫೋನ್–ಇನ್ ಕಾರ್ಯಕ್ರಮವನ್ನು ಆಯೋಜಿಸಿದೆ.

ವಿದ್ಯಾರ್ಥಿಗಳು ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಯಶಸ್ವಿ ಫಲಿತಾಂಶಕ್ಕಾಗಿ ಇದರ ಸದುಪಯೋಗ ಪಡೆದುಕೊಳ್ಳಬೇಕಾಗಿ ಕೋರಲಾಗಿದೆ. ಅಲ್ಲದೇ, ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳು, ಸಾಧಾರಣ ಕಲಿಕಾ ವಿದ್ಯಾರ್ಥಿಗಳು ಹಾಗೂ ಗರಿಷ್ಠ ಅಂಕಗಳನ್ನು ಪಡೆದುಕೊಳ್ಳುವ ವಿದ್ಯಾರ್ಥಿಗಳು ತಮ್ಮಲ್ಲಿ ಯಾವುದಾದರೂ ಗೊಂದಲಗಳು ಇದ್ದರೆ ಅಥವಾ ಪ್ರಶ್ನೆಗಳು ಇದ್ದಲ್ಲಿ, ಕರೆಮಾಡಿ ನೇರವಾಗಿ ತಜ್ಞರಿಂದ ಸಲಹೆಗಳನ್ನು ಪಡೆದುಕೊಳ್ಳಬಹುದಾಗಿದೆ. ಅದಕ್ಕಾಗಿ ನೀವು ಸಂಪರ್ಕಿಸಬಹುದಾದ ದೂರವಾಣಿ ಸಂಖ್ಯೆ: 8296725912, 0821–2546563.

ರಸ್ತೆ ಅಪಘಾತಗಳಿಂದ ದೇಶದ ಜಿಡಿಪಿಯಲ್ಲಿ ಶೇ.3ರಷ್ಟು ನಷ್ಟ

ಏರ್ ಆಂಬ್ಯುಲೆನ್ಸ್ ಸರ್ವಿಸಸ್ ಸಂಸ್ಥಾಪಕಿ ಡಾ.ಶಾಲಿನಿ ನಲ್ವಾಡ್ ಆತಂಕ

ಮೈಸೂರು, ಜ.9(ಜಿಎ)–ರಸ್ತೆ ಅಪಘಾತಗಳಿಂದ ದೇಶದ ಜಿಡಿಪಿಯಲ್ಲಿ ಶೇ.3ರಷ್ಟು ನಷ್ಟ ಆಗುತ್ತಿದೆ. ಅಂದರೆ 40 ಸಾವಿರ ಕೋಟಿಯಷ್ಟು ನಷ್ಟ ಆಗುತ್ತಿದೆ ಎಂದು ಏರ್ ಆಂಬ್ಯುಲೆನ್ಸ್ ಸರ್ವಿಸ್‌ನ ಸಂಸ್ಥಾಪಕರು ಹಾಗೂ ನಿರ್ದೇಶಕರೂ ಆದ ಡಾ.ಶಾಲಿನಿ ನಲ್ವಾಡ್ ತಿಳಿಸಿದರು.

ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವ್ಯವಸ್ಥಾಪನ ಮಂಡಳಿ ಸಭಾಂಗಣದಲ್ಲಿ ರಾಷ್ಟ್ರೀಯ ಐಕ್ಯತಾ ಸಪ್ತಾಹ ದಿನಾಚರಣೆಯ ಅಂಗವಾಗಿ ಆಯೋಜಿಸಲಾಗಿದ್ದ ಮಹಿಳಾ ದಿನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, 500 ಕೋಟಿಯಲ್ಲಿ ಸರ್ಕಾರ ಒಂದು ರಸ್ತೆ ನಿರ್ಮಾಣ ಮಾಡಿದರೆ ಅದೇ ರಸ್ತೆಯಲ್ಲಿ ಇಂದು 25 ಸಾವಿರ ಕೋಟಿಯಷ್ಟು ಬೆಲೆ ಬಾಳುವ ಜೀವಗಳು ಹೋಗುತ್ತಿವೆ. ಹೃದಯಾಘಾತದಿಂದ, ಕ್ಯಾನ್ಸರ್ ಸೇರಿದಂತೆ ಇತರ ಕಾರಣಗಳಿಂದ ಸಾಯುವವರ ಸಂಖ್ಯೆಯಷ್ಟೇ ಯುವಕರು ರಸ್ತೆ ಅಪಘಾತದಲ್ಲಿ ಸಾಯುತ್ತಿದ್ದಾರೆ. ಕೇಂದ್ರ ಸಚಿವ ನಿತಿನ್ ಗಡ್ಕರ್ ಅವರು ರಸ್ತೆ ಅಪಘಾತಗಳನ್ನು ಶೇ.50 ರಷ್ಟು ತಡೆಯುವ ಸಲುವಾಗಿ ಬ್ರೆಜಿಲಿಯಾ ಅಗ್ರಿಮೆಂಟ್‌ನಲ್ಲಿ 2020ರಲ್ಲಿಯೇ ಸಹಿ ಹಾಕಿದ್ದರು. ಆದರೆ ರಸ್ತೆ ಅಪಘಾತಗಳನ್ನು ಶೇ.0.5ರಷ್ಟು ಮಾತ್ರ ಕಡಿಮೆಯಾಯಿತು ಎಂದು ತಿಳಿಸಿದರು.



ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವ್ಯವಸ್ಥಾಪನ ಮಂಡಳಿ ಸಭಾಂಗಣದಲ್ಲಿ ರಾಷ್ಟ್ರೀಯ ಐಕ್ಯತಾ ಸಪ್ತಾಹ ದಿನಾಚರಣೆಯ ಅಂಗವಾಗಿ ಆಯೋಜಿಸಲಾಗಿದ್ದ ಮಹಿಳಾ ದಿನ ಕಾರ್ಯಕ್ರಮವನ್ನು ಏರ್ ಆಂಬ್ಯುಲೆನ್ಸ್ ಸರ್ವೀಸಸ್‌ನ ಸಂಸ್ಥಾಪಕಿ ಹಾಗೂ ನಿರ್ದೇಶಕರೂ ಆದ ಡಾ.ಶಾಲಿನಿ ನಲ್ವಾಡ್ ಉದ್ಘಾಟಿಸಿದರು.

ಒಳ್ಳೆಯ ರಸ್ತೆ, ವಾಹನಗಳಲ್ಲಿ ಯಾವುದೇ ಸ್ಪೀಡ್ ಲಿಮಿಟ್ ಇಲ್ಲ. 2020ರಲ್ಲಿ ಎಷ್ಟು ಜನ ಅಪಘಾತದಲ್ಲಿ ಸಾಯುತ್ತಿದ್ದರೋ ಅದಕ್ಕಿಂತಹ ಹೆಚ್ಚು ಮಂದಿ ಇಂದು ಸಾಯುತ್ತಿದ್ದಾರೆ. ಪ್ರಸ್ತುತ ನಮ್ಮ ದೇಶದಲ್ಲಿ ಹಾಗೂ ರಾಜ್ಯದಲ್ಲಿ ಪ್ರತಿ 4 ನಿಮಿಷಕ್ಕೊಂದು ಅಪಘಾತವಾಗುತ್ತಿದ್ದು, ಹೀಗಾಗಿ ಪ್ರತಿ ವರ್ಷ 1 ಲಕ್ಷಕ್ಕೂ ಹೆಚ್ಚು ಮಂದಿ ಸಾವನ್ನಪ್ಪುತ್ತಿದ್ದಾರೆ. ಅಪಘಾತಗಳಲ್ಲಿ ಉಳಿದವರಲ್ಲಿ ಎಷ್ಟು ಮಂದಿಗೆ ಶಾಶ್ವತ ಅಂಗವೈಕಲ್ಯ ಉಂಟಾಗುತ್ತಿದೆ ಎಂಬ ಸ್ಪಷ್ಟ ಅಂಕಿ ಅಂಶಗಳು ಸಿಗುತ್ತಿಲ್ಲ ಎಂದರು.

ಇಂಗ್ಲೆಂಡಿನಲ್ಲಿ ಆರೋಗ್ಯ ವ್ಯವಸ್ಥೆಯನ್ನು ಸಂಪೂರ್ಣ ಸರ್ಕಾರ ನಿರ್ವಹಿಸುತ್ತಿರುವ ಹಿನ್ನೆಲೆಯಲ್ಲಿ ಪ್ರಧಾನಿಯಿಂದ ಸಾಮಾನ್ಯ ಜನರವರೆಗೂ ಏಕರೂಪದ ಚಿಕಿತ್ಸೆ ದೊರೆಯುತ್ತದೆ ಎಂದರು.

ಪ್ರಸ್ತುತ ಸಂದರ್ಭದಲ್ಲಿ ಮಹಿಳೆಯರಲ್ಲಿ ನಾಯಕತ್ವ ಗುಣ ಹೆಚ್ಚು ಅಗತ್ಯವಾಗಿದ್ದು, ಅವರಲ್ಲಿ ನಾಯಕತ್ವ ಗುಣ ಬೆಳೆಸುವ ಜವಾಬ್ದಾರಿ ಸಮಾಜದ ಮೇಲಿದೆ. ಇಂದಿನ ದಿನಮಾನಗಳಲ್ಲಿ ಮಹಿಳೆಯರ ಜವಾಬ್ದಾರಿ ಹೆಚ್ಚಾಗುತ್ತಿದೆ. ಮನೆ, ಕೆಲಸ, ಮಕ್ಕಳ ಪಾಲನೆ ಹೀಗೆ ಹಲವಾರು ಜವಾಬ್ದಾರಿಗಳು ಮಹಿಳೆ ಮೇಲೆ ಇದೆ. ಇವುಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಲು ನಿತ್ಯ ಹೋರಾಟ ಮಾಡುತ್ತಿದ್ದು, ಇದರಿಂದ ಮಹಿಳೆ ಜೀವನದಲ್ಲಿ ಹಲವಾರು ಸವಾಲುಗಳು ಎದುರಾಗುತ್ತಿವೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕರಾಮುವಿಯ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ, ಕುಲಸಚಿವ ಪ್ರೊ.ಎಸ್.ಕೆ.ನವೀನ್ ಕುಮಾರ್, ಶೈಕ್ಷಣಿಕ ವಿಭಾಗದ ಡೀನ್ ಪ್ರೊ.ಎಂ.ರಾಮನಾಥಂ ನಾಯುಡು, ಕಾರ್ಯಕ್ರಮದ ಸಂಯೋಜನಾಧಿಕಾರಿ ಡಾ.ಡಿ.ಎನ್.ಭವ್ಯ, ಜೈನಹಳ್ಳಿ ಸತ್ಯನಾರಾಯಣ ಗೌಡ ಉಪಸ್ಥಿತರಿದ್ದರು.

'ನಿಜಮಹಾತ್ಮ ಬಾಬಾಸಾಹೇಬ' ನಾಟಕದ 25ನೇ ಪ್ರದರ್ಶನ

ದೇಶಕ್ಕೆ ಅಂಬೇಡ್ಕರ್ ಕೊಡುಗೆಗಳ ಜನಮನಕ್ಕೆ ತಲುಪಿಸುವುದು ಅವಶ್ಯ

ಮಾಜಿ ಶಾಸಕ ಬಿ.ಹರ್ಷವರ್ಧನ್ ಅಭಿಮತ





ಮೈಸೂರಿನ ಕಲಾಮಂದಿರ ಆವರಣದ ಕಿರುರಂಗಮಂದಿರದಲ್ಲಿ ಗುರುವಾರ 'ನಿಜಮಹಾತ್ಮ ಬಾಬಾಸಾಹೇಬ' ನಾಟಕದ 25ನೇ ಪ್ರದರ್ಶನ ನಡೆಯಿತು. ಪ್ರದರ್ಶನಕ್ಕೂ ಮುನ್ನ ಮಾಜಿ ಶಾಸಕ ಹರ್ಷವರ್ಧನ ಮಾತನಾಡಿದರು.

ಮೈಸೂರು,ಜ.9(ಪಿಎಂ)– ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಹೋರಾಟ ಹಾಗೂ ದೇಶಕ್ಕೆ ಅವರು ನೀಡಿದ ಕೊಡುಗೆಗಳ ಮಹತ್ವವನ್ನು ಜನಮನಕ್ಕೆ ತಲುಪಿಸುವುದು ಅಗತ್ಯವಾಗಿದ್ದು, ಇದಕ್ಕೆ ನಾಟಕ ಉತ್ತಮ ವೇದಿಕೆಯಾಗಿದೆ ಎಂದು ಮಾಜಿ ಶಾಸಕ ಬಿ.ಹರ್ಷವರ್ಧನ್ ಹೇಳಿದರು.

ಮೈಸೂರಿನ ಕಲಾಮಂದಿರ ಆವರಣದ ಕಿರುರಂಗಮಂದಿರದಲ್ಲಿ ಗುರುವಾರ ಹಮ್ಮಿಕೊಂಡಿದ್ದ ರಂಗಭೂಮಿ ಟ್ರಸ್ಟ್ ಕೊಡಗು ಪ್ರಸ್ತುತಿ ಹಾಗೂ ಮೈಸೂರು ರಂಗಾಯಣದ ಮಾಜಿ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ರಚನೆ ಮತ್ತು ನಿರ್ದೇಶನದ 'ನಿಜಮಹಾತ್ಮ ಬಾಬಾ ಸಾಹೇಬ' ನಾಟಕದ 25ನೇ ಪ್ರದರ್ಶನದ ಉದ್ಘಾಟನೆಯಲ್ಲಿ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

ಇಂದು ಬಾಬಾ ಸಾಹೇಬ್ ಅಂಬೇಡ್ಕರ್ ಅತ್ಯಂತ ಪ್ರಸ್ತುತರಾಗುತ್ತಾರೆ. ಅಂಬೇಡ್ಕರ್ ಅವರ ಕುರಿತಂತೆ ಬಿಜೆಪಿ ಮತ್ತು ಕಾಂಗ್ರೆಸ್ ತಮ್ಮದೇ ಆದ ರೀತಿಯಲ್ಲಿ ವಿಚಾರಗಳನ್ನು ಜನರ ಮುಂದಿಡುತ್ತಿವೆ ಈ ಸಂಬಂಧ ಎರಡೂ ಪಕ್ಷಗಳ ವಿಚಾರಗಳಲ್ಲಿ ಸಹ ಕೆಲವನ್ನು ಒಪ್ಪುತ್ತೇನೆ. ಮತ್ತೆ ಕೆಲವನ್ನು ಒಪ್ಪುವುದಿಲ್ಲ. ಅಂಬೇಡ್ಕರ್ ಅವರ ಕೊಡುಗೆ ಹಾಗೂ ಪರಿಶ್ರಮದ ಬಗ್ಗೆ ಸ್ವತಂತ್ರವಾಗಿ ತಿಳಿದುಕೊಂಡಿದ್ದೇನೆ ಎಂದರು.

ಆರ್‌ಎಸ್‌ಎಸ್ ಕಚೇರಿಗೆ ಭೇಟಿ ನೀಡಿದ್ದು ನಿಜ: ಅಡ್ಡಂಡ ಸಿ.ಕಾರ್ಯಪ್ಪನವರು ನಾಟಕದ ಮೂಲಕ ಬಾಬಾ ಸಾಹೇಬರ ವಿಚಾರಧಾರೆ ಅನಾವರಣ ಮಾಡುತ್ತಿದ್ದಾರೆ. ಬಹು ಮುಖ್ಯವಾಗಿ ಬಾಬಾ ಸಾಹೇಬ್ ಅಂಬೇಡ್ಕರ್ ಮತ್ತು ಆರ್‌ಎಸ್‌ಎಸ್ ನಡುವೆ ಇದ್ದ ಸಂಬಂಧವನ್ನು ತಮ್ಮ ನಾಟಕದಲ್ಲಿ ತಂದಿದ್ದಾರೆ. ಆರ್‌ಎಸ್‌ಎಸ್ ಕಚೇರಿಗೆ ಅಂಬೇಡ್ಕರ್ ಅವರು ಭೇಟಿ ನೀಡಿದ್ದು ನಿಜ. ಅಲ್ಲಿ ಹೋದಾಗ ಅಲ್ಲಿನ ವಾತಾವರಣ ನೋಡಿ ಅವರಿಗೆ ಅಚ್ಚರಿಯಾಯಿತು. ಅಸ್ಪೃಶ್ಯತೆ ಆಚರಣೆ, ಅಸಮಾನತೆ ಅಲ್ಲಿ ಇರಲಿಲ್ಲ ಎಂದು ತಿಳಿಸಿದರು.

ಭಾರತೀಕರಣ ವಿಚಾರಧಾರೆಯಡಿ ಆರ್‌ಎಸ್‌ಎಸ್ ದೇಶಭಿಮಾನ ಮೂಡಿಸುತ್ತಿದೆ. 'ಅಂಬೇಡ್ಕರ್, ಗಾಂಧಿ ಅಂಡ್ ಪಟೇಲ್; ದಿ ಮೇಕಿಂಗ್ ಆಫ್ ಇಂಡಿಯಾಸ್ ಎಲೆಕ್ಟೊರಲ್ ಸಿಸ್ಟಮ್' ಪುಸ್ತಕವನ್ನು ಇತ್ತೀಚೆಗೆ ಓದಿದೆ. ಪ್ರತಿಯೊಬ್ಬರಿಗೂ ಮತದಾನದ ಹಕ್ಕು ನೀಡಬೇಕೆಂದು ಅಂಬೇಡ್ಕರ್ ಪ್ರತಿಪಾದಿಸಿದರೆ, ಅದಕ್ಕೆ ಅಂದು ಸರ್ದಾರ್ ವಲ್ಲಭಭಾಯಿ ಪಟೇಲ್ ವಿರೋಧಿಸಿದ್ದರು. ಆದರೆ ಅಂಬೇಡ್ಕರ್ ಅವರು ಪಟ್ಟುಬಿಡಲಿಲ್ಲ. ಅಸ್ಪೃಶ್ಯತೆ ಹಿನ್ನೆಲೆಯಲ್ಲಿ ಶೋಷಣೆ, ದಬ್ಬಾಳಿಕೆ ಹಾಗೂ ನೋವುಂಡ ಅಂಬೇಡ್ಕರ್ ತಮ್ಮ ಬದುಕಿನ ಉದ್ದಕ್ಕೂ ಹೋರಾಟ ಮಾಡಿದ್ದಾರೆ. ವೈಯಕ್ತಿಕ ಬದುಕಿನಲ್ಲೂ ನೋವು ಅನುಭವಿಸಿದರೂ ಛಲ ಬಿಡದೇ ಗುರಿಯತ್ತ ಸಾಗಿದರು. ಅತ್ಯುತ್ತಮ ಸಂವಿಧಾನ ರಚಿಸಿ ಭಾರತೀಯರೆಲ್ಲರಿಗೂ ಮೂಲಭೂತ ಹಕ್ಕುಗಳನ್ನು ಕಲ್ಪಿಸಿದರು ಎಂದು ಸ್ಮರಿಸಿದರು.

ನಾಟಕದ ಬಗ್ಗೆ ಈಗ ಮಾತನಾಡುವುದಿಲ್ಲ. ನಾವು ನಾಟಕ ಕುರಿತು ಹತ್ತು ಜನರಿಗೆ ಹೇಳುವ ಮೊದಲು ನೋಡಬೇಕು. ನಾಟಕ ನೋಡಿದ ಬಳಿಕ ನನ್ನ ಅಭಿಪ್ರಾಯವನ್ನು ನೇರವಾಗಿ ಹೇಳುತ್ತೇನೆ ಎಂದರು. ಬಳಿಕ ನಾಟಕ ಪ್ರದರ್ಶನ ನಡೆಯಿತು. ಆದಿತ್ಯ ಅಧಿಕಾರಿ ಆಸ್ಪತ್ರೆಯ ಡಾ.ಚಂದ್ರಶೇಖರ್, ಅಡ್ಡಂಡ ಸಿ.ಕಾರ್ಯಪ್ಪ ಮತ್ತಿತರರು ಹಾಜರಿದ್ದರು.

ನಾಲ್ವರು ಸಾಧಕರಿಗೆ 'ರೋಟರಿ–ಕದಂಬ ರಂಗ ಪ್ರಶಸ್ತಿ–2026' ಪ್ರದಾನ



'ರೋಟರಿ–ಕದಂಬ ರಂಗ ಪ್ರಶಸ್ತಿ'ಯನ್ನು ಹಿರಿಯ ಸಾಹಿತಿ ಪ್ರೊ.ಕಾಳೇಗೌಡ ನಾಗವಾರ ಅವರು ವಿವಿಧ ಕ್ಷೇತ್ರದ ನಾಲ್ವರು ಸಾಧಕರಿಗೆ ಪ್ರದಾನ ಮಾಡಿದರು.

ಮೈಸೂರು, ಜ.9(ಎಸ್‌ಪಿಎನ್)– ವಿವಿಧ ಕ್ಷೇತ್ರದ ನಾಲ್ವರು ಸಾಧಕರಿಗೆ ಈ ಬಾರಿಯ 'ರೋಟರಿ –ಕದಂಬ ರಂಗ ಪ್ರಶಸ್ತಿ–2026 ಅನ್ನು ಹಿರಿಯ ಸಾಹಿತಿ ಪ್ರೊ.ಕಾಳೇಗೌಡ ನಾಗವಾರ ಶುಕ್ರವಾರ ಪ್ರದಾನ ಮಾಡಿದರು.

ಮೈಸೂರು ಜೆಎಲ್‌ಬಿ ರಸ್ತೆಯ ಎಂಜಿನಿಯರ್‌ಗಳ ಸಂಸ್ಥೆ ಸಭಾಂಗಣದಲ್ಲಿ ರೋಟರಿ ಮೈಸೂರು ಉತ್ತರ, ಕದಂಬ ರಂಗವೇದಿಕೆ ಸಹಯೋಗದೊಂದಿಗೆ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಹಿರಿಯ ರಂಗಕಲಾವಿದೆ ಹರಿಪ್ರಸಾದ್, ರಂಗಭೂಮಿ ಕಲಾವಿದರಾದ ಸುಬ್ಬನರಸಿಂಹ, ಕೃಷ್ಣ ಜನಮನ ದಿನೇಶ್ ಚಮ್ಮಾಳಿಗೆ ಅವರಿಗೆ ರೋಟರಿ–ಕದಂಬ 2026 ಪ್ರಶಸ್ತಿ ಪ್ರದಾನ ಮಾಡಿದರು.

ಬಳಿಕ ಮಾತನಾಡಿದ ಹಿರಿಯ ಸಾಹಿತಿ ಪ್ರೊ.ಕಾಳೇಗೌಡ ನಾಗವಾರ, ಹೊಸ ಸಮಾಜ ಕಟ್ಟುವ ಸಾಮೂಹಿಕ ಹೊಣೆಗಾರಿಕೆ ಕಟ್ಟುವ ಒಳ್ಳೆಯ ಪ್ರಯತ್ನಕ್ಕೆ ಸಂತೋಷವಾಗಿದೆ. ರಂಗಭೂಮಿ ಸಮಾಜಮುಖಿ ಕಲೆಯಾಗಿದ್ದು, ಕಲೆ ಮನುಷ್ಯನ ವ್ಯಕ್ತಿತ್ವವನ್ನು ರೂಪಿಸುತ್ತದೆ ಎಂದು ಹೇಳಿದರು.

ಕಳೆದ 40 ವರ್ಷದಿಂದ ಹವ್ಯಾಸಿ ರಂಗಭೂಮಿಯಲ್ಲಿ ಕೆಲಸ ಮಾಡುತ್ತಿರುವ ಹಿರಿಯ–ಕಿರಿಯ ಕಲಾವಿದರನ್ನು ಗುರುತಿಸುವ ಕೆಲಸವನ್ನು ಕದಂಬ ರಂಗವೇದಿಕೆ ಮಾಡುತ್ತಿದೆ. ಇದು ನಿಜಕ್ಕೂ ಶ್ಲಾಘನೀಯ ಎಂದ ಅವರು, ಕಲೆಯನ್ನು ಗುರುತಿಸುವ, ಉಳಿಸುವ ಕೆಲಸಕ್ಕೆ ಪ್ರತಿಯೊಬ್ಬರು ಕೈಜೋಡಿಸಬೇಕು ಎಂದು ಮನವಿ ಮಾಡಿದರು.

ಹಿರಿಯ ಕಲಾವಿದೆ ರಾಮೇಶ್ವರಿ ವರ್ಮಾ ಮಾತನಾಡಿ, ಸಾಧಕನಿಗೆ ಪ್ರಶಸ್ತಿಗಳು ಮುಖ್ಯ. ಆದರೆ ಅದು ನಮ್ಮವರಿಂದ, ನಮ್ಮ ಊರಿನವರಿಂದ ಸಿಕ್ಕಿದಾಗ ಸಿಗುವ ಸಂತೋಷವೇ ಬೇರೆ. ಏಕೆಂದರೆ ಅದಕ್ಕೆ ವಿಶೇಷವಾದ ಪ್ರಾಮುಖ್ಯತೆ ಹೊಂದಿರುತ್ತದೆ. ಕಳೆದ 40 ವರ್ಷಗಳಿಂದ ಹಿರಿಯ ರಂಗಕರ್ಮಿ ರಾಜಶೇಖರ ಕದಂಬ ಅವರ ಹವ್ಯಾಸಿ ರಂಗಭೂಮಿಯಲ್ಲಿ ತೊಡಗಿಸಿಕೊಂಡಿರುವ ಕಲಾವಿದರನ್ನು ಗುರುತಿಸಿ ಒಂದಿಲ್ಲೊಂದು ವೇದಿಕೆಯಲ್ಲಿ ಸನ್ಮಾನಿಸುತ್ತಿರುವುದು ಉತ್ತಮ ಬೆಳವಣಿಗೆ ಎಂದರು.

ರೋಟರಿ–ಕದಂಬ ರಂಗಪ್ರಶಸ್ತಿ ಸ್ವೀಕರಿಸಿದ ಹಿರಿಯ ಕಲಾವಿದೆ ಹರಿಪ್ರಸಾದ್ ಮಾತನಾಡಿ, ಶಾಲಾ–ಕಾಲೇಜು ಪಠ್ಯ ಪುಸ್ತಕಗಳಲ್ಲಿ ನಾಟಕಗಳನ್ನು ಪ್ರಕಟಿಸಬೇಕು. ಇದರಿಂದ ಕನ್ನಡ ರಂಗಭೂಮಿ ಉಳಿಸಬಹುದು ಎಂದು ಸಲಹೆ ನೀಡಿದರು.

ವೇದಿಕೆಯಲ್ಲಿ ನಿಯೋಜಿತ ಜಿಲ್ಲಾ ಗೌರ್ನರ್ ರೋ.ಯಶಸ್ವಿ ಸೋಮಶೇಖರ್, ರಂಗಸಮಾಜ ಸದಸ್ಯ ಸುರೇಶ್ ಬಾಬು, ಕದಂಬ ರಂಗ ವೇದಿಕೆ ಅಧ್ಯಕ್ಷ ರೊ.ರಾಜಶೇಖರ ಕದಂಬ, ಹಿರಿಯ ಕಲಾವಿದ ಅಶ್ವಥ್ ಕದಂಬ, ರೋಟರಿ ಮೈಸೂರು ಉತ್ತರ ಅಧ್ಯಕ್ಷ ರೊ.ಎಂ ಚಂದ್ರಶೇಖರ್, ವೃತ್ತಿರಂಗಭೂಮಿ ಕಲಾವಿದ ಬಿ.ಆರ್.ಶಿವಕುಮಾರ್ ಸೇರಿದಂತೆ ಮತ್ತಿತರರಿದ್ದರು.

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಕಂಡ ಷೆಡ್ಯೂಲ್ ಸ್ವತ್ತನ್ನು ನಮ್ಮ ಕಕ್ಷಿದಾರರಾದ ಎಂ.ವಿ. ಕುಗೇಶನ್ ರವರ ಇರಾದೆ ಮೇರೆಗೆ ನನ್ನ ಸಹೋದರಿಯಾದ ಎಂ.ವಿ. ಸುಭದ್ರದೇವಿ ರವರಿಗೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಈ ಕೆಳಕಂಡ ನಿವೇಶನ ಮಂಜೂರಾಗಿದ್ದು ಅವರು ದಿನಾಂಕ 04–03–2004 ರಂದು ಅವಿವಾಹಿತರಾಗಿ ಮರಣ ಹೊಂದಿರುತ್ತಾರೆ ಹಾಗೂ ನಮ್ಮ ತಂದೆ ವೀರ ರಾಘವ ಮೊದಲಿಯಾರ್ ರವರು ದಿನಾಂಕ 12–10–1952 ರಲ್ಲಿ ನನ್ನ ತಾಯಿ ಉನ್ನಾಮಲೈ ರವರು 14–09–1981 ರಂದು ನನ್ನ ಸಹೋದರ ಎಂ.ವಿ. ಕೃಷ್ಣರಾಜನ್ ರವರು 22–01–1987 ರಂದು ಮರಣ ಹೊಂದಿರುತ್ತಾರೆ. ನನ್ನ ಸಹೋದರನಾದ ಲೇಟ್. ಕೃಷ್ಣರಾಜನ್‌ಗೆ ಆತನ ಹೆಂಡತಿ ಚಿತ್ರಲೇಖ ಮತ್ತು ಮಕ್ಕಳು ಕೆ. ಸುರೇಶ್ ಕುಮಾರ್, ಕೆ. ಶರ್ಮಿಲಾ, ಕೆ. ಆರತಿ, ಕೆ. ದೀಪ ಎಂಬ ಮಕ್ಕಳಿರುತ್ತಾರೆ ಈಗ ಜೀವಂತ ಇರುವ ನಾವುಗಳು ಈ ಕೆಳಕಂಡ ಸ್ವತ್ತಿಗೆ ನಾವುಗಳೆ ವಾರಸುದಾರರು ಆಗಿರುತ್ತೇವೆ. ಷೆಡ್ಯೂಲ್ ಸ್ವತ್ತಿನ ಖಾತೆ ವರ್ಗಾವಣೆ ಮಾಡಿಸಿಕೊಳ್ಳುವವರು ನಾವುಗಳೆ ಆಗಿರುತ್ತೇವೆ. ಇದಕ್ಕೆ ಸಂಬಂಧಿಸಿದಂತೆ ಷೆಡ್ಯೂಲ್ ಸ್ವತ್ತಿನ ಮೂಲ ದಾಖಲೆಗಳಾದ 1)ಮಂಜೂರಾತಿ ಪತ್ರ 2) ಸ್ವಾಧೀನ ಪತ್ರ, 3) ಲೀಸ್ ಕಂ ಸೇಲ್ ದಾಖಲೆಗಳು ಉಪನೊಂದಣಾ ಕಛೇರಿ ಪಶ್ಚಿಮ ವಿಜಯನಗರದ ಬಳಿ ಇರುವ ಜೆರಾಕ್ಸ್ ಅಂಗಡಿಯಲ್ಲಿ ಜೆರಾಕ್ಸ್ ಮಾಡಿಸುವ ಸಂದರ್ಭದಲ್ಲಿ ಕಳೆದುಕೊಂಡಿರುತ್ತಾರೆ. ಆದುದರಿಂದ ಈ ಮೇಲ್ಕಂಡ ದಾಖಲೆಗಳು ಸಿಕ್ಕ ಕೂಡಲೇ ಈ ಕೆಳಗೆ ನಮೂದಿಸಿರುವ ವಿಳಾಸಕ್ಕೆ ತಲುಪಿಸಬೇಕೆಂದು ತಮ್ಮಲ್ಲಿ ಈ ಮೂಲಕ ಕೇಳಿಕೊಳ್ಳುತ್ತೇವೆ ಹಾಗೂ ಇದಕ್ಕೆ ಯಾವುದೇ ತಂಟೆ ತಕರಾರುಗಳು ದಾಖಲಾತಿಗಳು ಕ್ಲೈಮ್ ಗಳು ವ್ಯಾಜ್ಯಗಳು ಯಾವುದೇ ಹಕ್ಕು ಅಧಿಕಾರ ಯಾರಿಗಾದರೂ ಇದ್ದರೇ ಸೂಕ್ತ ದಾಖಲಾತಿಗಳೊಂದಿಗೆ ಈ ಪ್ರಕಟಣೆ ಮಾಡಿದ 15 ದಿನದ ಒಳಗಾಗಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಲು ತಿಳಿಯಪಡಿಸಲಾಗಿದೆ. ನಂತರದಲ್ಲಿ ಬಂದಂತಹ ಯಾವುದೇ ತಕರಾರುಗಳಿಗೆ ನಮ್ಮ ಕಕ್ಷಿದಾರರಿಗೆ ಅದು ಬದ್ಧ ಪಡಿಸುವುದಿಲ್ಲ ಎಂದು ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಸಿಟಿ, ಸಿದ್ದಾರ್ಥನಗರ, ನಜರ್‌ಬಾದ್ ಮೊಹಲ್ಲಾ, ಟಿ.ಎನ್.ಪುರ ರಸ್ತೆ, ಒಂದನೇ ಹಂತ, ನಿವೇಶನ ಸಂಖ್ಯೆ 249, ವಿಸ್ತೀರ್ಣ 40x60.6 ಅಡಿಗಳು.

ಸಹಿ/– ಅಭಿಜಿತ್ ಕೆ.ಕೆ
ವಕೀಲರು
ನಂ. 148, 11ನೇ ಕ್ರಾಸ್, 12ನೇ ಮೈನ್, ಸರಸ್ವತಿಪುರಂ, ಮೈಸೂರು – 570 009
ಮೊ:7022813428

ಸಹಿ/– ಎಂ.ವಿ. ಕುಗೇಶನ್
ಕಕ್ಷಿದಾರರ ಸಹಿ
ದಿನಾಂಕ: 04–01–2026, ಸ್ಥಳ : ಮೈಸೂರು

सीएसबी - केन्द्रीय रेशम उत्पादन अनुसंधान एवं प्रशिक्षण संस्थान
CSB - Central Sericultural Research & Training Institute
[केन्द्रीय रेशम बोर्ड - वस्त्र मंत्रालय - भारत सरकार] मानंदवाडी रोड, श्रीरामपुरा, मैसूर - 570 008
[Central Silk Board - Min. of Textiles – Govt. of India] Manandavadi Road, Srirampura Mysore – 570 008
संख्या सीएसबी/आरटीआई/एमपीएल/2025-26/ दि:Date: 09/01/2026

WALK-IN-INTERVIEW FOR THE POST OF PROJECT ASSISTANT

A Walk-in-Interview will be held on 28/01/2026 at CSB-Central Sericultural Research and Training Institute, Srirampura, Mysuru - 570 008 as shown below:

'A' 01 (One) "Evaluation of Nualgi Foliar and Soil Health formulations on mulberry yield parameters, leaf quality and its effects on silkworm" (Code: 2024-CSB-INC-32) for a period Up to September 2028 or completion of project whichever is earlier, under consultancy rules effective in CSB Terms and Conditions.

Qualifications for Project Assistant (PA):

i. Essential Qualifications: B.Sc in Sericulture/ Agriculture/ Botany/ Bio-chemistry/Chemistry /Biotechnology / Life Sciences with minimum 55% marks (50% for SC/ST candidates).

Desirable qualifications:

i. M.Sc. in Sericulture/ Botany/ Agriculture/ Life Sciences.

ii. Basic Computer working knowledge and wet lab experiments in Plant Physiology.

Walk in- Interview time 10:30 AM (candidates should reach the venue by 9:30 AM for verification of documents, other recruitment procedures).

Interested can also visit our website www.csrtimys.res.in, https://csb.gov.in/ for Details

Sd/- Director, CSR &TI, Mysuru

सीएसबी - केन्द्रीय रेशम उत्पादन अनुसंधान एवं प्रशिक्षण संस्थान
CSB - Central Sericultural Research & Training Institute
[केन्द्रीय रेशम बोर्ड - वस्त्र मंत्रालय - भारत सरकार] मानंदवाडी रोड, श्रीरामपुरा, मैसूर - 570 008
[Central Silk Board - Min. of Textiles – Govt. of India] Manandavadi Road, Srirampura Mysore – 570 008
संख्या सीएसबी/आरटीआई/एमपीएल/2025-26/ दि:Date: 09/01/2026

WALK-IN-INTERVIEW FOR THE POST OF JUNIOR RESEARCH FELLOW

A Walk-in-Interview will be held on 30/01/2026 at CSB-Central Sericultural Research and Training Institute, Srirampura, Mysuru-570 008 as shown below:

'A' 01 (One) "Development of lignocellulolytic microbial consortium for effective seri waste decomposition" (Code: PPS 01057 SIC)

for a period Up to Dec 2025 to July 2028 or completion of project whichever is earlier under CSB Terms and Conditions.

Qualifications for Junior Research Fellow (JRF):

i. M.Sc in relevant subject (Agriculture/Life Science).

Preference will be given to the candidates having higher qualification and/or work experience in soil Microbiology/ Agricultural Sciences/ Life sciences/ Sericulture.

Walk-in-Interview time 10:30 AM (candidates should reach the venue by 9:30 AM for verification of documents, other recruitment procedures).

Interested can also visit our website www.csrtimys.res.in, https://csb.gov.in/ for details.

Sd/- Director, CSR &TI, Mysuru